# PADYA SÁRA.

---

# ಪದ್ಯಸಾರ

---

PRINTED FOR THE DEPARTMENT OF PUBLIC INSTRUCTION,
MYSORE AND COORG.

---

SECOND EDITION,—5000 Copies.

---

BANGALORE:
MYSORE GOVERNMENT PRESS,
1872.

# PREFACE TO SECOND EDITION.

The *Padya Sára* contains progressively arranged selections from Kanarese poets, and was originally compiled for the use of Government schools in the Mysore. But it is suited to subserve the more general purpose of presenting within a small compass specimens of the standard poetical compositions of the Kanarese language. Thus, commencing with the plain *Dásara Pada* maxims, it leads on through the moral teachings of the *Jnána Sindhu* and *Anubhavámrita*, the scenes of the *Ramáyana* and *Mahá Bhárata*, and the Lingáyet literature of the *Basava Puránas*, to the representative poem of *Jaimini* and the highly imaginative descriptions of the *Rája Shékhara Vilása*. From a native point of view it has been deemed of sufficient merit to call forth a commentary, bearing the title of *Padya Sára Prakáshike.* In this edition the typographical arrangement has been made to conform to western models, which will doubtless be considered an improvement. The notes have also been carefully revised. No other change of importance has been made.

B. L. R.

BANGALORE, *December* 1871.

# CONTENTS.

## ವಿಷಯ ಸೂಚಿಕೆ.

# PADYA SÁRA.

# ಪದ್ಯ ಸಾರ.

## FOLLY.

## ಮೂರ್ಖತನವನ್ನು ಕುರಿತು.

ರಾಗ ಮುಖಾರಿ ॥ ಜಂಪೆತಾಳ.

ಮೂರ್ಖರಾದರು ಇವರು ಲೋಕದೊಳಗೆಲ್ಲಾ।
ಏಕದೈವವ ಬಿಟ್ಟು ಕಾಕು ದೈವವ ಭಜಿಸಿ ॥ಪಲ್ಲವಿ॥

ಬಂಟಿಯಲಿ ಹೆಂಡತಿಯು ಬಿಡುವಾತನೇ ಮೂರ್ಖ।
ನೆಂಟರಿಗೆ ಸಾಲವನು ಕೊಡುವಾತ ಮೂರ್ಖ॥
ಗಂಟನೊಬ್ಬರ ಕೈಯ್ಯಲಿಡುವಾತನೇ ಮೂರ್ಖ।
ತುಂಟನಾದವನು ತಾ ಕಡು ಮೂರ್ಖನೈಯ್ಯ॥ ॥೧॥

ಪಡೆದ ಮಗಳನು ಮಾರಿ ಯೊಡಲ ಹೊರೆದವ ಮೂರ್ಖ।
ಮಡದಿ ಹುಟ್ಟಿದ ಮನೆಯೊಳಿರುವಾತ ಮೂರ್ಖ॥
ಬಡತನವು ಬಂದಾಗ ಬೈದು ಕೊಂಬವ ಮೂರ್ಖ।
ದೃಢಬುದ್ಧಿ ಯಿಲ್ಲವವ ಕಡು ಮೂರ್ಖನೈಯ್ಯ॥ ॥೨॥

ಮುಪ್ಪಿನಲಿ ಹೆಂಡತಿಯ ಮಾಡಿಕೊಂಬವ ಮೂರ್ಖ।
ಸರ್ಪನೊಳು ಸರಸವಾಡುವನೆ ತಾ ಮೂರ್ಖ॥
ಇಪ್ಪತ್ತು ವೊಂದು ಕುಲ ವುದ್ಧರಿಸದವ ಮೂರ್ಖ।
ಅಪ್ಪವಿಠಲಾಯೆಂನದವ ಮೂರ್ಖನೈಯ್ಯ॥ ॥೩॥

ಸತ್ತಕರುವಿನ ತಾಯ ಹಾಲು ಕರೆವವ ಮೂರ್ಖ।
ಪ್ರೊತ್ತಿಯಿಲ್ಲದೆ ಸಾಲ ಕೊಡುವಾತ ಮೂರ್ಖ॥
ಹತ್ತೆಂಟು ಬಗೆಯಲ್ಲಿ ಹಂಬಲಿಸಿದವ ಮೂರ್ಖ।
ಹೆತ್ತ ತಾಯ್ಬೈಯ್ಯುವನು ಕಡು ಮೂರ್ಖನೈಯ್ಯ॥ ॥೪॥

ಉಂಡ ಮನೆಗೆರಡನ್ನು ಬಗೆವಾತನೇ ಮೂರ್ಖ ।
ಕೊಂಡೆಯವ ಹೇಳುತ್ತ ತಿರುಗುವನೆ ಮೂರ್ಖ ॥
ಪುಂಡರೀಕಾಕ್ಷ ಸಿರಿ ಪುರಂದರವಿಠಲನ ।
ಕಂಡು ಭಜಿಸದ ಮನುಜ ಕಡು ಮೂರ್ಖನೈಯ್ಯ ॥ ॥೫॥

---

## BEWARE OF ANXIETY.

## ಚಿಂತೆ ಪಡ ಬೇಡ.

ರಾಗ ಪೂರ್ವಿ॥ ರೂಪಕ ತಾಳ.

ಚಿಂತೆ ಯಾತಕೋ ಬಯಲ ಭ್ರಾಂತಿ ಯಾತಕೋ ।
ಕಂತು ಪಿತನ ದಿವ್ಯ ನಾಮ ಮಂತ್ರವಿರಲು ಜಪಿಸದೇ ॥ಪಲ್ಲವಿ॥

ಪ್ರೊಳ್ಳೆ ಉದಯ ಕಾಲದಲ್ಲಿ । ವ್ಯಾಳ್ಯ ವರಿತು ಕೂಗುವಂಥ ॥
ಕೋಳಿ ತನ್ನ ಮರಿಗಳಿಂಗೆ । ಹಾಲು ಕೊಟ್ಟು ಸಲಹುತಿಹುದೆ ॥೬॥

ಸಡಗರವಲಿ ನಾರಿಯರಿಗೆ । ಹಿಡಿದು ಸೂಲಗಿತ್ತಿ ಹೆರಿಸೆ ॥
ಅಡವಿಲಿರುವ ಮೃಗಕೆ ಮತ್ತೆ । ಹಿಡಿದು ಹೆರಿಸಿದವರು ಯಾರು ॥೭॥

ಘಟ್ಟಿ ಶಿಲೆಯ ಶಿಶುವ ಮಾಡಿ । ಹೊಟ್ಟೆ ಯೊಳಗೆ ಯಿರಿಸಲಿಲ್ಲ ॥
ಕೊಟ್ಟ ದೈವ ಕೊಂಡುಹೋದರೆ । ಕಟ್ಟಿಕೊಂಡು ಅಳುವದೇಕೆ ॥೮॥

ಹೆತ್ತ ತಾಯಿ ಬಿಟ್ಟು ಹೋಗೆ । ಮತ್ತೆಸಲಹಿರೆಂಬ ಜನರು ॥
ಹುತ್ತಿನೊಳಿರುವ ಹಾವನು । ಹೆತ್ತ ತಾಯಿ ಸಲಹುದೇ ॥ ॥೯॥

ನಂಬಿಕೆನು ಸಾಲದೆಂದು । ಹಂಬಲಿಸುತ್ತಿರುವ ಜನರು ॥
ನಂಬಿ ಪುರಂದರ ವಿಠಲ । ನೆಂಬ ವಚನ ನುಡಿದಮೇಲೆ ॥ ॥೧೦॥

---

## TAKE CARE.

## ಹೆಚ್ಚರಿಕೆಯಾಗಿರು.

ರಾಗ ಸೌರಾಷ್ಟ್ರ ॥ ಅಟತಾಳ.

ಹೆಚ್ಚರಿಕೆ ಭಾಗ್ಯ ಯಾರಿಗೂ ಸ್ಥಿರವಲ್ಲ ನಿಶ್ಚಯವೆಚ್ಚರಿಕೆ ।
ಹೆಚ್ಚದೆ ಹಿಗ್ಗದೆ ಇದ್ದರೆ ಲೋಕಕ್ಕೆ ಮೆಚ್ಚು ಕೇಳೆಚ್ಚರಿಕೆ ॥ಪಲ್ಲವಿ॥

ಧೊರೆಗಳೊಲುಮೆ ಉಂಟೆಂದೆಲ್ಲರೊಳೂ ಹಗೆ ತರವಲ್ಲ ಯೆಚ್ಚರಿಕೆ ।
ಕರವ ಮುಗಿದು ಸಜ್ಜನರಿಗೆ ಸಿರಬಾಗಿ ನಡವೋದು ಯೆಚ್ಚರಿಕೆ ॥೧॥
ಸಿರಿಯೆಂಬ ಸೊಡರಿಗೆ ಮಾನವ ಅಭಿಮಾನ ಬಿರುಗಾಳಿಯೆಚ್ಚರಿಕೆ ।
ಧರೆಯೊಳೆನಗೆ ಸುಸ್ಥಿರವೆಂದು ಗರ್ವದೊಳ್ನುಡಿಯದಿರೆಚ್ಚರಿಕೆ ॥೨॥
ಲೋಕಾಪವಾದಕ್ಕೆ ಅಂಜಿ ನಡವುದು ವಿವೇಕ ಕೇಳೆಚ್ಚರಿಕೆ ।
ನಾಕೇಶನಾದರೂ ಬಿಡದಪವಾದ ಪರಾಕು ಕೇಳೆಚ್ಚರಿಕೆ ॥ ॥೩॥
ಕಾಕು ಮನುಜರ ಚಾಡಿಯ ಕೇಳಿ ಕೋಪೋದ್ರೇಕ ಬೇಡೆಚ್ಚರಿಕೆ ।
ಭೂಕಾಂತ ನಡನಡುಗುವಳು ನಿಷ್ಠುರದ ವಾಕು ಬೇಡೆಚ್ಚರಿಕೆ ॥೪॥
ನಳಮಾಂಧಾತರೇನಾದರೆಂಬುದ ನೀ ತಿಳಿದು ನೋಡೆಚ್ಚರಿಕೆ ।
ಅಳಿವುದು ಕಾಯವು ಉಳಿವುದಲ್ಲದೆ ಕೀರ್ತಿ ಯಿಳೆಯೊಳು ಎಚ್ಚರಿಕೆ ॥೫॥
ಆಳಳಿಸಿ ಪರರನ್ನ ಘಳಿಸಿದಂಥಾ ಹೊನ್ನು ಉಳಿಯದು ಯೆಚ್ಚರಿಕೆ ।
ಉಳಿವಲ್ಪ ಕಾಲಕ್ಕೆ ಬಡವರಾದವರನ್ನು ಪಳಿಯದಿರೆಚ್ಚರಿಕೆ ॥ ॥೬॥
ಪರಧನ ಪರಪತ್ನಿಗಳಿಗಳುಕಲು ಸಿರಿಮೊಗತಿರುಗುವಳೆಚ ರಿಕೆ ।
ಬರುವ ಹಾನಿ ವೃದ್ಧಿ ತನ್ನ ಕಾಲ ವಿಚಾರಲರಿಯದು ಯೆಚ್ಚರಿಕೆ ॥೭॥
ಬಲ್ಲಿದ ನೀನೆಂದು ಬಡವರ ಬಾಯನ್ನು ಹೊಯ್ಯ ಬೇಡೆಚ್ಚರಿಕೆ ।
ಪಳ್ಳಷ್ಟು ತಪ್ಪಲು ಯಮನೋರು ನರಕಕ್ಕೆಳದೊಯ್ವರೆಚ್ಚರಿಕೆ ॥೮॥
ವರಛಿದ್ರ ಕುಂಭದ ಉದಕದಂತಾಯುಷ್ಯ ಸರಿಯುತ್ತಿದೆಚ್ಚರಿಕೆ ।
ವರದ ಪುರಂದರ ವಿಠಲನ ಸ್ಮರಣೆಯ ಮರಿಯಬೇಡೆಚ್ಚರಿಕೆ ॥೯॥

## EVIL DESIRE.

## ಆಶೆಯು ಕೆಟ್ಟದ್ದು.

ರಾಗ ಮುಖಾರಿ॥ ಝಂಪೆ ತಾಳ

ಆಶೆ ಯೆಂಬುವ ಪಾಶ ಬಿಡದು ಮನುಜರಿಗೆ।
ಯೇಸು ಭಾಗ್ಯಂಗಳಿರ್ದರೆಯು ಮತ್ತು ॥ಪಲ್ಲವಿ॥

ವೃದ್ಧಾಪ್ಯದಿಂ ಜರೆ ನರೆಯು ಬಾಧಿಸಿದಾಗ್ಯು ।
ರುದ್ಧ ಬಂದೆರಡು ದಂತಗಳಿಲ್ಲದೆ॥
ಶುದ್ಧ ಸಿತಕೇಶಂಗಳಾಗಿ ಸ್ವತಂತ್ರವಪ।
ಬುದ್ಧಿ ಲೇಶಾಂಶ ವಿಲ್ಲದೆ ಯಿದ್ದವರಿಗೂ। ||೧||

ಉದಯ ಮಧ್ಯಾಹ್ನ ಸಾಯಂ ತ್ರಿಕಾಲಕರ್ಮ।
ವೊದಲಾದ ವಿನಿತು ವೊಡನೊಡನೆ ತೋರಿ।
ಮುದದಿ ಕಾಲಕ್ರೀಡೆ ಯನುದು ತತ್ವಂಗಡ ।
ವೊದಗಿದಾಯುಷ್ಯ ನೀಗಿ ಹೋಹುದ ನರಿತು॥ ||೨||

ಅಂತು ವಂತಿಂತು ಮಾಯದಿ ಮೋಹಿತದಿ ಮರು।
ಚಿಂತಿಸುತ ನಿತ್ಯದುಃಖಿಪರಲ್ಲದೆ॥
ಅಂತಸ್ಥನಾದ ನಿತ್ಯಾತ್ಮನ ಬಿಡದೆಯೇ ।
ಶಾಂತದಲಿ ನೆನೆದು ಸಂತೋಷಿಪ ರಿಲ್ಲದೆ। ||೩||

---

## VANITIES.

## ವ್ಯರ್ಥವಾದ ಕೆಲಸಗಳು.

ರಾಗ ಮುಖಾರಿ ॥ ಜಂಪೆ ತಾಳ.

ಮಾನಹೀನನಿಗಭಿಮಾನವೇಕೆ।
ಜ್ಞಾನವಿಲ್ಲದವಂಗೆ ಗುರುಬೋಧೆಯಾಕೆ ॥ಪಲ್ಲವಿ॥

ಅಂಬಲಿಯ ನುಂಬುವಗೆ ಯನ್ನಪಾನ್ನ ಕೊಡಲೇಕೆ ।
ಕಂಬಳಿಯ ಹೊದುವವಗೆ ಮುಖಮಲಿಯಾತಕೆ।
ಡಾಂಭಿಕನು ಯೆನಿಸುವಗೆ ಗಂಭೀರತನವೇಕೆ ।
ಹಂಬಲಿಸುವವನ ಜೀವನವು ತಾನೇಕೆ । ||೧||

ಭೂಸುರರ ಕೊಲುವವಗೆ ದಾನಧರ್ಮಗಳೇಕೆ ।
ಭಾಷೆಗೆಡಕನಿಗೆ ನಂಬಿಗೆ ಯಾತಕೆ ॥
ಕ್ಲೇಶಪೊಡಲೊಳಗಿರಲು ತೀರ್ಥಯಾತ್ರೆಗಳೇಕೆ ।
ಆಶೆಬಿಡದಿರ್ದವಗೆ ಸನ್ಯಾಸವೇಕೆ ॥ ॥೧೪॥

ಕಾಡಿನಲಿ ತಿರುಗುವಗೆ ಕನಕಭೂಷಣವೇಕೆ ।
ಪ್ರೌಢಿನಲ್ಲಿ ಉಂಬಪರಿವಾಣವೇಕೆ ॥
ಬೇಡಿದರೆ ಕೊಡದಲೋಭಿಗೆ ಬಿಂಕತನವೇಕೆ ।
ಪಾಡದಾಸರಸರಿಗೆ ಜಾಣತನವೇಕೆ ॥ ॥೧೫॥

ಕ್ಷಿತಿಯೊಳಗೆ ಸತಿಯರಾಳದವಂಗೆ ಸುತರೇಕೆ ।
ಸತಿಗಳಕುವಗೆ ಮೋಡಿ ತಾನೇತಕೆ ॥
ಮಿತವರಿತು ನಡೆವವಗೆ ಮಂತ್ರ ತಂತ್ರಗಳೇಕೆ ।
ಸುತರಿಲ್ಲದವಗೆ ಪುಣ್ಯಾತ್ಮತಾನೇಕೆ ॥ ॥೧೬॥

ಆಳು ಯಿಲ್ಲದವಂಗೆ ಅರಸುತನ ತಾನೇಕೆ ।
ಕಾಳು ಯಿಲ್ಲದವಂಗೆ ಕೃಷಿಯಾತಕೆ ॥
ತೋಳುಯಿಲ್ಲದವಂಗೆ ಭುಜಕೀರ್ತಿತಾನೇಕೆ ।
ಲೋಲಪುರಂದರ ವಿಠಲನದವನೇಕೆ ॥ ॥೧೭॥

---

## IMPOSSIBILITIES.

## ಸಲ್ಲದ ಕೆಲಸಗಳು.

ರಾಗ ತೋಡಿ ॥ ಜಂಪೆ ತಾಳ.

ಬಲ್ಲರೊಳು ಸಲ್ಲದೈ ಬುಲ್ಲ ಮಾತುಗಳು ।
ನಿಲ್ಲದಾಯುಷ್ಯಕೀರ್ತಿ ಯಿಲ್ಲರೊಳು ಕೇಳು ॥ಪಲ್ಲ॰॥

ಅರಸು ಸಣ್ಣವನೆಂದು ಸರಸ ಮಾಡಲು ಸಲ್ಲ ।
ಕೆರಳಿ ಕೇಳದವಮಾತು ಆಡಸಲ್ಲ ॥
ಪರಸತಿಯು ಮನೆಯೊಳಗೆ ಯಿರಿಸಿಕೊಂಡಿರಸಲ್ಲ ।
ಬೆರಸಿ ಬಹುಪಾತಕನೆ ಅರಸುವಡೆಸಲ್ಲ ॥ ॥೧೮॥

ಹಗಲು ಕಳ್ಳನ ಕೈಯು ಜಗಳವಾಡಲುಸಲ್ಲ ।
ಹಗೆಯೊಡನೆ ಸ್ನೇಹವನು ಮಾಡಸಲ್ಲ ॥
ಜಗಳ ಗಂಟಿಕ್ಕುವನ ಮೊಗದೊಳಗೆ ನಗೆಯಿಲ್ಲ ।
ಆಗಲಿ ಪೋಗುವೆನೆಂಬ ಮಗನ ಸೊಗಸಿಲ್ಲ ॥ ॥೧೯॥

ಒಡೆಯ ನಿಲ್ಲದ ಊರು ಬಡವರಿಗೆ ಅಳವಲ್ಲ ।
ಕಡುಚೆಲ್ವೆಕುರುಡನಿಗೆ ಮಡದಿಯುಹಸಲ್ಲ ॥
ನುಡಿಯ ತಿಳಿಯದೆ ಯಿಹನ ಸಾಕ್ಷಿಯನು ಯಿಡಸಲ್ಲ ।
ದೃಢವಾದ ಮೂರ್ಖನೊಳು ಕಡನ ಮಾತಿಲ್ಲ ॥ ॥೨೦॥

ಪೇಧಾಸರೆನಿಸಿದರೆ ಪರಗತಿಯೊಳೆರವಿಲ್ಲ ।
ಗುರುಹಿರಿಯರಾದವರ ಜರೆಯಸಲ್ಲ ॥
ಕರಕರೆಯ ಬದುಕಿನೊಳು ಬರುವ ಉಡುಗೊರೆ ಯಿಲ್ಲ ।
ಮರವಿನೊಳು ಹಗೆಯುರಗ ಗೆಲುವ ಪರಿಸಲ್ಲ ॥ ॥೨೧॥

ಹರಿಯು ಮುನಿದರೆ ಮರೆಯೊಳಿರಿಸಿ ಕೊಂಬವರಿಲ್ಲ ।
ಹರಿಯೊಲಿದ ನರನೊಳಗೆ ಗೆಲುವ ಪರಿ ಯಿಲ್ಲ ॥
ಸಿರಿಯರಸ ವರಹ ತಿಮ್ಮಪ್ಪ ನಿರವನು ಬಲ್ಲ ।
ನರನು ಹರಿದೂಷಕರ ಸರಿಸದಲಿ ನಿಲ್ಲ ॥ ॥೨೨॥

---

## WEALTH.

## ದ್ರವ್ಯ ವರ್ಣನೆ.

ರಾಗ ಕಲ್ಯಾಣಿ ॥ ಅಟ ತಾಳ.

ಧನವು ಇದ್ದರೆ ಸಾಕು ಜನರಿಗೆ ।
ಧನವು ಇದ್ದರೆ ಸಾಕು ॥
ಧನದೋರದಾತಗೆ ಗುಣವಿಲ್ಲವನುದಿನ ।
ಧನವಿಲ್ಲದಾತನು ವನದಪಾಮರನು ॥ಪಲ್ಲವಿ॥

ತಂದೆ ತಾಯಿಗಳಿಲ್ಲ ಬಂಧು ಬಾಂಧವರಿಲ್ಲ ।
ಹಿಂದು ಮುಂದುದಿಸಿದ ತಮ್ಮಂದಿರನೊಲ್ಲ ॥ ॥೨೩॥

ಒಡನೆಯುಳ್ಳಾತಗೆ ನಡೆಯು ಬಾರದು ಕಾಲು ।
ನಡೆವಾಗ ಬಡವರ ಯೆಡವೃತ್ತ ಕಾಣನು ॥ ॥೩೪॥

ಅರ್ಥದ ಪುಂಜಕನರ್ಥಯಥಾರ್ಥವು ।
ಧೂರ್ತನಾದರು ತಾನು ಕೀರ್ತಿಸಿಕೊಂಬನು ॥ ॥೩೫॥

ಸೆಡವೆಂಬ ಪುತ್ರನು ಪ್ರೊಡಲೊಳು ಜನಿಸುವ ।
ಮಡದಿ ಗರ್ವಿತೆಯಾಗಿ ಪಿಡಿವಳು ಕೆರವನ್ನು ॥ ॥೩೬॥

ಉತ್ತಮೋತ್ತಮನಾಗಿ ಅಧಮನುತ್ತಮನಪ್ಪ ।
ಮೃತ್ಯು ಮಾಸಿನಿ ವ್ಯರ್ಥ ಮಗನ ಪಡೆಯುವಳು ॥ ॥೩೭॥

ಉಡಿಗೆಯಾ ಭರಣಕ್ಕೆ ನುಡಿಯು ಬಾರದು ಬಾಯಿ ।
ಕಿಡಿಯಿಡೆ ಕಂಗಳು ಜಡದ ಕರ್ನಗಳು ॥ ॥೩೮॥

ಕಟ್ಟಲು ಅರ್ಥವ ಹೊಟ್ಟೆಯೊಳ್ಗ ಶುವಿಲ್ಲ ।
ಭ್ರಷ್ಟ ಅನಾಥರ ಶ್ರೇಷ್ಠ ಸೃಷ್ಟಿಯೊಳಾತ ॥ ॥೩೯॥

ಬಡಮನಸಾಗಿಯೆ ನುಡಿಯು ಬಂದವನೊಳು ।
ಸಡಗರದಿಂದಲೆ ಸೆಡಕ ತೋರುವನು ॥ ॥೪೦॥

ಅರಸು ಆತನ ಕಂಡು ಕರೆಸಿ ಯುಚಿತವನಿತ್ತು ।
ಸರಸವನಾಡಿ ವಿಹರಿಸುತ್ತಲಿಹನು ॥ ॥೪೧॥

ಫಣಿಗಿರಿಯೊಳು ನಿಂತ ವರದ ತಿಮ್ಮಪ್ಪನು ।
ಹಣವನಿತ್ತವರಿಗೆ ಉಣಿಸುವಭೀಷ್ಟವ ॥ ॥೪೨॥

## THE WEALTH OF THE MISER.

## ಲೋಭಿಯ ದ್ರವ್ಯ.

ರಾಗ ಆನಂದ ಭೈರವಿ ॥ ಆದಿ ತಾಳ.

ಇದ್ದರೇನು ಇಲ್ಲದಿದ್ದರೇನು । ಶುದ್ಧವಾದ ಲೋಭಿಯೊಳು
ಬದ್ಧವಾದ ದ್ರವ್ಯಗಳು । ಇದ್ದರೇನು ಇಲ್ಲದಿದ್ದರೇನು ॥ಪಲ್ಲವಿ॥

ಚಿಂತಿಸಿ ಬಹಳ ಯೇಕಾಂತ। ದೊಳಗೆ ಯಿರಿಸಿ ಯಿರಿಸಿ ॥
ಸಂತತ ಅದನೋಡಿ ನೋಡಿ ಭ್ರಾಂತಿ ಪಡುವ ಮನುಜನೊಳು ॥೧॥

ಇಕ್ಕದೆ ಯೆರೆಯದೆ ಮುಂದೆ । ಮಕ್ಕಳಿಗೆ ಶಿಕ್ಕದ ಹಾಗೆ ॥
ಬೆಕ್ಕು ಮಂಣ ಕೆದರಿ ತನ್ನ । ಯಿಕ್ಕೆಯನ್ನು ಯಿರಿಸಿದಂತೆ ॥ ||೪೪||

ಧರ್ಮ ರಹಿತವಾದ ಧನವು । ಮರ್ಮ ಪಿಡಿದು ಮದದೊಳಗೆದು ॥
ಷ್ಕರ್ಮವನ್ನು ಯಸಗಿ ಮನೆಯ । ನಿರ್ಮೂಲನ ಮಾಳ್ಪ ಬಗೆಯ ||೪೫||

ಕಷ್ಟವನ್ನು ಕಟ್ಟಿಕೊಳುತ । ನಿಷ್ಠುರವ ನುಡಿದು ಗೇಣು ॥
ಹೊಟ್ಟೆಗಾಗಿ ಪರರಕೈಯ್ಯ । ದುಷ್ಟನೀತ ನೆನಸಿಕೊಂಡು ॥ ||೪೬||

ಕಾಣಿಕೆ ಕಪ್ಪವಸಿತ್ತು । ಪ್ರಾಣನಾಥನೆಂದು ತಿಳಿದು ॥
ಜಾಣವಿರಹ ತಿಮ್ಮಪ್ಪನ । ಕಾಣದಿರುವ ಮಾನವನು ॥ ||೪೭||

---

## BAD COMPANY.

### ದು ರ್ಜ ನ ರ ಸ ಹ ವಾ ಸ.

ರಾಗ ಕಲ್ಯಾಣಿ ॥ ಝಂಪೆ ತಾಳ.

ದುರ್ಜನರ ಸಂಗವನು ತ್ಯಜಿಸು ಮನವೇ ಸಾಧು॥
ಸಜ್ಜನರ ಸಂಗವನು ಭಜಿಸಿ ಸುಖಿಯಾಗೆಲವೊ ||ಪಲ್ಲವಿ||

ದುಷ್ಟ ವ್ಯಾಘ್ರನ ಕೈಯ್ಯ ಮುಟ್ಟಿ ಹಿಡಿತರಬಹುದು ।
ಅಟ್ಟಿಬಹ ಮದಕರಿಯ ಕಟ್ಟ ಬಹುದು ॥
ಕೃಷ್ಣ ಸರ್ಪನ ಹುತ್ತ ಕಲಕಿ ಜೀವಿಸ ಬಹುದು ।
ದುಷ್ಟಾತ್ಮರಾದವರ ಬಿಟ್ಟುಕಳಿ ಮನವೆ ॥ ||೪೮||

ಚೇಳ ಬಾಲದ ಉರಿಯು ಜ್ವಾಲೆ ತಾಳಲು ಬಹುದು ।
ಕಾಲಮೇಘದ ಶಿಡಿಲು ಬೀಳ ಬಹುದು ॥
ಶೂಲಪಾಣಿಯ ಫಣೆಯ ಆಲಿ ಕೀಳಲು ಬಹುದು ।
ಕಾಳುಮೂಳರ ಸಂಗ ಮರೆದು ಕಳೆಮನವೆ ॥ ||೪೯||

ಪರಿವ ಗರಗಸದಲ್ಲಿ ಶಿರವ ನೊಡ್ಡಲು ಬಹುದು ।
ಜೆರಸಿ ಬಹ ಕಾಡ್ಗಿಚ್ಚ ಧರಿಸ ಬಹುದು ॥
ಸರಿಸದಲಿ ನಿಂತು ಕೇಸರಿಯ ಕೆಣಕಲು ಬಹುದು ।
ಮರಸಿ ಕೊರಳನು ಕೊಯ್ವನರರ ಮರೆ ಮನವೆ ॥ ॥೫೦॥

ಒಂದು ಜಾತಿಗೆ ವಿಷವು ಪುಚ್ಛದೊಳಗಿರಲು ಮ।
ತ್ತೊಂದು ಜಾತಿಗೆ ದಂತ ದೊಳಗೆವಿಷವು ॥
ಒಂದು ಜಾತಿಗೆ ಮೈಯು ಅಂಗವೆಲ್ಲವು ವಿಷವು ।
ಹಿಂದೆ ಯಾಡುವನುಡಿಯು ಘೋರವಿಷ ಮನವೆ ॥ ॥೫೧॥

ತೇರಕಂಡರೆ ತೊಲಗು ಮಾರ್ಕೈದನಾಕ್ಷಣದಿ ।
ಮಾರುವಗೆ ಕಪಸಾರು ಕಾರ್ಯವ ಮಾಡುವನು ॥
ದಾರಿಯನು ಬಿಡುಗಜಕೆ ಮೂರು ಸಾವಿರವನ್ನು ।
ಊರಬಿಡು ದುರ್ಜನರ ಸೇರದಿರು ಮನವೆ ॥ ॥೫೨॥

ಸತ್ಯವಂತರ ಕಂಡ ಗರ್ಭಯಿಂದಲೆ ಯೆರಗು ।
ನಿತ್ಯದೊಳು ಶ್ರೀಪತಿಯ ಕೀರ್ತನೆಯ ಮಾಡು ॥
ಉತ್ತಮೋತ್ತಮ ಪದವ ಹತ್ತಿಸುವವರ ಬೇಡು ।
ಧೂರ್ತಮನುಜರಸಂಗ ಕಿತ್ತುಕಳೆ ಮನವೆ ॥ ॥೫೩॥

ಶುದ್ಧ ಮನವೇಯೆನ್ನ ಬುದ್ಧಿಯೊಳಗಡಗಿರ್ದು ।
ಉದ್ಧರಿಸು ವಾರಾಹತಿಮ್ಮಪ್ಪನನು ನೆನೆದು ॥
ಮದ್ದನರ ಜನ್ಮದೊಳು ಮರಳಿ ಬಾರದ ಹಾಗೆ ।
ಗದ್ದುಗೆಯ ಹಾಯ್ಕೆನ್ನ ಹೃದಯ ಮಧ್ಯದಲಿ ॥ ॥೫೪॥

---

## RICHES ACQUIRED BY LABOUR.

## ಕಷ್ಟಾರ್ಜಿತ ಧನ.

ರಾಗ ಮಧ್ಯಮಾವತಿ॥ ಜಂಪೆ ತಾಳ.

ತನ್ನ ಕಷ್ಟದಿ ತನಗೆ ದೊರಕುವದುಹಾಗ।
ಉನ್ನಂತ ಭಾಗ್ಯಗಳು ಹರಿಯ ವಿನಿಯೋಗ ॥ಪಲ್ಲವಿ॥

ಕಟ್ಟಿಗೆಯ ಹೊರೆತಂದು ಪಟ್ಟಣದೊಳಳುಹಿದರು।
ಉಟ್ಟುಬಹಿರ್ವಾಸವನು ಪೊಗದಿಟ್ಟರು॥
ಮೊಟ್ಟೆಯನು ಕೊಂಡೊಯ್ದು ಯಿಟ್ಟದನ ಮಾರಿದರು।
ಹೊಟ್ಟೆತುಂಬಿಸಿ ಕಡೆಗೆ ಕಟ್ಟುವನು ಹಾಗ॥ ॥೧॥

ಉದಯಾಸ್ತಮಾನದೊಳು ಯೆದೆನೀರು ಹಾರಿದರು।
ಪದಪದ್ಯಗಳ ಹೇಳಿ ಕುಣಿದಾಡಲು॥
ಹದಿನಾರನೆಯ ವಿಧಿಯ ಸದನದೊಳು ಸವಿದುಣಲು।
ಕದನ ಕರ್ಕಶನಾಗಿ ಕಡಿದುಬರೆ ಹಾಗ॥ ॥೨॥

ಸೂಜಿ ನೂಲನು ಕೊಂಡು ಬಾಜಾರದೊಳು ಕುಳಿತು।
ಸೋಜಿಗದ ಹೊಲಿಗೆಯನು ಮಾಡಿಕೊಡಲು॥
ಗಾಜುಬಳೆಗಳಹೊತ್ತು ದಣಿದು ಮಾರಿದರವಗೆ।
ರೋಜು ಉಳಿವುದು ಅಸ್ತಮಯಕೆ ಪೊಂದ್ಧಾಗ॥ ॥೩॥

ಭಾಗ್ಯ ವೃಕ್ಷವನನ್ನು ಬಾಧಿಸಲು ಅವತನಗೆ।
ಯೋಗ್ಯವಾಗುವ ವಸ್ತು ಕೊಡಲಾಪನೇ॥
ಕಾಗೆಕರಿದೆನಿಸಿ ತಾ ಕಸ್ತೂರಿ ಹೋಲುವುದೆ।
ಮೂಗೆಮೊಗೆ ಮಲ್ಲಿಗೆಯು ಪರಿಮಳಿಪ್ಪುದೇ॥ ॥೪॥

ಹರಿಯ ಸೇವೆಯ ಮಾಡೆ ಇಹಪರದ ಸೌಖ್ಯಗಳು।
ಹರನ ಸೇವೆಯ ಮಾಡೆ ಪರಮ ಪದವು॥
ಸಿರಿಯರಸ ವರಾಹ ತಿಮ್ಮಪ್ಪ ನಿನ್ನಡಿಯ।
ಕರುಣರಸ ಹೊರತಾಗಿ ಸಿರಿಯು ಸೇರುವಳೆ॥ ॥೫॥

---

## WORLDLY CARE.

## ಇಹಲೋಕದ ಕಷ್ಟ.

ರಾಗ ಭೈರವಿ ‖ ಜಂಪೆ ತಾಳ.

ಯಾರು ಯಿಕ್ಕುವರೆಂದು ಹಾರೈಸುವೈ ಆತ್ಮ।
ಸೋರುತಿವೆ ಮನೆಯಲ್ಲ ನಾರುತಿದೆ ಸ್ಥಳವು ‖ಪಲ್ಲವಿ‖

ಒಲೆಯೊಳಗೆ ಯುರಿಯಿಲ್ಲ ಜಲವಿಲ್ಲ ಭಾವಿಯೊಳು।
ಕಲಹವೊಳ್ಪಳು ತನ್ನ ಕುಲವನಿತೆಯು ‖
ಪೊಲಬುದಪ್ಪಿಯೆ ಯಿಲ್ಲಿ ಬರಬಹುದೆ ನೀನೀಗ।
ಫಲವುಳ್ಳ ಮನೆಗಳನು ಸೇರೆಲವೊ ಆತ್ಮ ‖ ‖೬೦‖

ಬಾಗಿಲಿಲ್ಲದ ಮನೆಯು ಬಹಳ ಕಗ್ಗತ್ತಲೆಯು।
ಕೂಗುವದು ಹುಲಿಕರಡಿ ಇದಿರಿನೊಳಗೆ ‖
ಬೇಗದೊಳು ಇಲ್ಲಿಂದ ಸಾಗುವದೆ ಸೌಖ್ಯವು।
ನಾಗಶಯನನ ಗುಡಿಯ ಸೇರೆಲವೊಲಾತ್ಮ ‖ ‖೬೧‖

ಬಟ್ಟೆ ಗಡಗೆಯ ವೊಳಗೆ ಇಟ್ಟಿರ್ದ ಬುತ್ತಿಗಳ।
ಕೆಟ್ಟ ಕ್ರಿಮಿಗಳು ಬಂದು ಬಹಳ ಹಳಸಿದವು
ಬಟ್ಟಲಿಡುವವರಿಲ್ಲ ಮುಟ್ಟಿ ಬಳಸುವರಿಲ್ಲ।
ಹೊಟ್ಟೆ ತುಂಬುವದುಂಟೆ ದುಷ್ಟರೊಳು ಆತ್ಮ ‖ ‖೬೨‖

ಹಾಳು ಮನೆಯನು ನಿನಗೆ ತೋರಿ ಕೊಟ್ಟವರ್ಯಾರು।
ಬೀಳುವವು ಮೇಲೆ ಹದಿನಾರು ಭಿತ್ತಿಗಳು ‖
ಏಳು ಇಲ್ಲಿರಬ್ಯಾಡ ಕಾಳಸರ್ಪನು ಬಂದು।
ಕಾಲ ಕಚ್ಚುವನಲ್ಲೊ ಯೆಲೆ ದುಷ್ಟಲಾತ್ಮ ‖ ‖೬೩‖

ಮೂರು ಮಾತನು ಮೇಲೆ ಯಾರ ಕೂಡಾಡಿದೆಯೊ।
ಆರಪಥದಲಿ ನೀನು ಮೀರಿ ನಡದೆ॥
ಕೇರಿಯಾಗಿರ್ದಹ ದಿನೆಂಟು ಅಂಗಡಿಯೊಳಗೆ।
ಆವ ವ್ಯಾಪಾರವನು ಕೇಳದ್ಯೆಲಾತ್ಮ॥ ॥೬೪॥

ಹತ್ತು ತಾಸಿನ ಮೇಲೆ ತುತ್ತು ಕೊಡುವವರ್ಯಾರು।
ಬತ್ತುವದು ಕೈಕಾಲು ಬಳಲಿಕೆಯೊಳು॥
ಮತ್ತೇಳು ಮಂದಿತಾವತ್ತತ್ತ ಸಾರುವರು।
ಕರ್ತೃಗಳ ನಾಕಾಣೆ ನೀ ಕೇಳೊ ಆತ್ಮ॥ ॥೬೫॥

ಎಂಟು ಮಂದಿಯು ತನಗೆ ನೆಂಟರೆಂಬಾಶೆಯೊಳು।
ಗಂಟ ಕಟ್ಟಿಯೆ ಮನದಿ ಮರುಗುತಿರಲು॥
ಗಂಟಲೊಣಗಿಯೆ ವಾಯು ಕಂಠದೊಳು ಪೋಪಾಗ।
ನೆಂಟರನು ನಾಕಾಣೆ ನಾಲಿಸ್ಯೆಯಾತ್ಮ॥ ॥೬೬॥

ಆಯುವಿಲ್ಲದ ಮನೆಯು ಛಾಯವಿಲ್ಲದ ಮಡದಿ।
ದಾಯವಿಲ್ಲದ ಊರುಕರ ಕಷ್ಟವು॥
ಬಾಯ ಹೊಯ್ಕೊಂಬರೊಳು ನ್ಯಾಯ ಕೇಳುವದೇವು।
ಪಾಯದಲಿ ಸಾರಲವ್ರೊ ಸಾರಿದೆನು ಆತ್ಮ॥ ॥೬೭॥

ಮೂಡಗಿರಿ ವಾಸನೊಳು ಬೇಡಿಕೊಂಡರೆ ನಿನಗೆ।
ನೀಡುವನು ಧರ್ಮವನು ಧೈರ್ಯನಾಗಿ॥
ಬೀಡ ಬಿಟ್ಟಲ್ಲಿಂದ ಪೋಗುವದು ಸುಖದೊಳಗೆ।
ಕೂಡುವದು ವಾರಾಹತಿಮ್ಮಪ್ಪನೊಳು ಆತ್ಮ॥ ॥೬೮॥

## WICKEDNESS THE REAL DEFILEMENT.

## ದುರ್ನೀತಿಯೇ ಹೊಲೆತನ.

ರಾಗ ಮುಖಾರಿ || ಜಂಪೆ ತಾಳ.

ಹೊಲೆಯು ಹೊರಗಿಹನೆ ಊರೊಳಗಿಲ್ಲವೇ
ದೇವರ ಸ್ಮರಣೆಯನು ಬಲ್ಲವರು ಹೇಳಿ ||ಪಲ್ಲವಿ||

ಶೀಲವನು ಕೈಕೊಂಡು ನಡಸದಾತನು ಹೊಲೆಯು |
ಹೇಳಿದ್ದ ಹರಿಕಥೆಯ ಕೇಳದವ ಹೊಲೆಯು ||
ಆಳಾಗಿಯರಸಂಗೆ ಎರಡು ಬಗೆವವ ಹೊಲೆಯು |
ಸೂಳೆಯನು ಹೋಗುವವ ಶುದ್ಧ ಹೊಲೆಯು || ||೧೯||

ಕೊಂಡ ಸಾಲಗಳನ್ನು ಹರಿಸದಾತನೆ ಹೊಲೆಯು |
ಅಂಡತನದೊಳ್ ನಡೆವ ಭಂಡ ಹೊಲೆಯು ||
ಉಂಡಮನೆಗೆರಡನ್ನು ಬಗೆವಾತನೇ ಹೊಲೆಯು |
ಹೆಂಡತಿಯ ಇಚ್ಛೆಯವ ಹೇಡಿ ಹೊಲೆಯು || ||೨೦||

ಇದ್ದಾಗ ದಾನಧರ್ಮವ ಮಾಡದವ ಹೊಲೆಯು |
ಮದ್ದಿಕ್ಕಿ ಕೊಲ್ಲುವವ ಮಾರಿ ಹೊಲೆಯು ||
ಬದ್ಧವಾಗಿ ನಯದ ನುಡಿ ಇಲ್ಲದಾತನೆ ಹೊಲೆಯು |
ಶುದ್ಧ ತಾನೆಂಬಾತ ಶುಂಠ ಹೊಲೆಯು || ||೨೧||

ಆಸೆ ಮಾತನು ಕೊಟ್ಟು ಭಾಷೆ ತಪ್ಪುವ ಹೊಲೆಯು |
ಲೇಸು ಉಪಕಾರಗಳ ಮಾಡದವ ಹೊಲೆಯು ||
ಮೋಸದಲಿ ಮುನಿದು ಮನುಜನ ಕೆಡಿಸುವವ ಹೊಲೆಯು |
ಹುಸಿಯ ಹೊಗಳುವ ಪ್ರೊಬ್ಬ ಹುಚ್ಚ ಹೊಲೆಯು || ||೨೨||

ಅರಿತು ಆಚಾರವನು ನಡೆಸದಾತನೆ ಹೊಲೆಯು |
ಪುರಂದರ ವಿಠಲನ್ನ ನೆನೆಯದವ ಹೊಲೆಯು ||
ಗುರು ಹಿರಿಯರನು ಕಂಡು ಭಜಿಸದಾತನೆ ಹೊಲೆಯು |
ಪರಸತಿಗೆ ಅಳುಕುವವ ಪಾಪಿ ಹೊಲೆಯು || ||೨೩||

## CHARACTER OF THE GOOD. *Jnána Sindhu.*

## ಸಾಧು ಲಕ್ಷಣ. ಜ್ಞಾನಸಿಂಧು.

॥ ಭಾಮಿನೀ ಷಟ್ಪದಿ ॥

ಜ್ಞಾನಪುಂಜವು ಇದುವೆ ಮಹಸು।
ಜ್ಞಾನಸಾಗರ ಶಾಂತಿರಸ ದು ।
ದ್ಯಾನವನವಿದು ಅಮೃತ ಸೋನೆಯ ಅನುಭವದ ಘಟ್ಟ ॥
ಸ್ವಾನುಭವದಾ ಶುದ್ಧಮುದ್ರಿದು ।
ಯೇನು ಕರ್ಮವ ಹೊಂದದಾನೀ ।
ಧ್ಯಾನಗುಣವಿದು ಸಾಧುಗಳ ಲಕ್ಷಣವು ಕೇಳೆಂದ ॥ ॥೭೪॥

ಬಯ್ಯರಾರನು ಬಯ್ಯಕೇಳ್ವರು ।
ಅಯ್ಯ ಕೊಡಿರೆಂದೆನುತಲೀಹರು ।
ಪ್ರಿಯವಚನವ ನುಡಿವರಾರಾದರನು ಮಂನಿಸುತ ॥
ಮೈಯ್ಯಮರವರು ಬ್ರಹ್ಮಚಿಂತೆಯ ।
ಲೊಯ್ಯನೇಕಣ್ದೆರದು ಮುಚ್ಚುತ ।
ಅಯ್ಯನೆನಿಪರು ಜಗಕೆ ಯಿದು ಸಾಧುಗಳ ಗುಣವೆಂದ ॥ ॥೭೫॥

ಕರುಣವನು ಕರಗುವರು ದುಖ್ಖಿಗ ।
ಳರವನೋಡಿಯೆ ನಿಮಗೆ ಯಾಕೀ।
ಮರವು ಆತ್ಮನ ನೆನಹಿರೆಂಬರು ಸುಖಿಯಹಿರಿಯೆಂದು ॥
ಮರಗುವರು ಮಹ ಜೀವ ಬಂಧದ ।
ಪರಿಯ ನೋಡಿಯೆ ಮಾಯೆ ಹಾಯ್ ಹಾಯ್ ।
ವುರುಹುವೆಯು ಜಗವೆಂಬದಿದು ಸಾಧುಗಳ ಗುಣವೆಂದ ॥ ॥೭೬॥

ಬಿಟ್ಟು ವುಣ್ಣರು ವೊಬ್ಬರನು ತಾವ್।
ನಿಷ್ಠುರೆಂದಿಗೆ ಆಡರಾರನು ।
ನಟ್ಟಡವಿ ಮನೆಯೆಂಬ ವನ್ಯಾಯಗಳ ಕೇಳ್ದಿಹರು ॥

ಸುಟ್ಟಿಹರು ಪ್ರಾಪಂಚವಮೂಲವ ।
ಕೊಟ್ಟ ಸಾಲವ ಕೇಳದೀಹರು ।
ಸುಟ್ಟಅರಿವೆಂತಿಹರು ಇದು ಸಾಧುಗಳ ಗುಣವೆಂದ ॥ ॥೩೩॥

ನಿಂದೆಗಳ ತಾವಾಡರಾಡುವ ।
ನಿಂದೆಯುವ ತಾವ್ ಕೇಳತಮ್ಮನೇ ।
ನಿಂದಿಸಲು ಸಂತೋಷವಾಹರು ಹಿಗ್ಗಿ ಹರಸುವರು ॥
ಕುಂದು ಬಂದರೆ ಕುಸಿದುದೀಹರು ।
ನಿಂದಕರು ಬದಿ ನಿಲ್ಲರೈಮನ ।
ಬಂದ ಸ್ಥಳದಲಿ ಕುಡುರ್ವರಿದು ಸಾಧುಗಳಗುಣವೆಂದ ॥ ॥೩೮॥

ನೋಡಲಾರರು ಹಿಂಸೆ ಕಂಡರೆ ।
ಆಡಲಾರರು ಆವಮಾತನು ।
ಕಾಡಲಾರರು ವ್ರೊಬ್ಬರನು ಅಷ್ಟರಲೆತೃಪ್ತ್ಯಹರು ॥
ಜೋಡಮಾಡಿಯೆ ಶಿವನ ಚಿತ್ತದಿ ।
ಆಡುವರು ಅಪವಾದ ಬಂದರೆ ।
ಆಡರ್ರೈ ಸಾಧುಗಳು ಇದು ಸಾಧುಗಳ ಗುಣವೆಂದ ॥ ॥೩೯॥

ಪೋಷಣವ ದೇಹಕ್ಕೆ ಮಾಡರು ।
ಘೋಷಣವ ಪರರಿಂಗೆ ಮಾಳ್ಪರು ।
ವಾಸನಿಲ್ಲದೆಯುಹರು ಇಹಪರವೆಡು ಲೋಕದಲಿ ॥
ಘಾಸಿಯಾಗರು ಪ್ರಾರಬ್ಧಕೆಯು । :
ನಾಶಮಾಡಿರುತಿಹರು ಶೋಕದ ।
ರಾಶಿಯುನು ಮೋಹವನು ಇದು ಸಾಧುಗಳ ಗುಣವೆಂದ ॥ ॥೪೦॥

ಹಿಂದಣದ ಸುದ್ದಿಯುನು ನೆನೆಯರು ।
ಮುಂದಣದ ಯೋಚಿಸರು ಆಕ್ಷಣ ।
ಬಂದದನು ಅನುಭವಿಸುತೀಹರು ನಿತ್ಯಸುಖಿಹರು ॥

ಸಂದೆಹಂಗಳ ಹರವ ಮಾಡಿಹ ।
ರಂದುಕಾಮ ಕ್ರೋಧದುಪಟಳ ।
ಬಂಧುರಕೆ ತಾವ್ ಬೆಚ್ಚರಿದು ಸಾಧುಗಳ ಗುಣವೇದ ॥ ॥೮೧॥

ಕೊಡುವರೇನಾದರನು ಬೇಡಲು ।
ಕೊಡುವರ್ಕೈ ದೇಹಗಳಕುಯಿದೇ ।
ಕೊಡುವರಿದು ಕೊಡಬಾರದೆಂಬಾ ನುಡಿಯೆ ನೊಡಲಿಲ್ಲ ॥
ಪೊಡವಿಪಾವನರಾಗಿ ಹರುಷದ ।
ಕಡಲೊಳಗೆ ಮುಳುಗಾಳುತೇಳುತ ।
ನಿಡುನಿರಂತರ ವಿರುತಿಪರು ಇದು ಸಾಧು ಗುಣವೆಂದ ॥ ॥೮೨॥

ಶಿಶುವಿನಂತಿರುತಿಹರು ನೋಡಲು ।
ಯೆಸೆವರ್ಕೈತೇಜೋಮಯವು ಆ ।
ಗೆಸದು ಬೆಳಗುವರಾವ ಕಾಲದಿ ಪೊಂದೆಸಮನಾಗಿ ॥
ಅಶನಯುಕ್ತಾಹಾರ ಪ್ರಂಬರು ।
ಹಿಶಿಕಿ ಕುತ್ತಿಗೆ ಮಾಯೆಕಾರಿಶಿ ।
ಮಿಸುವ ಆತ್ಮನ ತೆಗವರಿದು ಸಾಧುಗಳ ಗುಣವೆಂದ ॥ ॥೮೩॥

ನೀಚವೃಕ್ಷಗಳಲ್ಲಸರ್ವದಿ ।
ಆಚರಾಚರನೊಬ್ಬನೆಂದೇ ।
ಗೋಚರದಿ ಕಾಣುವರು ಶತೃವ ಮಿತ್ರನೆನುತಿಪರು ॥
ಸೂಚಿಪರು ಬ್ರಹ್ಮವನು ನಿಮ್ಮನೆ ।
ಯೋಚನಿಲ್ಲದೆ ಭಜಿಸಿರೆಂದೇ ।
ನಾಚಿಪರು ಸಂಸಾರವನು ಯಿದು ಸಾಧುಗುಣವೆಂದ ॥ ॥೮೪॥

ಮೇರೆದಪ್ಪಿ ಸಮುದ್ರಮೇರುವು ।
ಪೋರುಗುಡಿಸಲು ಸರ್ವ ಪರ್ವತ ।
ಧಾರುಣಿಯುಮೇಲ್ಕಡದು ಹಾರಲು ಗ್ರಹವು ನಕ್ಷತ್ರ ॥
ಸೂರಿಯರುಚಂದ್ರಾದಿಗಳು ತಾವ್ ।
ಸ್ವಾರಿಮಾರ್ಗವ ತಪ್ಪಿನಡೆಯಲು ।
ಮೀರುವರೆ ಸತ್ಯಕ್ಕೆ ಸಾಧುಗಳ್ ಗುಹನೆ ಕೇಳೆಂದ ॥ ॥೮೫॥

## RENUNCIATION OF THE WORLD. *Anubhavamrita.*

## ವೈರಾಗ್ಯ ಲಕ್ಷಣ. ಅನುಭವಾಮೃತ.

॥ಭಾಮಿನೀ ಷಟ್ಪದಿ॥

ಕೇಳು ಶುಕಯೋಗೀಂದ್ರ ಸಂಸೃತಿ ।
ಹಾಳುವಾದವಲಾ ವಿಚಾರಿಸೆ ।
ಹೇಳಲೇನದು ಬಯಲ ಬಳಲಿಕೆ ನಿಷ್ಫಲಾರಂಭ ॥
ಕಾಳು ಸತಿ ಸುತ ಗೃಹ ಧನಂಗಳು ।
ಧಾಳಿಗೊಡ್ಡಿದ ಸೂಡರಿ ಸಂದದಿ ।
ಕಾಲವಶದಲಿ ಕೆಟ್ಟು ಹೋಹುದು ನಿತ್ಯವಲ್ಲೆಂದ ॥ ॥೮೬॥

ಆರು ವಿಪ್ರಾರಲ್ಕರಿದು ಕಾರಾ ।
ಗಾರದಂದದಿ ತೋರ್ಪ ಘೋರಾ ।
ಕಾರ ಸಂಸಾರವನು ಜಿತರಾಗದ ಜೀವರಿಗೆ ॥
ಹಾರಿ ಸ್ವರ್ಗವ ತೂರಿ ನರಕವ ।
ಶೇರಿ ಧರಣಿಯು ಸುಕೃತ ದುಷ್ಕೃತ ।
ಕಾರಿಯದ ಸುಖದುಃಖದೊಳಗೋಲಾಡುತಿಹರೆಂದ ॥ ॥೮೭॥

ಸಾವವರ ನೋಡುತ್ತ ದುಃಖದಿ ।
ಬೇವವರ ಕಾಣುತ್ತ ಮನದಲಿ ।
ಜೀವರಿಸಿ ಸುಖವೆಂದು ಬಿಡನವ ಮರವ ಸಾಕ್ಷಾತ್ಕೆ ॥
ಭಾಮೆಯುಳಿಯಲಿ ವಿತ್ತ ಪೋಗಲಿ ।
ತಾವು ದಪ್ಪಲಿ ಮುಗುಳನದನಿಂ ।
ನಾವ ಪರಿಯಲಿ ಕಷ್ಟ ಪಟ್ಟದ ಳಸಲನುಗ್ಗೊದ ॥ ॥೮೮॥

ಹುಟ್ಟುತಲಿ ತಾನೊಬ್ಬ ಕಡೆಯಲಿ ।
ಕೆಟ್ಟಳಿದು ಹೋಹಾಗ ಲೊಬ್ಬನೆ ।
ನಟ್ಟನಡುವೀಬಂಧು ಬಳಗಗಳೆಂಬ ಬಲುತೊಡಕು ॥

ಕಷ್ಟವಹ ದುಃಖವನೆ ಮಾಳ್ಪನು ।
ನೆಟ್ಟನೆ ವಿವೇಕದಲಿ ತಿಳಿದದ ।
ಸುಟ್ಟು ಸುಖವನು ಪಡೆದಡಾತನೆ ಶಿಷ್ಟನೆನಿಸುವನು ॥ ॥೮೯॥

ಮೂರದಾರಿಯ ನಡುವ ಮನುಜರು ।
ನೀರಡಿಸಿ ಅರವಟಿಗೆಯನು ಸೇರೆ ।
ಸಾರಿ ತೃಷೆಯನು ಕಳೆದು ಸರ್ವರು ಯೆಲ್ಲರೊಡಗೂಡಿ ॥
ಬೇರೆ ಬೇರ್ತಂತಮ್ಮ ದಾರಿಯ ।
ಸಾರಿ ಹೋಹಂದದಲಿ ಸತಿಸುತ ।
ದಾರಿಗಾರು ಋಣಾನು ಮಂಧವು ತೀರಲವರಿರರು ॥ ॥೯೦॥

ಬಂದು ವೃಕ್ಷದ ಮೇಲೆ ಪಕ್ಷಿಗ ।
ಳೊಂದು ನಿಮಿಷದಿ ಗಜಿಬಜಿನುತಲಿ ।
ಹೊಂದಿ ಕೊಂಡವು ಮಗುಳೆ ಕಂಜಡೆ ಗೈದು ವಂದದಲಿ ॥
ತಂದೆ ತಾಯ್ಗಳು ಬಂಧುಬಳಗಗ ।
ಳೊಂದು ನಿಮಿಷದಿ ತೋರಿ ತಮತಂ ।
ಮಂದವನು ತೊಲಗುವರು ಋಣ ಸಂಮಂಧ ತೀರಿದರೆ ॥ ॥೯೧॥

ವಿದ್ಯವನು ಕಲಿತೇನು ಬಹಳೋ ।
ದ್ಯೋಗದಲಿ ತಾನಿದ್ದು ಧನವನು ।
ಬುದ್ಧಿಯಿಂದಾರ್ಜಿಸಿಪಡದರಿಂದೇನು ಫಲ ತನಗೆ ॥
ಮುಗ್ಧೆಯನು ವರಿಸಿರ್ದರೇನದು ।
ವೃದ್ಧರುಳುವಷ್ಟರೊಳು ಹೋಪುದು ।
ಬದ್ಧ ತನುವಿದು ಬಳಿಕನಲಿ ಇದು ಯಾರ ಹೊಂದುವದು ॥ ॥೯೨॥

ಕಂದ ಕೇಳ್ಬೈ ಬಾಲ್ಯದಲಿ ತಾಯ್ ।
ತಂದೆಗಳು ರಕ್ಷಕರು ಯೌವನ ।
ಬಂದರಾಗ ಸ್ವತಂತ್ರನೆನಿಸುವ ಸರ್ವ ಕೃತ್ಯದಲಿ ॥

ಮುಂದೆ ವಾರ್ಧಿಕ್ಯದಲಿ ಮಕ್ಕಳು |
ಬಂಧುಗಳು ಸಲಹುವರು ಕಡೆಯಲಿ |
ಬೆಂದು ಹೋಪುದು ಕಿಚ್ಚಿನಲಿ ಕೇಳಾರದೀ ತನುವು || ||೯೩||

ಹರಿಕೆಗೆಂದೇ ತಂದ ಕುರಿತಾ |
ನರಿಯುದಕಟಾ ಕೊಲುವರೆಂಬದ |
ಹಿರಿದು ಹಸಿವಿಗೆ ತಳಿರು ಮೆಲುವುದು ತೋರಣಕೆ ತಂದ||
ನರಕುರಿಗಳದರಂತೆ ತಮಗಹ |
ಮರಣವನು ತಾವರಿಯರೀಸಂ |
ನರಣ ದುಃಖಕೆ ಮಗ್ನರಾಗಿಯೆ ಮೃತ್ಯುವಶವಹರು|| ||೯೪||

ಆವಕಾಲದ ಲಾವತಾವಿನ |
ಲಾವವಿಧದಲಿ ತನಗೆ ಬಹುದೀ |
ನೋವಿದೆಂಬುದ ನರಿಯು ಬಾರದು ದೇವ ದೈತ್ಯರಲಿ ||
ತಾವದಾರಿಂದಧಿಕರೆಲಿವ್ರೋ |
ಸಾವು ತಪ್ಪದು ಸಕಲರಿಗೆ ಅದ |
ಭಾವಿಸದೆ ಬಹು ಯತ್ನದಲಿ ಫಲವೇನು ಹೇಳೆಂದ || ||೯೫||

ಬ್ಯಾಸಿಗೆಯ ಬಿಸಿಲಿನಲಿ ಬಿರ್ರನೆ|
ಬೀಸುತಿಹ ಘಾಳಿಯಲಿ ಮಳೆಯನು |
ಸೂಸುತಿಹ ಸೋನೆಯಲಿ ಮಂಜನು ಸುರಿವ ಶೀತದಲಿ ||
ಘಾಶಿಯಾಗುತ ಘೋರ ದುಃಖಾ |
ವಾಸದಲಿ ಪ್ರತಿ ಕ್ಷತಿಯ ಮಾಡುವ |
ರೈನೆ ಸುಖವಿನಿತಿಲ್ಲ ಕಾಲಾಧೀನವಾಗಿಹರು || ||೯೬||

ತನ್ನ ಭುಜಗಳ ನೋಡಿ ಕೊಂಬನು |
ಸಂನ್ನೆಯನು ಮಾಡುವನು ಕನ್ನೆನ |
ಲನ್ಯರೊಡವೆಯು ಕೆಡಿಸಿ ಕೆಲವನು ಗಹಗಹಿಸಿನಗುವ ||

ತನ್ನ ತಂದನವೆಂದು ಪಾಡುವ |
ಕಿನ್ನೆಯಲಿ ತುರುಬಿಡುವ ನೊರಗಿಸಿ |
ಕುನ್ನಿ ಯೌವನವೆಂಬ ಸನ್ನಿ ವಿಕಾರವಿಡಿಗೊಂಡು || ||೯೩

ಮಣಿಯುನಾರಿಯು ಮಾಸ್ಯರನುತಾ |
ತೃಣಕೆ ಬಗೆಯನು ಗುಣಿಗಳಲಿ ಅವ |
ಗುಣವನೆಣಿಸುವ ಕುಹಕಿಗಳು ಕೋಪಾವಿ ತೋರುವನು ||
ಅಣಕವಾಡುವ ನಾರಸ್ವಾದಡೆ |
ಶಣಸುವನು ಸಜ್ಜನರ ಕಂಡರೆ |
ಬಣಗುಮರ್ತ್ಯನು ಬರಿದೆ ಯೌವನವೆಂಬ ಗರ್ವದಲಿ || ||೯೪

---

## DESCRIPTION OF PANCHALAPURA. *Mahá Bhárata.*

## ಪಾಂಚಾಲಪುರ ವರ್ಣನೆ. ಮಹಾ ಭಾರತ.

||ಭಾಮಿನೀ ಷಟ್ಪದಿ||

|| ಸೂಚನೆ || ಧರಣಿಪತಿ ನಿಜ ಸುತೆಯ ರೂಪೋ |
ತ್ಕರದ ಸೌಭಾಗ್ಯದ ನಿರಂತರ |
ಪರಮ ಶೋಭಾರಚನೆಯಲಿ ರಚಿಸಿದರು ಪಟ್ಟಣವ ||

|| ಪದ್ಯ || ಭೂಮಿಪತಿ ಕೇಳ್ನಿಮ್ಮ ಪಿತಪಿ |
ತಾಮಹರು ಧೌಮ್ಯಾಶ್ರಮಕೆ ಬಂ |
ದಾಮುನೀಂದ್ರನ ಕೂಡಿ ಕೊಂಡರು ಏಕವಚನದಲಿ ||
ರಾಮಣೀಯಕವಹ ಸುಶಕುನ |
ಸ್ತೋಮವನು ವಿವರಿಸುತ ಹೊಕ್ಕರು |
ಭೂಮಿಲಂಬದನೃಪರು ನೆರವಿಯ ದ್ರುಪದ ಪಟ್ಟಣವ || ||೯೯||

ಭರದಿನೈತಂದಖಿಳ ಭೂಪಿಪಾ ।
ಶ್ವರರ ಘನಚತುರಂಗ ಪದಹತಿ ।
ಧರಣಿನಿರ್ಗತರೇಣುಪಟಲಪರಾಗ ಸಂಗದಲಿ ॥
ಅರುಣಮಯವಾಯ್ತಖಿಳ ಜಗದಲಿ ।
ಸರಸಿಜಾಕ್ಷಿಯು ನೆನದುಸಚರಾ ।
ಚರದಮುಖದಲಿ ರಾಗರಸ ಪ್ರಬ್ಬರಿಸಿದಂದಲಿ ॥ ॥೧೦೦॥

ತರಣಿಗುಂಟೇ ಸಮಯ ವನಿಲಗೆ ।
ತೆರಹುಗೊಡುವವರಾರು ಗಗನೇ ।
ಚರರ ಗಮನಸ್ತಂಭವೆತ್ತಣ ವಾಮ ಖಗಕುಲಕೆ ॥
ನೆರದ ಪಲ್ಲವಸತ್ತಿಗೆಯ ಝು ।
ಲ್ಲರಿಯ ಸಿಂಧದ ಶಳೆಯ ಘನಸೀ ।
ಗುರಿಯ ಸಬಳಪಸೊಲ ಚಮರಂಗಳ ವಿತಾಯಿಯಲಿ ॥ ॥೧೦೧॥

ಚತುರಲುದಧೀವಲಯ ದವನೀ ।
ಪತಿಗಳೇಕಾಮಿಸಿ ವಿರೋಧ ।
ಸ್ಥಿತಿಯ ನೋಡದೆ ನೂಕಿನಡೆದರು ದೃಪದಪುರಿಗಾಗಿ ॥
ಅತಿಬಲರು ಬಹು ರಾಜಬಲಪ ।
ದ್ಧತಿಗಳನು ನೋಡುತ್ತ ಬಂದರು ।
ಕೃತಕವಿಪ್ರೋತ್ತಮರು ಭಿಕ್ಷಾವಿಹಿತ ವೃತ್ತಿಯಲಿ ॥ ॥೧೦೨॥

ತಿರುಗಿತಿದು ಪಾಂಚಾಲನಗರಿಯ ।
ಹೊರವಳಯದಲಿ ಜಲಧಿ ಮಧ್ಯದ ।
ಕುರುವವೋ ಪಟ್ಟಣವೊ ಮೊಳೆದು ದೈವಗತಿಗಳಲಿ ॥
ಉರುಬಿದೊಡೆ ಪಾಂಚಾಲ ಭೂಪತಿ ।
ತರುಬಲಾಪನೆ ಮಾನತನವಿದು ।
ಬರಿದೆ ಹೋಗದೆನುತ್ತ ಬಂದನು ಧರ್ಮಸುತ ನಗುತ ॥ ॥೧೦೩॥

ಪುರದೊಳಗೆ ಹೇರಾಳ ಹಬ್ಬದ ।
ಹರಹಿನಲಿ ಬೀಡಾರ ಭಿಕ್ಷಾ ।
ಚರಿತರಿಗೆ ದೊರಕುವುದೆ ಗುಡಿಗೂಡಾರ ಸಂತತಿಗೆ ॥
ಅರಸುಗಳು ನಾವಲ್ಲ ಭವನಾಂ ।
ತರವದೇನಮಗೆಂದು ಘಟ ಬಂ ।
ಧುರದಶಾಲೆಯ ಹೊಕ್ಕರಿವರು ಕುಲಾಲಭವನದಲಿ ॥ ॥೧೦೪॥

ಕೂಡೆ ಹೊಸ ಭಾಂಡದಲಿ ಭಿಕ್ಷವ ।
ಬೇಡಿತೊಳಲಿದ ರಿವರು ರಾಯರ ।
ಬೀಡು ಬಿಡುತಿರ್ದುದು ಬಹಳ ನಿಸ್ಸಾಳರಭಸದಲಿ ॥
ಬೀಡಿವರಿಗಿದು ನೆಲನಿವರಿಗಿದು ।
ಮಾಡಿದರಮನೆ ಯಿವರಿಗಿದು ಕರು ।
ವಾಡವಿವರಿಗಿದೆಂದು ಪರುಠವಿಸಿದನುಪಾಂಚಾಲ ॥ ॥೧೦೫॥

ಕೇರಿಕೇರಿಯ ಬೀದಿಗಳ ಪ ।
ನ್ನೀರಚಳೆಯದ ಕಳಸಕನ್ನಡಿ ।
ತೋರಣದ ಸೂಸಕದ ಮುತ್ತಿನ ಮಕರ ತೋರಣದ ॥
ಓರಣದ ಹೊಂಗೆಲಸದಖಿಳಾ ।
ಗಾರಪಂಕ್ತಿಯ ಸೋಮ ವೀಧಿಯ ।
ಸೂರವೀಧಿಯ ರಚನೆಯಲಿ ರಚಿಸಿದರು ಪಟ್ಟಣವ ॥ ॥೧೦೬॥

ತೀವಿದವು ಹೊಂಗೆಲಸಗತಿಯಲಿ ।
ಲೋವೆಗಳು ಚೈತನ್ಯಮಯ ಚಿ ।
ತ್ರಾವಳಿಯ ಬೆಸುಗೆಗಳಲೆಸದವು ಭವನ ಭಿತ್ತಿಗಳು ॥
ಹೂವಿನರಳಿನ ಹರಹಿನಲಿ ರ ।
ತ್ನಾವಳಿಗಳೊಪ್ಪಿದವಗರುಧೂ ।
ಮಾವಳಿಯಗಂಪಿನಲಿ ಘುಘುಮಘಿಸಿದವು ಮೇಘಚಯ ॥ ॥೧೦೭॥

ಕಾರಣೆಯ ಕುಂಕುಮದ ಸಾದಿನ ।
ಸಾರಣೆಯ ನೆಲಕಟ್ಟುಗಳ ಕ ।
ರ್ಪೂರಧೂಳಿಯ ಜೊಳಹುಗಳ ಪನ್ನೀರಪಕ್ಕಲೆಯ ॥
ಚಾರುಚಳೆಯುದ ಕೆಸರಿಡುವ ಕ ।
ಸ್ತೂರಿಗಳ ಪೂರಾಯ ಪರಿಮಳ ।
ಭಾರದಲಿ ಬಿರುಗಾಳಿ ಕುಸಿವುದು ಪೇಳಲೇನೆಂದ ॥ ॥೧೦೮॥

ಮೇಲುಕಟ್ಟಿನ ದಿವ್ಯಚಿತ್ರದು ।
ಕೂಲನಿಚಯುದ ಲಾವುಚದ ಬ ।
ಲ್ಲಾಳದಡ್ಡಿಗಳೆಡೆಗೆಡೆಗೆರಂಜಿಸುವ ಪಟ್ಟಿಗಳ ॥
ಮೇಲುಪ್ರೊವಚೆಯ ಕರ್ಪೂರದ ಜೊಂ ।
ಬಾಳೆಗಳ ಮಲಯಜದ ಕಂಬದ ।
ಸಾಲುಗಳಲೊಪ್ಪಿದುದು ಚಪ್ಪರ ನೆರಡು ಯೋಜನದ ॥ ॥೧೦೯॥

ಬಿಗಿದವೆಡೆ ಮಂಟಪದ ಬಿಂಗಾ ।
ರಿಗಳ ಬಿಡೆಯುದ ಚವುರ ಹೊಂಗೆ ।
ಜ್ಜೆಗಳ ಮುಕುರದಘಂಟೆಗಳ ಬಂಧುರದ ಬಾಸಿಗವ ॥
ಸುಗಮುಬಂಧದ ಬಂಣಸರದೋ ।
ಳಿಗಳ ಕಂಬದ ವಜ್ರಮಯಧಾ ।
ರೆಗಳಲೆಸದುದು ಭದ್ರಮಂಟಪವಮಲಮಣಿಮಯದ ॥ ॥೧೧೦॥

ಕೀಲಿಸಿದ ಪಟ್ಟೆಗಳ ದಿವ್ಯದು ।
ಕೂಲದಲಿ ಹೊಂಬರಹದ್ಲೆಗಳ ।
ಚೂಳಿಕೆಯ ಕನ್ನಡಿಯ ತೋರಣ ವೆರಡು ಪಕ್ಕದಲಿ ॥
ಮೇಲುಮುತ್ತಿನ ಸೂಸಕದನೇ ।
ಪಾಳಚವುರಿಯ ದಾಳಿಗಳ ಸಂ ।
ಮೇಳದಲಿ ಸಮತಳಿಸಿದರು ವೈವಾಹ ಮಂಟಪವ ॥ ॥೧೧೧॥

ಹೊಳೆವಭಿತ್ತಿಯ ಸಾಲಭಂಜಿಕೆ ।
ಗಳಲಿ ಮೌಕ್ತಿಕವಜ್ರಮಣಿಮಂ ।
ಗಳವಿಹಾರಪಂಕ್ತಿಯಲಿ ರಚನೆಯ ಚಿತ್ರಪತ್ರಾವಳಿ ।
ಯಿಳೆಗಿಳಿದ ಪುಷ್ಪಕವೊ ನೂತನ ।
ನಳಿನ ಮಿತ್ರನ ರಥವೊ ಮೇಣಿದು ।
ಜಲಧಿಶಯನನಸಜ್ಜೆಯೋ ನಾವರಿಯೆವಿದನೆಂದ ॥ ॥೧೧೨॥

ಝಳವರ್ಝೋಂಪಿಸಿ ಬೀಸಿದವು ತಂ ।
ಬೆಲರಬೀಸಣಿಗೆಗಳ ಪರಿಮಳ ।
ಕಲಿತಮನೋರಂಜಕತುಷಾರದ ತುಹಿನಲೇಖನಗಳ ।
ಸುಳಿವ ಸುತ್ತಣ ಸಾಲಭಂಜಿಕೆ ।
ಗಳಲಿ ಸೂತ್ರಿಸಿ ರಚಿಸಿದರು ಮಂ ।
ಗಳಲಿಂಗಣ ಝಾಡಿಸಿತು ವೈವಾಹ ಮಂಟಪವ ॥ ॥೧೧೩॥

ವರ ಜವಾಜಿಯ ಶೃಂಗಗಳ ಕ ।
ರ್ಪುರದ ತವಲಾಯಿಗಳ ಸಾದಿನ ।
ಭರಣಿಗಳ ಮೃಗನಾಭಿಗಳ ನಡಕಿದರು ಬಂಡಿಯಲಿ ।
ಸುರಿಸುರಿದು ಹಂತಿಗಳ ಹೊಂಗೊ ।
ಪ್ಪರಿಗೆಗಳ ತುಂಬಿದರು ಗಂಧದ ।
ಹಿರಿಯ ರಂಜಣಿಗೆಗಳ ಹಿಡಿವರು ಸುತ್ತುವಳಯದಲಿ ॥ ॥೧೧೪॥

ಬಳಿಕ ಸೊದೆಗಳ ಭಾವಿಗಳ ಪ ।
ಕ್ಕಲೆಯ ಪನ್ನೀರುಗಳ ಶಿಡಿದವು ।
ಹೊಳವ ಕೈರಾಟಣದ ಕಾಂಚನ ಮಯದಪೋಣಿಗಳ ।
ತುಳಿಕಿ ಬಿಗಿದರು ಕೊಪ್ಪರಿಗೆಗಳ ।
ವಳಯದಲಿನವಯಂತ್ರ ಮಯವು ।
ತ್ಥಳಿಗಳೇ ನೀಡುವವು ಬೇಡಿದರಿಗೆ ಸುವಸ್ತುಗಳ ॥ ॥೧೧೫॥

ಏಕವಿಧದನವಾಯಿಯೋ ಮಾ ।
ಲೋಕದತಿಶಯ ವಸ್ತುರಚನಾ ।
ಸಾಕುಮಾರಿಯ ಸೇವೆಗಿದು ಸಾಕಾರವಾದುದಲ ॥
ಏಕಮಯಮತ ವಿಶ್ವಕರ್ಮ ।
ವ್ಯಾಕರಣ ಲಕ್ಷಣದ ಲಕ್ಷಾ ।
ನೀಕವಿದರೊಂದೊರೆಗೆ ಬಹುದೇ ಭದ್ರ ಮಂಟಪದ ॥ ॥೧೧೬॥

ವಿವಿಧವೀಣಾ ವಾದ್ಯ ಕೋಮಲ ।
ರವದ ಮಧುರ ಮೃದಂಗ ತತಿಗಳ ।
ರವಣಿಗಳ ನಟ್ಟುವಿಗರುಗ್ಗಡಣೆಯ ಗಡಾವಣೆಯ ॥
ನವವಿಧದವೈತಾಳಿಕರವರ ।
ಯುವತಿಯರ ಭಾರಣೆಯ ಭೂಷಣ ।
ರವದ ಮೇಳವು ಮುತ್ತಿ ಮುಸುಗಿತು ಚಾರುಚಪ್ಪರವ ॥ ॥೧೧೭॥

ಸಾಳಗದ ಸಮ್ಮೋಹನದ ಮಳೆ ।
ಗಾಲವೋ ಗೀತವೊ ರಸಾಳಿಯ ॥
ಕಾಲುವೆಯೊ ನವಕಾವ್ಯಬಂಧದ ಸಾರ ಸಂಗತಿಯೊ ॥
ಆಲಿಗಳಿಗಾಯುಷ್ಯಫಲ ಜೀ ।
ವಾಳವೋ ನರ್ತನವೊ ಸೊಗಸಿನ ।
ಮೇಳವಣಿಗಳ ಪಾಟಿಯಾದುದು ಜನದ ಕಣ್ಮನಕೆ ॥ ॥೧೧೮॥

ಕೋವಿದರು ಹೊರವಳೆಯದಲಿ ನಾ ।
ನಾ ವಿಧದ ನಾಟಕದ ನರ್ತನ ।
ಭಾವಕದ್ರಾವಕ ಸುಗಾಯಕ ಮಲ್ಲ ಚಿತ್ರಕರು ॥
ಕೋವಿದರು ಕರುಷಕರು ಪಣ್ಯಾ ।
ಜೀವಿವಾಮನ ಮೂಕ ಬಧಿರಾಂ ।
ಧಾವಳಿಗಳೊಪ್ಪಿದರು ಸಕಲದಿಶಾಸಮಾಗತರು ॥ ॥೧೧೯॥

ಕವಿ ಗಮಕಿ ವಾದಿಗಳು ವಾಗ್ಮಿ ।
ಪ್ರವರಯಾಜ್ಞಿಕ ಮಾಂತ್ರಿಕರು ವೈ ।
ಷ್ಣವ ಮಹೇಶ್ವರ ಜೈನ ಭೈರವ ಬೌದ್ಧ ಲಿಂಗಿಗಳು ॥
ವಿವಿಧ ವರ್ಣಾಶ್ರಮ ಸುಧರ್ಮ ।
ವ್ಯವಹರಣ ನಿಷ್ಠರು ವಿವಾಹೋ ।
ತ್ಸವ ವಿಲೋಕನ ಕೌತುಕಿಗಳೊದಗಿದರ ಸಂಖ್ಯಾತ ॥ ॥೧೨೦॥

ಗಣಿತವಂತರ ನೆರವಿ ಸುಬ್ರಾ ।
ಹ್ಮಣರು ಸುಶ್ರೋತ್ರಿಯರು ವೈದಿಕ ।
ಗುಣದ ವಾಚಾಲಕರು ವಿಮಲ ಬ್ರಹ್ಮ ಋಷಿಸಮರು ॥
ಪ್ರಣುತ ಋಷಿಗಳು ಮುನಿವರರು ಸಂ ।
ದಣಿಸಿತಖಿಳ ದಿಗಂತರದ ಧಾ ।
ರುಣಿಯ ದೇವವ್ರಾತ ನೆರೆದುದು ದ್ರುಪದ ನಗರಿಯಲಿ ॥ ॥೧೨೧॥

ಅರಸ ಕೇಳೈ ಮೇಲೆ ವಿದ್ಯಾ ।
ಧರ ಮಹೋರಗ ಯಕ್ಷ ರಾಕ್ಷಸ ।
ಗರುಡ ಕಿನ್ನರ ಸಿದ್ಧ ವಸು ಗಂಧರ್ವ ಭೂತಗಣ ॥
ವರ ಮರುದ್ಗಣ ರುದ್ರ ಮನು ಭಾ ।
ಸ್ಕರ ಸುಧಾಕರ ತಾರಕಾಗ್ರಹ ।
ಸುರ ಮುನಿಪ ದಿಕ್ಪಾಲತತಿ ನೆರೆದುದು ವಿಮಾನದಲಿ ॥ ॥೧೨೨॥

ಚಾರಣರ ಕೈವಾರ ತುಂಬುರ ।
ನಾರದರ ಸಂಗೀತ ರಂಭೆಯ ।
ಚಾರುನರ್ತನ ಚಿತ್ರರಥನ ಮೃದಂಗ ಮೃದುಶಬ್ದ ॥
ಆರುಭಟೆಮಿಗೆ ಲಳ್ಳಿರಿವಜಂ ।
ಭಾರಿಯೋಲಗ ದಲಿ ತದೀಯರು ॥
ಪಾರಭಸ ವಿತರೇತರಪ್ರತಿ ಬಿಂಬ ವಾಯ್ತೆಂದ ॥ ॥೧೨೩॥

ರಚಿಸಿದರು ಮಂಟಪವ ನವರವ ।
ರುಚಿತ ವೃತ್ತಿಯೊಳವನಿಪಾಲ ।
ಪ್ರಚಯುವನು ಮನ್ನಿಸಿದನಿವರನು ವಿಪ್ರ ಸಭೆಯೊಳಗೆ ॥
ಪ್ರಚುರ ಮಣಿಯಿದೆ ಪದ್ಮರಾಗದ ।
ರುಚಿರ ರತ್ನವು ಜಾತರೂಪದಿ ।
ಖಚಿತವಾದೊಡೆ ಪುಣ್ಯವೆನುತಾ ದೃಪದ ಚಿಂತಿಸಿದ ॥ ||೧೨೬||

---

THE MARRIAGE OF SITA. *Rámáy ma.*

## ಸೀತಾ ಕಲ್ಯಾಣ. ರಾಮಾಯಣ.

॥ ಭಾಮಿನಿ ಷಟ್ಪದಿ ॥

॥ಸೂಚನೆ ॥ ರಾಯಜನಕನು ಜಗದ ರಾಯರ ।
ರಾಯು ರಘುನಂದನರಿಗಬುಜದ ।
ಳಾಯತಾಂಬಕಿಯರನು ಕೊಟ್ಟನು ಕರೆಸಿ ದಶರಥನ ॥

॥ಪದ್ಯ ॥ ಬರಸಿದವು ಬಳಿಕುಭಯಮುತವಿ ।
ಸ್ತರದ ಪತ್ರಿಕೆಗಳು ಸುಧಾಮನ ।
ವರಿಸತಾನಂದರನ ತೆರಳಿಚಿದನು ಮಹೀಪಾಲ ॥
ಕರುಣಿ ಕೇಳೈಕುಶನೆ ಗಜರಥ ।
ತುರಗ ಪದಬಲ ಸಹಿತಯೋಧ್ಯಾ ।
ಪುರಿಗೆ ಪಯಣಿಯೋದ್ಯೋಗರಾದರು ಜನಕನಾಜ್ಞೆಯುಲಿ ॥ ||೧೨೫||

ಅರುಹಿದರು ಮಣಿಹಾರರಿವರಿ ।
ಬ್ಬರ ಬರವಿನ ಸ್ಥಿತಿಯು ನರಸಂ ।
ಗರಸನಾಜ್ಞೆಯು ಲೆತ್ತಿದವು ಗುಡಿಪುರದೊಳಗಲದಲಿ ॥

ಧರಣಿಪತಿಯೋಲಗದ ಸಮಯವ ।
ನರಿದು ನಡೆತಂದಾಸುಧಾಮನು ।
ಚರಣಕಾನತನಾಗಿ ಕೊಟ್ಟನು ಬಿನ್ನವತ್ತ್ರಳಿಯ ॥ ॥೧೨೬॥

ಅರಸ ಬಳಿಕಾ ಜನಕಮಂತ್ರೀ ।
ಶ್ವರನ ಸುಚಿತಪ್ರೇಮ ವಚನದಿ ।
ಹಿರಿದು ಮನ್ನಿಸಿ ತನ್ನ ನಿಜ ಸಿಂಹಾಸನಾರ್ಧದಲಿ ॥
ಕರೆದು ಕುಳ್ಳಿರಿಸಿದನು ಮಿಕ್ಕಿನ ।
ವರ ಶತಾನಂದಾದಿಗಳ ನುಪ ।
ಚರಿಸಿ ಬಳಿಕಾ ಮಂತ್ರಿಗಿಂತೆಂದನು ಮಹೀಪಾಲ ॥ ॥೧೨೭॥

ಕುಶಲನೇ ಜನಕಕ್ಷಿತೀಶನು ।
ಕುಶಪತಾಕನು ಹದುಳಿಗನೆತ ।
ದ್ವಸುಮತೀಶನ ಬಂಧುಗಳು ಸುಕ್ಷೇಮಿಗಳೆ ಯೆನಲು ॥
ಕುಶಲವರ್ಗಳು ಜೀಯ ದೇವರಿ ।
ಗೊಸಗೆಯಾದ ವಿವಾಹ ಪತ್ರಿಕೆ ।
ಯೆಸಕವನು ಚಿತ್ತವಿಸಿಯೆನಲೋದಿದವು ಲಿಖಿತಾರ್ಥ ॥ ॥೧೨೮॥

ಸ್ವಸ್ತಿ ಶ್ರೀಮದ್ರಾಜರಾಜ ಸ ।
ಮಸ್ತಗುಣ ರಾಜಿತಸಹಸ್ರ ಗ ।
ಭಸ್ತಿವಂಶಲಲಾಮ ಸಕಲನೃಪಾಲಮಣಿ ಮಕುಟ ॥
ಮಸ್ತಕಾಂಘ್ರಿ ಸರೋಜ ಸೂನೃತ ।
ವಿಸ್ತರಣ ಸಾಕೇತಪುರವಿ ।
ನ್ಯಸ್ತ ವೈಭವನೃಪಗೆ ಬಿನ್ನಹ ಜನಕ ಭೂಪತಿಯ ॥ ॥೧೨೯॥

ರಾಯಚಿತ್ತೈಸಖಿಳ ನೃಪರ ವಿ ।
ಡಾಯಿಗೆಡಿಸಿದ ಚಂದ್ರಧರಗಬಾ ।
ಪಾಯುಧವ ಗೆಲಿದೊಲಿಸಿದನು ರಘುನಾಥನವನಿಜೆಯ ॥

ಯಿಾಯುಶೇಷಮಹೋತ್ಸವದ ಸು ।
ಶ್ರೇಯುವದು ಕೈಕೊಂಡು ಬಂಧು ನಿ ।
ಕಾಯ ಸಹಿತೈತಹುದೆನುತೆ ವಾಚಿಸಿದದಾಲಿಚಿತ ॥ ॥೧೩೦॥

ಏನಿದೆತ್ತಣ ಸುದ್ದಿ ಪರಮ ತ ।
ಪೋನಿಧಿಯ ಮಖಪಾಲನೆಗೆ ತ ।
ತ್ಸೂನುಗಳು ಗಮಿಸಿದರು ಮೇಲಿದು ಬೆರಗಲೇಯನುತ ॥
ಮಾನನಿಧಿ ಮನದನುಗತದ ಸುಂ ।
ಮಾನದಲಿ ಕೇಳಿದನು ಗೌತಮ ।
ಸೂನುವನು ಹೇಳಿದನು ಮುನಿಮೇಲಣ ಕಥಾಂತರವ ॥ ॥೧೩೧॥

ಮುನಿಪ ವಿಶ್ವಾಮಿತ್ರ ಮಖ ಪಾ ।
ಲನೆಯ ಗೌತತ ಮುನಿವರನೆ ಮಾ ।
ನಿನಿಯ ಶಾಪವಿಮೋಚನೆಯ ನರ್ಧೇಂದುಶೇಖಸರ ॥
ಧನುಪರಿಚ್ಛೇದವ ಧರಾನಂ ।
ದನೆಯ ಪಾಣಿಗ್ರಹಣದುಜ್ಜುಗ ।
ವಿನಿತ ಪೇಳ್ದೆಚ್ಚರಿಸಿದನು ಮೇಲಣ ಮಹೋತ್ಸವವ ॥ ॥೧೩೨॥

ಹರುಷಲತೆ ಲಂಬಿಸಲಿಕವರನು ।
ಹಿರಿದು ಮಂನಿಸಿ ಬೀಡಿಕೆಯ ಮಂ ।
ದಿರಗಳಿಗೆ ಬೀಳ್ಕೊಟ್ಟ ನುಚಿತೋಕ್ತಿಯಲಿ ಮರು ದಿವಸ ॥
ಪರುಠವಿಸಿ ಪಯಣವನು ತತ್ಪುರ ।
ವರದ ಹೊರವಳಯದಲಿ ಗುಡಿ ಯು ।
ಪ್ಪರಿಸಿದವು ಮಾಂಗಲ್ಯತೂರ್ಯತ್ರಯದ ರಭಸದಲಿ ॥ ॥೧೩೩॥

ತೆಗಸಿದನು ಭಂಡಾರದಲಿ ಝಗ ।
ಝಗಿಪ ರತ್ನಾಭರಣ ವಸನಾ ।
ದಿಗಳ ನಖಿಳ ಸುಗಂಧ ಕನ್ಯಾ ಭೂಷಣಾವಳಿಯ ॥

ಅಗಣಿತದ ಪೆಟ್ಟಿಗೆಯ ಹೊರೆಯಾ ।
ಳುಗಳ ಸಂದಣಿನೂಕಿದುದು ಸರ ।
ಕುಗಳ ಸದಳದ ಭಂಡಿಗಳು ಭಾರಿಸಿದವಿಳೆಜಡಿಯೆ ॥ ॥೧೩೪॥

ಗಳಿತಹಾಳಿತಧಾಳಧಳ ನಿ ।
ರ್ಗಳಿತ ನಾನಾಧಾಂನ್ಯ ಗುಡತಂ ।
ಡುಲಘೃತಾದಿ ಸಮಸ್ತಸಂಭಾರಗಳಹೇರುಗಳ ॥
ಹಲವುಕೊಟ್ಟಿಗೆ ಭಂಡಿ ಕೆಲಕೊಂ ।
ಬಳತೆಯಲಿ ನಡೆಗೊಂಡವೀ ಯಂ ।
ದಳದ ಸಾಲಿಟ್ಟಣಿಸಿತಂತಃಪುರ ಪುರಂಧ್ರಿಯರ ॥ ॥೧೩೫॥

ಇರಿಸಿ ದೃಷ್ಟಿ ಜಯಂತರನು ಪುರ ।
ಕರಸರಥ ವೇರಿದನು ನೃತ್ಯದ ।
ತರುಣಿಯರ ಹರಿವಾಣದಾರತಿಗಳ ವಿಳಾಸದಲಿ ॥
ಗುರು ವಸಿಷ್ಠ ಸುಮಂತ ಭರತಾ ।
ದ್ಯರು ಸುಹೃಜ್ಜನ ಪೌರಜನ ದು ।
ಬ್ಬರದ ಸಾರಂಭ ದಲಯೋಧ್ಯಾ ಪುರವ ಹೊರವಂಟ ॥ ॥೧೩೬॥

ಮಣಿಮಯದ ದಂಡಿಗೆಯ ಹೊಂನಂ ।
ದಣದ ಮುಸುಕಿನ ಲರಸಿಯರ ಭಾ ।
ರಣೆಯ ಕಂಚುಕಿನಿಕರ ದುಘ್ಘಡಣೆಗಳು ಘೋಡಿಸಲು ॥
ಕುಣಿವ ಕದುರೆಯ ಹಂಣೆದುರುವಾ ।
ರಣವಗೂಢಪದಾತಿಯಲಿ ದಿ ।
ಬ್ಬಣವ ಹೊರವಂಟನು ಮಹೀಪತಿ ಸಕಲ ವಿಭವದಲಿ ॥ ॥೧೩೭॥

ಸೀತೆಯಣುಗರೆ ಕೇಳಿರೈ ದಿಗು ।
ಜಾತ ಜರಿಯಲು ಹೊಡೆವ ವಾದ್ಯ ।
ವ್ರಾತದಲಿ ನಿಂಮರಸ ಪಯಣದ ಮೇಲೆ ಪಯಣದಲಿ ॥

ಚಾತುರಂಗದ ಚಟುಲ ಚರಣೋ ।
ದ್ಧೂತರಜ ವುಪ್ಪರಿಸಲಾರ್ಘುಷ ।
ಕೇತನನ ಚೈತ್ರನ ವಸಂತನ ಕ್ರೀಡೆಯೆನೆ ನಭವ ॥ ॥೧೩೮॥

ದಿವಸ ಹದಿನೈದಕ್ಕೆ ಸಾರಿದ ।
ರಿವರು ಜನಕನ ಪಟ್ಟಣವನು ।
ತ್ಸವವಿಗಿಲು ಬಳಿಕಾ ವಿದೇಹನು ನೃಪತಿ ದಶರಥನ ॥
ಯುವತಿಯರ ನರ್ತನದ ಕಹಳಾ ।
ರವದ ಕಂನಡಿ ಕಲಶದಭಿನವ ।
ದವಿರಳೋತ್ಸವದಿಂ ದಿದಿರ್ಗೊಂಡೊಯಿದ ನೊಲವಿನಲಿ ॥ ॥೧೩೯॥

ಮಾಡಿದರಮನೆ ನಿಜ ನಿವಾಸದ ।
ಬೀಡಿಕೆಗಳಾದವು ಬಳಿಕ್ಕೈಡೆ ।
ಯಾಡಿದರು ಪರಿಚಾರಕರು ಸಚಿವರು ಪುರೋಹಿತರು ॥
ಮೋಡಗಂಡಂಬುಧಿಯು ಹರುಷದ
ಘಾಡಣೆಯುಲಿ ಸುಧಾಮ ಸಹ ಭವ ।
ಗೂಡಿಬಂದನು ಜನಕ ದಶರಥರಾಯನರಮನೆಗೆ ॥ ॥೧೪೦॥

ತವಕದಿಂದಿದಿರೆದ್ದು ಜನಕನ ।
ನವನಿಪತಿ ತಕ್ಕೈಸಿ ಮಹದು ।
ತ್ಸವದಲಾತನ ನಿರಿಸಿದನು ಸಿಂಹಾಸನಾರ್ಧದಲಿ ॥
ರವಿಕುಲಂಗಾನ್ನೃಪತಿ ಕೈಮುಗಿ ।
ದೆವಗೆ ಬೀಯ್ಯಗರಾದಿರೀಭಾ ।
ಗ್ಯವನು ಕಾಣಿಸಿದುದು ಪುರಾಕೃತ ಪುಣ್ಯಫಲವೆಂದ ॥ ॥೧೪೧॥

ಎನುತ ಧಿಮ್ಮನೆ ನಿಂದು ದಶರಥ ।
ಜನಪನಪ ಸವ್ಯದಲಿ ಸಿಂಹಾ ।
ಸನದೊಳವತರಿಸಿರ್ದ ಮತ್ಕುಲ ಗುರು ವಸಿಷ್ಠಂಗೆ ॥

ತನುಪುಳಕದುಬ್ಬಿನಲಿ ನಿಮಿಕುಲ ।
ಜನಪನಾನತನಾಗಿ ಮಿಕ್ಕಿನ ।
ಮುನಿಜನಕೆ ಕೈಮುಗಿದು ಕುಂದ್ರಿದ ನಧಿಕ ಹರುಷದಲಿ ॥೧೪೨॥

ರಾಜಋುಷಿಗಳೊಳುತ್ತಮನು ನಿಮಿ ।
ರಾಜವಂಶದೊಳಧಿಕ ನಗ್ಗದ ।
ರಾಜವರ್ಗದೊಳಗ್ಗಳನು ನೀನೆಂದು ಕೊಂಡಾಡಿ ॥
ಆ ಜಗದ್ವಂದಿತ ತಪೋಧನ ।
ರಾಜನೊಯ್ಯನೆನಗುತ ವಂಶವಿ ।
ರಾಜಿತನೊಳೀಮಾತನೆಂದನು ಕುಲಪರಿ ಶ್ರುತದ ॥ ॥೧೪೩॥

ಮುನಿಯ ಮಾತಿಂಗಾ ಜನಕನಾ ।
ನನವ ನೀಕ್ಷಿಸಿದನು ಶತಾನಂ ।
ದನನನಾಮುನಿ ಬಳಿಕ ನಿಮಿರಾಜೇಂದ್ರ ಸಂತತಿಯ ॥
ಜನಪರುದಯವನರುಹಿ ಮಿಥಿಲಾ ।
ವನಿಪನಭ್ಯುದಯವನು ವಿರಚಿಸಿ ।
ದನು ವಿಶುದ್ಧ ಚರಿತ್ರವನು ಬಳಿಕಾಮಹೀಪತಿಗೆ ॥ ॥೧೪೪॥

ವರವಿದೇಹನೃಪಾಲ ನಾಸಿಮಿ ।
ಧರಣಿಪತಿಗುದ್ಭವಿಸಿದುದವಿ ।
ಸ್ತರಿಸಿದನು ಬಳಿಕಾ ವಿದೇಹ ಪರಂಪರೆಯ ನೃಪರ ॥
ಚರಿತವನು ಕೊಂಡಾಡಿ ಜನಕನ ।
ನಿರತಿಶಯವಂಶ ಪ್ರಸಿದ್ಧ ।
ಸ್ಫುರಿತ ಧಾರ್ಮಿಕ ತನವನೊರೆದನು ಮುನಿ ವಸಿಷ್ಠಂಗೆ॥ ॥೧೪೫॥

ಅಹುದು ಬಳಿಕೇನುತ್ತ ಮೋತ್ತಮ ।
ರಹಿರಲೇ ವಂಶದಲಿ ನಾವೀ ।
ಮಿಹಿರ ವಂಶದ ರಾಯರಸು ನಿಮುಗರುಹ ಬೇಹುದಲೆ ॥

ದ್ರುಹಿಣನಿಂ ಕಶ್ಯಪನು ಕಶ್ಯಪ ।
ಗಹಿಮಕರನಾ ಮಿಹಿರ ನಿಂದೀ ।
ಮಹಿಗೆ ಮನುವರಸಾದನಾತ ನಿನಾಮ್ನು ಮನುವಂಶ ॥ ॥೧೪೬॥

ಆತನಿಂದಿಕ್ಷ್ವಾಕು ವಂಶ ।
ಖ್ಯಾತನಾದನು ಜನಿಸಿದನು ಬಳಿ ।
ಕಾತನನ್ವಯದಲಿ ದಿಳೀಪನುದಾರಕುಲಯುತನು ॥
ಆತನಿಂದೀಜೆಯಲಿ ರಘುವಾಂ ।
ಧಾತ ಸಗರ ಭಗೀರಥಾದಿವು ।
ಹೀತಳಾಧಿಪರೊಲಿದು ಪಾಲಿಸಿದರು ನಿಜಾನ್ವಯವ ॥ ॥೧೪೭॥

ಅಜನು ಬಳಿಕಾ ಸಂತತಿಯು ಭೂ ।
ಭುಜರಮಿಕ್ಕನು ನಡವಳಿಯಲಾ ।
ತ್ಮಜನು ಜನಿಸಿದ ನೀದಶಸ್ಯಂದನ ಮಹೀಪಾಲ ॥
ತ್ರಿಜಗ ಕತಿಶಯರಿವರು ಸದ್ವಂ ।
ಶಜರು ಬಳಿಕೀರಾಮ ರಾಮಾ ।
ನುಜರು ಮಕ್ಕಳು ನಾಲ್ವರೀತಂಗೆಂಪನಾಮುನಿಪ ॥ ॥೧೪೮॥

ಕುಲದಲತ್ಯುತ್ತಮರು ರಾಜಾ ।
ವಳಿಯೊಳಧಿಕರು ನಿಯುತ ಧರ್ಮದ ।
ಬಳಿಕೆಯಲಿ ಬಲ್ಲಿದರು ಕೋವಿದರಖಿಳಕಲೆಗಳಲಿ ॥
ಕೊಳುಕೊಡೆಗೆ ಸಂದೇಹವೇ ನೆರೆ ।
ಬಳಕೆಯವರೇ ನೀವೆನುತ ಮುನಿ ।
ತಿಲಕನುಭಯ ನೃಪಾಲಕರಕೊಂಡಾಡುತಿಂತೆಂದ ॥ ॥೧೪೯॥

ಸಲಹಿದನು ಜನಕಕ್ಷಿತೀಶನು ।
ನೆಲದೊಳುದಿಸಿದ ಮಗಳನೆಂದೇ ।
ಹಲಬರಾಡುವ ರದರಿನರಸನ ತನಯಳಲ್ಲೆಂದು ॥

ಉಲುಕುವದು ಚಿತ್ತದಲಿ ಜನನದ ।
ನೆಲೆಯು ನರುಹಿದಚೊಪ್ಪುಗೊಂಬುದ ।
ಕಲಸಿಕೆಯದೇಕೆಂದು ಮುನಿ ಸುಡಿದನು ವಿದೇಹಂಗೆ ॥ ॥೧೫೯॥

ಮುನಿಪಚಿತ್ತ್ರೈಸಹುದು ನೀವೆಂ ।
ದಿನಿತು ಪೂರ್ವದಿ ರಾಜಸೂಯದ ।
ವಿನುತಮಖ ಭೂಮಿಯನು ಶೋಧಿಸಲಣ್ಣಿನೇಗುಲದ ॥
ಮೊನೆಗೆ ಶಿಲುಕಿದ ಭೂಗತಾಲಯ ।
ವನರುಹಾಕರವಿರಲು ಕಂಡೆನು ।
ಜನಕ ಕಮಲದ ಕರ್ಣಿಕೆಯ ಮಧ್ಯದಲಿ ಕೋಮಲೆಯ ॥ ॥೧೬೦॥

ಈ ಕುತೂಹಲಿಕೆಯನು ಕಂಡು ಮ ।
ಹಾಕುಳದಿ ನಾವಂಜಿ ಮನದಲಿ ।
ಸಾಕು ನಮಗೀ ಸ್ಥಳವೆನುತ ಶದ್ಭುಮಿಗರ್ಭಿತದ ॥
ಶ್ರೀಕರಾಲಯವಿದು ನಿಸರ್ಗ ಪ್ರ ।
ರಾಕೃತಿಯಲಿರಲೆಂಬ ಸಮಯಕೆ ।
ನಾಕಮುನಿ ನಡೆತಂದು ಬಳಿಕಿಂತೆಂದ ನಮಗೆಂದು ॥ ॥೧೬೧॥

ಭೀತಿಬೇಡೆಲೆ ಜನಕ ಜೀವದ ।
ಜಾತ ಮಂದಿರೆ ಯಿಾಕೆ ಯಿಾಕೆಯ ।
ನೋತು ಸಲಹೆಂದಿತ್ತ ನಾಮುನಿ ನಾಥನೊಲವಿನಲಿ ॥
ಸೀತೆಯೆಂದೇ ನಾಮಕರಣವ ।
ನಾತ ಮಾಡಿಸಿ ಬಳಿಕ ಘನಸಂ ।
ಪ್ರೀತಿ ವಚನದಿ ನೊರೆದನಭಿಗತ ಕಾರ್ಯ ವಿಸ್ತರವ॥ ॥೧೬೨॥

ಮನುಜ ರೂಪಿಂದಿಳೆಯೊಳೀ ಗೋ ।
ಮಿನಿಯ ಪತಿ ವಸುಮತಿಯ ಭಾರವ ।
ನೊನೆಯಲುದಿಸಿದನಾ ಮಹಾತ್ಮಂಗೀಕೆ ಶೇರುವಡೆ

ಧನುವನೊಡ್ಡಿ ಪಿನಾಕ ಪಾಣಿಯು ।
ಜನಪರನು ಬರಿಸಾಕಳೆಂಬಾ ।
ಸನವ ಗೆಲಿದಂಗೀವೃದಾತಸೆವಿಷ್ಣು ಕೇಳೆಂದ ॥ ॥೧೫೪॥

ತೆರನಿದೀಗಿದು ನಿಮಗಿದುವೆ ಮನ ।
ಕುರಿಸದಡೆ ನಿಮ್ಮಡಿಗೆ ಸಾಷ್ಟಂ ।
ದೆರವ ಮಾಡುವೆ ವೆನುತ ನೆನೆದನು ನೃಪತಿ ನಾರದನ ॥
ತುರಿಗಿ ತೊಳುವ ಶುಭ್ರಕಾಂತಿಯು ।
ನಿರಿಸಿ ನಲಿನಡೆ ತಂದು ನಿಂದಿರ ।
ಲೆರಗಿದರು ಬಳಿಕುಭಯ ರಾಯರು ನಾರದನ ಪದಕೆ ॥ ॥೧೫೫॥

ಜನಪ ರಿಬ್ಬರ ಹರಸಿ ವಿವಿಧಾ ।
ರ್ಚನೆಯ ಕೈಕೊಂಡುಭಯರಾಯರ ।
ಮನದಣಿಯೆ ಕೊಂಡಾಡಿ ವಂಶಾಧ್ವತೆಯ ಶುದ್ಧತೆಯ ॥
ವಿನುತ ಚರಿತಕೆ ಮೆಚ್ಚಿ ಸೀತಾ ।
ವನಿತೆ ರಾಘುವರಿವರು ಲಕ್ಷ್ಮೀ ।
ವನರುಹಾಂಬಕ ರವತರಣವೆಂದರುಹಿದನು ಮುನಿಪ ॥ ॥೧೫೬॥

ತಿಳುಹಿ ನೃಪರಿತ್ತಂಡವನು ಕೈ ।
ಕೊಳಿಸಿದನು ಕೊಳುಕೊಡೆಕೆ ನಿಮ್ಮವೊ ।
ಲಿಳೆಯೊಳಾರ್ಯೆ ಭಾಗ್ಯವೃಕ್ಷವೆನುತ ಕೊಂಡಾಡಿ ॥
ತಳರ್ದನಮರ ಮುನೀಂದ್ರನಂಬುಜ ।
ದಳ ಸುನೇತ್ರನ ನಾಮ ಕೀರ್ತನೆ ।
ಗಳಸುವೀಣಾನಾದದಲಿ ನಳಿನಜನಪುರಿಗಾಗಿ ॥ ॥೧೫೭॥

ಸುರಮುನಿಯು ಮಾತ ವಿಡಿದು ಲಗ್ನವ ।
ಪರುಠವಿಸಿದರು ಬಳಿಕಲಾ ರಘು ।
ವರಗೆ ಸೀತಾದೇವಿಯನು ಸೌಮಿತ್ರಿಗೂರ್ಮಿಳೆಯ ॥

ಭರತ ಶತ್ರುಘ್ನರಿಗೆ ಜನಕಾ ।
ವರಜ ವೀರ ಕುಶಧ್ವಜಾತ್ಮಜೆ ।
ಯರನು ನಿರ್ಧರಿಸಿದರು ಮುನಿಪ ವಸಿಷ್ಠ ನಾಜ್ಞೆಯಲಿ॥ ॥೧೪೮॥

ಬೀಳು ಕೊಂಡನು ಜನಕನುರು ನಿ ।
ಸ್ಸಾಳದಬ್ಬರ ಗಬ್ಬರಿಸೆ ಭೂ ।
ಪಾಲರರ ಮನೆಗಳಲಿ ನಡೆದವು ಪೂರ್ವ ವೇದಿಗಳು ॥
ಮೇಲೆನಾಂದೀ ಮುಖದ ಸಂಭ್ರಮ ।
ಮೇಳವಿಸೆ ಶೈಲಜೆಯ ಸಿರಿಯು ವಿ ।
ಶಾಲ ವಿಭವ್ರೋದ್ವಾಹಗೇಹದ ಸಕಲ ಸಂಭ್ರಮವ ॥ ॥೧೪೯॥

ಕುಶನೆ ಕೇಳ್ಕಲ್ಯಾಣ ವಿಭವದ ।
ಲೆಸದುದಾಮಣಿ ಮಯವಿವಾಹದ ।
ವಸತಿಮುತ್ತಿನ ಚೌಕದಲಿ ವಿಮಳಾಂಕುರಾರ್ಪಣದ ॥
ಪಸರಿಕೆಗಳುಜ್ಜ್ವಲವಿನೂತನ ।
ವಸನದರ್ಪಣ ದೀಪದಲಿಪೂ ।
ಜಿಸಿದ ಕಾಂಚನ ದೈರಣೆಯ ಶೋಭೋಪಕರಣದಲಿ ॥ ॥೧೫೦॥

ಕನಕ ಪತ್ರಾವಳಿಯವರ ಚಂ ।
ದನದ ಕುಸುಮಾಕ್ಷತೆಯ ಗೋರೋ ।
ಚನದ ಲಾಜೆಯುದಧಿಯು ದೂರ್ವೆಸುವರ್ಣ ಬಾಸಿಗದ ॥
ವಿನುತಭದ್ರದುಕೂಲ ಮಣಿಕಾಂ ।
ಚನವಿಭೂಷಣ ಭಕ್ಷ್ಯಫಲ ದು ।
ಗ್ಧನಲಿ ದಶ ಧಾನ್ಯಾದಿ ವಿಭವದಲೆಸದುದಾಭವನ ॥ ॥೧೫೧॥

ನೆರದುದಾ ಮಂಟಪದ ಬಹಿರಾ ।
ವರಣದಲಿ ವಿಪ್ರರು ವಿಶೂದ್ರೋ ।
ತ್ತರರು ಸಾಹಿತ್ಯರು ಕಲಾವಿದರಖಿಳ ಕೋವಿದರು ॥

ಸರಸಕವಿ ವಾಗ್ಮಿಗಳು ಮಂತ್ರ ।
ಜ್ಞರು ಮಹಾಪಂಡಿತರು ನಾನಾ ।
ದರುಶನಾ ಚಾರಿಯರು ಮುಖ್ಯ ಸಮಸ್ತ ಜನನಿಕರ ॥ ॥೧೬೨॥

ತಾಳಗತಿಯ ಮೃದಂಗರವದ ರ ।
ಸಾಳಗೀತದ ಗಾಯಕರನೈ ।
ಮೇಳವಿಸಿ ನಾಂದಿಗಳ ವೀಣಾ ರವದ ನರ್ತನದ ॥
ಬಾಲೆಯರ ಬಹು ವಿಧದ ಮೋಹನ ।
ಜಾಲದುಬ್ಬಿನಕಾವ್ಯ ಗೀತದ ।
ಸಾಲಸತ್ಪ್ರಾರಂಭ ರಂಜಿಸಿತು ಸಭಾಸ್ಥಳವ ॥ ॥೧೬೩॥

ತರುಣಿಯರ ಶುಭಗೀತ ಧರಣೀ ।
ಸುರರ ಸೂಕ್ತ ಸುಮಂತ್ರ ಸಂಪ ।
ತ್ಪರಿಕರಾಯತರವವೆಸೆದುದು ದ್ವಾರಗೇಹದಲಿ ॥
ತರುಣಕೇಳೀಚೆಯುಲಿ ರಘುಪತಿ ।
ಭರತ ಲಕ್ಷ್ಮಣ ದೇವ ಶತೃ ।
ಘ್ನರುಗಳಿಭ ಕಂಧರದಲೊಪ್ಪಿದ ರಾಜನಾಜ್ಞೆಯಲಿ ॥ ॥೧೬೪॥

ಹಿಡಿದ ಮುತ್ತಿನ ಸೂಸಕದ ಬೆಳು ।
ಗೊಡೆಯು ಚಿಮ್ಮುವ ಚಾಮರದ ಥರ ।
ವಿಡಿದ ಸಿಂಗುರಿಗಳ ವಿಡಾಯಿಯ ನೊಸಲ ಬಾಸಿಗದ ॥
ಹಿಡಿದ ಕೈದೀವಿಗೆಯ ಸಾಲಿನ ।
ತುಡುಕುವೆಳಗಿನ ವಂದಿಜನದು ।
ಗ್ಗಡದ ರಾಜ ಕುಮಾರಕರು ನಡೆತಂದರೊಲವಿಸಲಿ ॥ ॥೧೬೫॥

ಸಂದಣಿಸಿದವು ಕರಿತುರಗ ಬಳ ।
ಸಂದು ನೂಕಿದರ ಖಿಳನಾರಿಯ ।
ರಂದಣಗಳೊಟ್ಟೈಸಿದವು ದಶರಥನ ಬಂಧುಜನ ॥

ಮುಂದೆ ಕಂಚಿಯ ಕಂಚುಕಿಯರೊಲ ।
ವಿಂದ ವಿಪ್ರರ ಮಂತ್ರಘೋಷಣೆ ।
ಯಿಂದ ಬಂದರು ರಾಜಪುತ್ರರು ರಾಜಬೀದಿಯಲಿ ॥ ॥೧೬೬॥

ಅಣುಗ ಕೇಳೈ ನಭದ ತಾರಾ ।
ಗಣ ತದೀಯಮಹೋತ್ಸವದ ದಿ ।
ಬ್ಬಣಕೆ ನೆರದವೊ ಪುರದೊಳಿನಿ ಬೆಳಗಿದವು ದೀಪಾಳಿ ॥
ಮಣಿಮುಕುರದಬಲೆಯರು ನೃತ್ಯದ ।
ಗಣಿಕೆಯರು ಮಾಂಗಲ್ಯ ವಾದ್ಯದ ।
ಕುಣಿಹದಲಿ ನೆಲ ಕುಸಿಯೆ ಹೊಕ್ಕರು ಜನಕನಗರವನಾಗ ॥ ॥೧೬೭॥

ಇಳಿದರಾನೆಯನಬಲೆಯರು ಹೊಂ ।
ದಳಿಗೆಗಳಪಸುಗರ್ಗಳ ದೀಪಾ ।
ವಳಿಯ ಸೊಡರಿನ ಸಾಲಿಸೆಯೆ ಸೂಸುಗಳ ಸೊಗಸಿನಲಿ ॥
ವಳಗಬಲ್ಲವರೂರ್ಧ್ವಮುಖ ದಂ ।
ಜುಳಿಗಳಲಿಜಯ ಯನಲು ಹೊಕ್ಕರು ।
ನಿಳಯವನು ನಿರ್ಜರರ ದುಂದುಭಿ ವಾದ್ಯರಭಸದಲಿ ॥ ॥೧೬೮॥

ಏನನೆಂಬೆನು ಜನಕನೃಪನನ ।
ವೀನ ಭಾಗ್ಯವ ನಮಮ ಜಗದಭಿ ।
ಮಾನದೈವದ ಲಲಿತಪದ ಕಮಲಾಭಿಷೇಚನವ ॥
ಶ್ರೀನಿವಾಸಸ್ಮರಣೆಯಲಿ ವಿ ।
ಜ್ಞಾನ ಮುಖದಲಿ ಮಾಡಿತಾಳ್ದನ ।
ನೂನತೀರ್ಥವ ಶಿರದೊಳಾನು ಕೃತಾರ್ಥನಾಯೆಂದ ॥ ॥೧೬೯॥

ಬಳಿಕ ಮಧುಪರ್ಕಾದಿ ವೈದಿಕ ।
ವಿಳಸದಭಿರಂಜನೆಯಲಾಕಳ ।
ಕಳವ ಮಾಣಿಸು ತಿತ್ತರುತ್ತಮ ಗುಡವ ಜೀರಿಗೆಯ ॥

ನಿಲಿಸಿ ಮೊಟ್ಟಕ್ಕಿಯುಲಿ ಮದವ ।
ಕ್ಕಳಿಗೆ ಕನ್ಯಾ ವರಣವಾದವು ।
.ಕೆಳಗ ವಸ್ತ್ರಾ ಬಿಗ್ಗಿ ಗೆಳೆಯ ಪ್ರಾಣ್ಯಾಹ ರಚನೆಯುಲಿ ॥ ॥೧೨೦॥

ಇಳೆಯು ಮಗಳನು ರಾಘುವಂ ಗೂ ।
ರ್ಮಿಳೆಯನಾಸೌಮಿತ್ರಿಗುಳಿದರಿ ।
ಗುಳದನುಜ ವಿನುಮಿಯುಲ ಧಾರೆಯು ನೆರೆದನಾಜನಕ ॥
ಸುಳಿದರಾ ದಂಪತಿಗಳುರು ಮಂ ।
ಜುಳದಮಣಿ ವೇದಿಕೆಗೆ ಹೋವಾ ।
ನಲನ ಬಲದಿಂದೆಡಕೆ ಸಾರಿದರವರ ಪತ್ನಿಯರು ॥ ॥೧೨೧॥

ಆದುದವರ ವಿವಾಹ ವೈಭವ ।
ವೈದಿಕದಲವನೀಸುರರುಮೊದ ।
ಲಾದ ಯಾಚಕ ವೃಂದ ದಣಿದುದು ಬಹಳ ದಾನದಲಿ ॥
ಆದಶಸ್ಯಂದನನ ಜನಕನ ।
ಮೇದಿನಿಯ ಶೇರುವೆಯು ರಾಯರ ।
ನಾದರಿಸಿದರು ತಂಮೊಳುಡುಗೊರೆ ವುಚಿತವಚನದಲಿ ॥ ॥೧೨೨॥

ವರಶುಭೋದಯದಿಕ್ಕೆ ಸಂಪ ।
ತ್ಕರದನೆಲವನ ಸಿರಿಯು ಸೊಂಪಿನ ।
ಶರಧಿ ಸೊಬಗಿನ ಜನ್ಮ ಸುಂಪಾನದ ಮಹಾಸ್ಥಾನ ॥
ನಿರುಪ ಮೋತ್ಸವಶಾಲೆ ಹರುಷೋ ।
ತ್ಕರದ ಜನನಸ್ಥಳ ವಿದೆನಲಾ ।
ಕರುಷಿಸಿತು ಜನಮನವನನುಪಮ ಪರಿಣಯಾಸ್ಥಾನ ॥ ॥೧೨೩॥

ಪರಮ ಸಂಭ್ರಮದಿಂದ ವರವಾ ।
ಸರ ಚತುಷ್ಟಯ ದಿರುಳು ದಂಪತಿ ।
ವರರು ಮೆರೆದರು ಭದ್ರಮದ ಸಿಂಧುರದ ಕಂಧರವ ॥

ಸುರಚಿರದ ರತ್ನ ಪ್ರಭಾಪಂ ।
ಜರದ ಗದ್ದುಗೆಗಳಲಿನೃಪರಿ ।
ಬ್ಬರು ಟುಪಾ ವಿತರಣದ ವೈಭವದಖಿಳ ರಚನೆಯಲಿ ॥ ॥೧೨೪॥

ಮರುದಿವಸ ಮಾರುಳಿಯ ಸಮನಂ ।
ತರದ ಲವಭೃಥದೋಕುಳಿಯ ವಿ ।
ಸ್ತರಣ ಮೆಸೆದುದು ವಿಲಸಿತೋತ್ಸವ ವಿವಿಧ ವಿಭವದಲಿ ॥
ಪರಿಮಳದ ಪನ್ನೀರ ನವಕ ।
ರ್ಪೂರದ ಕಸ್ತುರಿ ಕುಂಕುಮದ ಕೊ ।
ಪ್ಪರಿಗೆಗಳ ಸಾಲೆಸೆದುದನುಪಮಹೇಮ ಮಣಿಮಯದ ॥ ॥೧೨೫॥

ನನೆಯ ಕಂಚುಕಗಳಲಿ ಹೂದುರು ।
ಬಿನ ಹಿಣಿಲ್ಗಳ ದಂಡೆಗಳನುಂ ।
ಮೊನೆಯ ಮುಂಜೆರಗುಗಳ ಚಂದ್ರಿಕೆ ಪಟಿದಚೆಲ್ಲಣದ ॥
ಕನಕ ರತ್ನಾಭರಣ ಕಾಂತಿಯು ।
ವನಿತೆಯರು ಬಳಸಿದರು ಬವರದ ।
ಮನಸಿಜನ ಮಾಸಾಳಿ ನಂದದಲುಭಯ ಭೂಮಿಪರ ॥ ॥೧೨೬॥

ಕೊಂಡು ಕುಂಕುಮ ವಾರಿಗಳ ಹೊಂ ।
ನಂಡೆಗಳ ಜಲಜಂತ್ರಗಳ ಮುಂ ।
ಕೊಂಡು ನೃಪರಿಬ್ಬರವಧೂನಿಕುರುಂಬವಾ ನೃಪರ ॥
ಮಂಡಳಿಯ ತನ್ನೃಪಕುಮಾರರ ।
ತಂಡಸಾರಂಭದಲಿ ಸುರರೆಳೆ ।
ಮೆಂಡಿರುತ್ಸಾಹಿಸಲು ಹೊಯಿದಾಡಿದರು ವೋಕುಳಿಯ ॥ ॥೧೨೭॥

ಹೊರದುದಿಳೆ ಸಾರಭ್ಯ ಶೈತ್ಯೋ ।
ತ್ಕರವ ನಂಬರವಳಯದಗಲಕೆ ।
ಪರಿಮಳಿಸಿದುದು ಗಂಧ ವಾಹನ ನಾಡಿಕೆಯ ಸರಣಿ ॥

ಸುರಭಿ ಮಯಮಾಯ್ತುಬಿಜನಸಿ ಹಿಮ |
ಕಿರಣನಾವೋದ್ಯೈಕಭಾರೋ |
ತ್ಕರ ಮರೀಚಿಗಳಾದರನುಪಮ ಮಾರಿ ಕೇಳಿಯಲಿ || ||೧೭೮||

ಆದುದಲ್ಲಿಂ ಮೇಲೆ ಮಾಮನೆ |
ಮೇದಿನೀಪತಿ ಜನಕ ರಾಯಂ |
ಗಾದಿವಾಕರ ಕುಲಲಲಾಮನಿಗಖಿಳ ವಿಭವದಲಿ ||
ಆದರಿಸಿದನು ಜನಕ ನಿಭರಥ |
ಕ್ಕೈದು ರತ್ನಾಭರಣ ಕಾಂತಾ |
ಮೇದಿನಿಯ ಬಳುವಳಿಗಳಿಂಬಳಿಕಾಕುಮಾರಕರ || ||೧೭೯||

---

## THE FIGHT BETWEEN VRISHAKETU AND SUDHANVA. *Jaimini Bhárata.*

## ವೃಷಕೇತು ಸುಧನ್ವರ ಯುದ್ಧ. ಜೈಮಿನಿ ಭಾರತ.

|| ವಾರ್ಧಕ ಷಟ್ಪದಿ ||

ಬೆರ ಬೆರಸುತೊತ್ತಿಡಿದು ಮುಂದೆ ಭರದಿಂದ ನಡೆ |
ವರಸರಸುಗಳ ಕಂಠಮಾಲೆಗಳ ತೋರಮು |
ತ್ತೊರಸೊಗಸು ಮಿಗೆಪರಿದಪರಸೂಸುದಂಬಲದ ಚೆನ್ನಿಲದ ಮೇಲೊಕ್ಕಿರೆ||
ಪೊರೆದ ಸಂಧ್ಯಾರುಣದ ಗಗನ ಮಂಡಲದೊಳಂ |
ಕುರಿಸಿದುಡುಗಣದಂತೆ ರಂಜಿಸಿತು ದೆಸೆದೆಸೆಗೆ |
ಪರಿಮಳದೆಲರ್ಸುರಿದು ದಗರುಚಂದನ ಯಕ್ಷಕರ್ದಮದ ಮೊಗವಾಸದ ||
||೧೮೦||

ಪಡೆಯೊಳನ್ಯೋನ್ಯ ಸಂಘರ್ಷಣದೊಳೊಗುವ ಪೊಂ |
ದೊಡವುಗಳ ರೇಣುಗಳೊ ಮೈಗಳಿಂಸೋಂಕಿ ಪುಡಿ |
ವಡೆದ ಕುಂಕುಮಸುಗಂಧಾನುಲೇಪನದಚೂರ್ಣಂಗಳೋಪದ ಘಾತಿಗೆ||

ಪೊಡವಿಯಿಂದಿರದೇಳ್ವರುಣರಜಂಗಳೊ ತೀಡು ।
ನುಡಿಯಲರಿದೆಂಬಿನಂ ಮೇರುವಿನ ಬಂಣಮಂ ।
ಪಿಡಿದದಿವಿ ಭಾಗಮಂ ಜನವನೆಚ್ಚರಿಪಂತೆ ಕೆಂಧೂಳಿ ಮುಸುಕಿತಾಗ ॥
॥ ೧೮೧ ॥

ಮೊಗದಕ್ಕೆಯಿಂ ತಮ್ರೊಡಲ ನೀರಸಾನೆಗ ।
ಳ್ತೆಗೆದು ಚೆಲ್ಲಲ್ಪೊನಲ್ಪರಿದ ಮಡುಗಳ ಕೆಸರೊ ।
ಳೊಗೆದ ನೃಪಮಂಡಲದ ಕನಕಾಭರಣಕಿರಣತರುಣಾತಪದೊಳಲರ್ದ ॥
ಮಿಗೆಸುಳಿವ ಚಾಮರಂಗಳು ರಾಜಹಂಸಾವ ।
ಳಿಗಳ ಸಂಚಾರವಂ ಕಳೆಗೊಂಡ ಜೆಳ್ದಾವ ।
ರೆಗಳಹಂತಿಗಳಂತೆ ಪಡೆಯೊಳೆಸೆದವು ತಳ್ತಿಡಿದಸತ್ತಿಗೆಯಸಾಲ್ಗಳು ॥ ೧೮೨ ॥

ಎತ್ತಿಬಹ ಸತ್ತಿಗೆಯ ಮೊತ್ತಂಗಳೆತ್ತಲುಂ ।
ಕತ್ತಲಿಸೆ ಪೊತ್ತಮಸೆ ಮೆತ್ತಬಲ್ಗತ್ತಿಗಳ್ ।
ಕಿತ್ತು ಭಟರೆತ್ತಿ ಜಡಿವುತ್ತಿರಲ್ಕತ್ತ ಜೆಳಗಿತ್ತವವು ಮತ್ತೆಬಲಕೆ ॥
ಸುತ್ತಲುಂ ಕೆತ್ತವ್ರೊಲ್ಕತ್ತ ಗಜ ಮೊತ್ತರಿಸಿ ।
ಮುತ್ತಿನಡೆವುತ್ತಲರ ಮೊತ್ತಿನಿಲಿಸುತ್ತಿರಲು ।
ದತ್ತಚಮರೋತ್ಥಿತಮರುತ್ತತಿಯೊಳುತ್ತಮಹಿ ಮೋತ್ಸರಂ ಬಿತ್ತರಿಸಿತು ॥
॥ ೧೮೩ ॥

ಮುಂಕೊಂಬ ಮಂದಿ ಕುದುರೆಗೆ ಧರಾಮಂಡಲಂ ।
ಸಂಕುಲದ ವಾದ್ಯಧ್ವನಿಗೆ ದಿಶಾಮಂಡಲಂ ।
ಸಂಖ್ಯೆಯಿಲ್ಲದೆ ಸಿಂಧಸೀಗುರಿ ಪತಾಕೆಗೆ ನಭೋಮಂಡಲಂ ವಿಹರಿದ ॥
ಬಿಂಕದಿಂದಿರಿವ ಕಲಿತನಕೆ ರಣಮಂಡಲಂ ।
ಸಂಕೋಚಮನೆ ಬಂದು ಹಿಡಿದು ಪಾರ್ಥನತುರಗ ।
ಮಂಕಟ್ಟಿ ಬಳಸಿ ಪದ್ಮವ್ಯೂಹಮಾಗಿ ನಿಂದಾರ್ದುದಾಸೇನೆ ನಲಿದು ॥ ॥ ೧೮೪ ॥

ಸುತ್ತಪದ್ಮವ್ಯೂಹಮಂ ರಚಿಸಿ ನಡು ವೆ ನರ ।
ನುತ್ತಮತುರಂಗಮಂ ಕಟ್ಟಿ ಕಾಳಗಕೆ ಭಟ ।
ರೊತ್ತಾಗಿನಿಂದರರಿವೀರರಂ ಬರಹೇಳೆನುತ್ತರಸನಾಜ್ಞೆಯಿಂದ ॥

ಇತ್ತ ಪಾರ್ಥಂಗೆ ಚರರೈತಂದು ನುಡಿದರೀ ।
ವೃತ್ತಾಂತಮಂ ಬಳಿಕ ಪ್ರದ್ಯುಮ್ನನಂ ಕರೆಸಿ ।
ಮತ್ತೆ ಬಂದುದು ವಿಘ್ನಮಿದಕಿನ್ನುಪಾಯಮೇನೆಂದೊಡವ ನಿಂತೆಂದನು ॥
॥ ೧೮೫ ॥

ನಿನ್ನಂ ಕಳುಹುವಂದು ಹಯದಮೇಲಾರೈಕೆ ।
ಗೆನ್ನನಟ್ಟಿದನಲಾ ಪಿತ ನಾತನಾಜ್ಞೆಯಂ ।
ಮನ್ನಿಸುವ ಕಾಲನುಲ್ಲವೆ ತನಗನೀನಿದಕ್ಕೆಣಿಕೆ ಗೊಳಬಹುದೆ ಬರಿದೆ ॥
ತನ್ನ ಭುಜಬಲದಿಂದ ಬಿಡಿಸಿತಂದಪೆ ನಶ್ವ ।
ಮಂ ನೋಡು ಸಾಕೆನುತ ಪಾರ್ಥನಂ ಬೀಳ್ಕೊಂಡು ।
ಪನ್ನಗಾರಿಧ್ವಜನ ತನಯನೈದಿದನಹಿತ ಮೋಹರಕೆ ಸೇನೆಸಹಿತ ॥೧೮೬॥

ಲಟಕಟಿಸಿತಾಗ ಸಾತ್ಯಕಿ ಸಾಂಬ ಕೃತವರ್ಮ ।
ಶಠ ನಿಶಠ ನನಿರುದ್ಧ ಗದ ಮುಖ್ಯರಾದ ಪಟು ।
ಭಟರಖಿಳಯಾದವ ಚತುರ್ಬಲಂ ಜೋಡಿಸಿತು ಸರ್ಬಸನ್ನಾಹದಿಂದ ॥
ದಿಟವಿಂದಜಾಂಡಘಟ ಮೊಡೆಯದಿರ ದೆಂಬಿನಿಂ ।
ಪಟಹ ಡಿಂಡಿಮ ಡೌಡೆ ಭೇರಿ ನಿಸ್ಸಾಳತತಿಂ ।
ಬಟ ಮುರಜ ಢಕ್ಕೆ ಡಮರುಗ ಕೊಂಬು ಕಹಳೆಗಳ ಬಹಳ ರವ ಮ
ಳ್ಳಿರಿದುದು ॥ ॥ ೧೮೭ ॥

ಮೊಗದುದರಿಬಲವ ನನ.ಸಾಲ್ವಕನ ಸೇನೆಯೊ।
ಮ್ಮೊಗದೊಳೆರೆಯುಗಿದ ಫಣಿಕುಲದಂತೆ ರಣದವಕ ।
ಮೊಗದೊಡಗಿದಂಬುಧಿಯ ತೆರೆಯಂತೆ ಯೌವನಾಶ್ವನ ಸೈನ್ಯಮೊಂದಿಸೆ
ಯುಗದಂತ್ಯದಭ್ರದಂತೆದ್ದುಮುರವಣಿಸಿಸಂ । [ಯೊಳು ॥
ಯುಗಕೆ ನೀಲಧ್ವಜನ ಸೈನಿಕಂ ಬಳಿಕ ಕರ ।
ಯುಗಳಂಮುಗಿದು ಕಿರೀಟಿಗೆ ವಿನಯದಿಂದ ಬಿನ್ನೈಸಿದಂ ಕರ್ಣಸೂನು ॥
॥ ೧೮೮ ॥

ಬರಸಿಡಿಲ ಭರದಿಂದ ಮಿಂಚಿನ ಹೊಳಹಿನಿಂದ ।
ಬಿರುವಳೆಗಳೊತ್ತಿಂದ ಕರ್ಣಜಂ ಕಣೆಗಳಿಂ ।
ಕರವುತಿರೆ ನಡುವೆ ಖಂಡಿಸಿದಂ ಸುಧನ್ವನಾತನ ಸರಳ್ಗಳ ನೆಡೆಯೊಳು ॥
ತರಿದಂ ವೃಷಧ್ವಜಂ ಬಳಿಕವನ ಕೋಲ್ಗಳಂ ।
ಬಳಿಕೈದನಾಮುರಾಳಧ್ವಜನ ಸುತ ನಿಂತು ।
ತೆರಹುಗುಡದೋರ್ವ ರೋರ್ವರಮೇಲೆ ಮುಳಿದು ಜರೆದೆಚ್ಚಾಡಿದರ್ಧುರ
ದೊಳು ॥ ॥ ೧೮೯ ॥

ಕ್ಷೋಣಿಗೆ ಸುಧನ್ವ ತಾನಿರೆ ನೀಂ ಸುಧನ್ವನೇ ।
ಮಾಣಿಸುವೆ ನೀ ಪೆಸರ ನೀಕ್ಷಣದೊಳಿಂದು ಪೊಸ ।
ಸಾಣೆಯುಲಗಿನ ಸರಳ್ಗಳ ನೆಚ್ಚು ಕರ್ಣಜಂ ಪೋಳ್ಗಳವನಂ ಮೈಯೊಳು॥
ಕಾಣಿಸೆ ಕೆರಳ್ದಿಲವ್ರೊ ಮೇದಿನಿಗೆ ರಿಪು ಪಂಚ ।
ಬಾಣವೃಷಕೇತು ತಾನಿರಲಾಗಿ ವೃಷಕೇತು ।
ಮೇಣುಂಟೆ ಪೇಳೆನುತ ಕೂರ್ಗಣೆ ಗದನವನ ತನುವನುಳ್ಳಿಸುವಂತೆ॥
॥ ೧೯೦ ॥

ಭುಗ ಭುಗಿಸೆ ಕೋಪಾಗ್ನಿ ಮೂಡಿಗೆಯ ಕೋಲ್ಗಳಂ ।
ತೆಗತೆಗದು ಕರ್ಣತನಯಂ ಸುಧನ್ವನ ರಥದ ।
ಬಗೆ ಬಗೆಯೊಳಮರ್ದಿಸುವ ಛತ್ರಚಾಮರಸಿಂಧಸೀಗುರಿಪತಾಕೆಗಳನು ॥
ಮೊಗ ಮೊಗಸಿ ಮುಂಬರಿವ ಕುದುರೆ ಸಾರಥಿಗಳಂ ।
ಝುಗ ಝುಗಿಪ ಕವಚಮುಂ ತನ್ನ ಕಣೆಯುಂ ನಡುವೆ ।
ತಗ ತಗವ ಕೋಲ್ಗಳಂ ತರಿದವನ ಬಿಲ್ಲನಿಕ್ಕಡಿಗೈದು ಬೊಬ್ಬಿರಿದನು ॥
॥ ೧೯೧ ॥

ಅತ್ತಲಂತಿರಲಿತ್ತಲಿವನ ಸಾರಥಿ ಬೇಗ ।
ಮತ್ತೊಂದು ರಥಮಂ ತರಲ್ಕದ ನಡರ್ದುಮುಸೆ ।
ನೆತ್ತ ಕೂರ್ಗಣೆಗಳಂ ಕರ್ಣಜಂ ತೆಗದೆಚ್ಚಡಾಸುಧನ್ವನ ಮೈಯೊಳ್॥

ತೆತ್ತಿಸಿದವಂಬೊಡಲೊಳಡಿದ ತನಿವೀರರಸ ।
ಮೊತ್ತರಿಸಿ ಮಯ್ಯುಕ್ಕುವಂದದಿಂ ಬಸಿವ ಬಿಸಿ ।
ನೆತ್ತರಸವಿರೆ ಕೆರಳ್ದಿಬ್ಬಡಾಕೋಲ್ಗಳಂ ತರಿವುತ್ತಲಿರ್ದನೆಚ್ಚನು ॥ ॥೧೯೨॥

ಬಲ್ಲೆನನು ಸಾಲ್ವನೆಂಬವಳಪಿಯಂ ಬಿಟ್ಟಡಾಂ ।
ಬಿಲ್ಲಾಳೆ ಪೇಳ್ಧರ್ಮರಾಜನವರಂ ಕಾಣ್ಬ ।
ನಲ್ಲ ಕಾಣಿಸುವೆನೀಗಳೆ ಧರ್ಮರಾಜನವರಂ ತರಹರಿಸು ನಿನ್ನನು ॥
ಎಲ್ಲಿ ತೋರಿಸು ವಜ್ರ ಗಸದಳದ ಬಲ್ಮೆಯಂ ।
ಕೊಲ್ಲಬೇಕಾದೊಡಿದ್ದಪೆನೆನುತ ಕೋಲ್ಗಳಂ ।
ಚೆಲ್ಲಿದಂ ಹಂಸಧ್ವಜನ ಸುತಂ ಕಾಶಿರಾಜನ ಸುತಂ ಘಾಸಿಯಾಗೆ ॥೧೯೩॥

ಫಡ ಫಡೆಲವೆಲವೊ ತೊಲ ತೊಲಗೆನುತ ರೋಷದಿಂ ।
ಘುಡಿ ಘುಡಿಸಿ ಕಾರಿಡುವ ಕಾಯದಿಂದನುಸಾಲ್ವ ।
ನೊಡನೊಡನೆ ಪೊಳ ಪೊಳವ ಪೊಸಮಸೆಯ ನಿಡು ನಿಡು ಸರಳ್ಗಳಂ ತೆಗ
ಎಡೆ ಯೆಡೆಯೊಳಡಿಗಡಿಗೆ ಹಂಸಧ್ವಜಾತ್ಮಜಂ । [ದೆಸುತಿರೆ ॥
ಕಡಿ ಕಡಿದು ಮೀರಿದ ಪರಾಕ್ರಮದೊಳಸುರನಂ ।
ಬಿಡಬಿಡದೆ ಘಾತಿಸಿದ ನಿಪ್ಪತ್ತು ಬಾಣದಿಂ ಬಿಸಿಬಿಸಿಯನೆತ್ತರೊಸರೆ ॥೧೯೪॥

ಹಾಣೆ ಹೊಕ್ಕ ಪನಸವ ಬಾಣಂಗಳರಿಭಟರ ।
ಗೋಣನರಿದುಚ್ಛ್ವಸಿಸೆ ಮಾಣದೆ ಗಗನಕೇಳ್ವ ।
ಶೋಣಿತದ ಧಾರೆಗಳ್ಶೋಣಾಭ್ರದಂತಿರಲ್ಪ್ರಾಣಿಗಳ ದೃಷ್ಟಿಗಳ್ಗೆ ॥
ಕಾಣಿಸಿದುದಾಶಿಸ್ಯೆ ಕ್ಷೋಣಿಪ ಸುಧನ್ವನ ।
ಕ್ಷೀಣ ವಿಕ್ರಮ ಶಿಖಿಯು ಜೋಣಿಯು ಮಹಾ ಜ್ವಾಲೆ ।
ಕೇಣಿಗೊಂಡರಿಬಲಶ್ರೇಣಿಯಂ ಬೊಂದವ ವಿದಾಣಮಂ ಪೊಕ್ಕಂತಿರೆ ॥೧೯೫॥

ಸಂದಣಿಸಿ ದಂತಿಗಳ ಘಟೆಗಳೊತ್ತರಿಸಲ್ಕೆ ।
ಸಂದಣಿಸಿದಂ ಸರಳ ಸಾರದಿಂ ಕಡಿಹಿದಂ । [ದೊಳು ॥
ಕೊಂದನುರವಣಿಸಿ ಕಾಲಾಳ್ಗಳಂ ಮುಳಿದು ಬಳಿಕೊಂದ ಸುಳಿಯದೆ ರಣ

ಬಂದ ವಾಜಿಗಳನಾನಳವಿಯೋಳ್ಕಾಣೆನಿಂ ।
ಬಂದವಾಗಲ್ಕೆ ತಡೆಗಡಿದು ಮದೆಗೆಡಹಿದಂ ।
ಮುಂದಿಟ್ಟಣಿಸಿ ಬಿದ್ದುದಾಗ ರಥಿಕವ್ರಾತಮುಂದಿಟ್ಟ ನೆಸುಗೆಯಿಂದ॥೧೯೬॥

ಕಡೆದೊಡೆದ ಸೀಳಿಂದ ಕಡಿವಡೆದ ತೋಳಿಂದ ।
ತೊಡೆಯುಡಿದ ತುಂಡಿಂದ ನೆಣವನೆಯು ಜೊಂಡಿಂದ ।
ಬಿಡುಮಿದುಳ ತುಂಡದಿಂ ತಂಡದಿಂ ರುಂಡದಿಂ ಮುಂಡದಿಂ ಖಂಡದಿಂದ ॥
ಅಡಗುಗಳ ತಿರುಳಿಂದ ನಿಡುವರದ ಕರುಳಿಂದ ।
ಕೆಡವಿಡುವನೆತ್ತರಿಂ ದೆಡೆವಿಡದೆ ಸತ್ತರಿಂ ।
ದಿಡಿದಿರ್ದು ದಾರಣದ ಲೋರಣದ ವಾರಣದ ಕಾರಣದ ಪೂರಣದೊಳು॥
॥೧೯೭॥

ಕಾಕಬಕ ಗೃಧ್ರ ಗೋಮಾಯು ಸಂತತಿಗಳಿಂ ।
ಡಾಕಿನಿ ಪಿಶಾಚವೇತಾಳ ಭೂತಂಗಳಿಂ ।
ಭೀಕರದೊಳಂ ಜೆಸಿದ ಮಾರ್ದರಿಂಗಣ ಗುಣಿವ ಕಲಿಗಳ ಕಪಾಲಂಗಳು ॥
ಲೋಕದಖಿಳ ಪ್ರಾಣಿಗಳನುಂಡಜೇರ್ತಿಯಿಂ ।
ದೋಕರಿಸಿದನೊ ಕಾಲನೆಂಬಿನಿಂ ಕಣ್ಗೆಸೆವು ।
ದಾಕಳಂಕಾಕುಳದ ಮಾಂಸಕರ್ದಮರುಧಿರ ನೆಣವಸೆ ಮಿದುಳ್ಗಳಿಂದ ॥
॥೧೯೮॥

ನಿಂದು ಕಾದಿದರೊಂಮೆ ಕೈದು ಕೈದುಗಳೊಳ್ಳೆ ।
ತಂದುಕಾದಿದರೊಂಮೆ ಮತ್ತೆ ಪೊಸತೇರ್ಗಳಿಂ ।
ಬಂದು ಕಾದಿದರೊಮ್ಮೆ ಕೂಡೆ ತಮ ತಮಗೊದಗಿದೆಡಬಲದ ಪಡಿಬಲ
ಕೊಂದು ಕಾದಿದರೊಂಮೆ ಶರ ಶರದ ಹತಿಗಳಿಂ । [ವನು ॥
ನೊಂದು ಕಾದಿದರೊಮ್ಮೆ ಚಳಬಳಿಕೆಯಿಂದ ಸಲೆ ।
ಸಂದು ಕಾದಿದರೊಮ್ಮೆ ಸಾತ್ಯಕಿ ಸುಧನ್ವ ರೋರೋರ್ವರ್ಗೆಸರಿಮಿಗಿಲೆನೆ॥
॥೧೯೯॥

ಬವರ ವಿಶಾರ್ವರ್ಗೆ ಸರಿಯಾಗೆ ಕಜುಗೋಪದಿಂ ।
ದವ ಘಡಿಸಿದಂ ಸುಧನ್ವಂ ಬಳಿಕ ಸಾತ್ಯಕಿಯ ।
ಸವಗ ಸೀಸಕ ಬಾಣಬತ್ತಳಿಕೆ ಸಿಂಘಸೀಗುರಿ ಛತ್ರ ಚಾಮರವನು ॥
ಸವರಿಸಾರಥಿಯುಂ ವರೂಥ ಹಯ ಚಕ್ರಮುಂ ।
ಕವಲಂಬುಗಳೊಳೆಚ್ಚು ಕತ್ತರಿಸಿ ಕರದ ಚಾ ।
ಪವನ್ನೈದು ಕಡಿಯಾಗಿ ಮಾಡಿ ಪೇರುರಕೆ ಮೊನೆಗಣೆಗಳಂಮೋಹಿಸಿದನು॥
॥ ೨೦೦ ॥

---

## PREPARATION FOR BATTLE. *Rámáyana.*

## ಯುದ್ಧ ಸನ್ನಾಹ. ರಾಮಾಯಣ.

ಭಾಮಿನೀ ಷಟ್ಪದಿ.

॥ ಸೂಚನೆ ॥ ತುಂಗಬಲ ಸೌಮಿತ್ರಿಯಿಂದುರೆ ।
ಭಂಗಪಟ್ಟ ಮಹೋಗ್ರರಜನಿ ಚ ।
ರಾಂಗನೆಯು ದೂರಿನಲಿ ಖರನೈತಂದ ನಾಹವಕೆ ॥

॥ ಪದ್ಯ ॥ ರಾಯ ರಾಘವಸೂನು ಕೇಳ್ಕಮ ।
ಲಾಯತಾಂಬಕ ನನುಜನುರು ಕಾಂ ।
ಕ್ಷೆಯಧಾರಾ ಭಿನ್ನನಾಸಿಕದಬಲೆ ತಾಬಳಿಕ ॥
ಹಾಯಿದಳು ಹೊರವಡುವ ನೆತ್ತರ ।
ಬಾಯಿತೂಪಿರಿವಶ್ರುಜಲ ಪೂ ।
ರಾಯುದ ಭಿಮಾನ ಚ್ಯುತಿಯ ರೋದನ ನಿನಾದದಲಿ ॥ ॥ ೨೦೧ ॥

ಇವಳ ಕಾಣುತ ಕೆದರಿದವು ಮೃಗ ।
ನಿವಹ ವನದಲಿ ತಾಪಸರು ತವ ।
ತವಗೆ ಹಾಯ್ದರು ಹಾಯ್ಕಿದಂಡ ಕಮಂಡಲಾವಳಿಯ ॥

ಲವನೆ ಕೇಳ್ದೆ ಬಳಿಕ ಹಾಹಾ ।
ರವದ ರಹಣಿಯು ಲಾಜನಸ್ಥಾ ।
ನವನು ಪೊಕ್ಕಳು ಸಾವಿರಳು ಸಭೆಯನು ಖರಾಸುರನ ॥ ॥ ೨೦೨ ॥

ಬಿಸುಟಳೊದರುತ ಶೂರ್ಪಣಖಿ ನಿವ ।
ಡಿಸಿದ ಕಟ್ಟಭಿಮಾನ ವಿಳಸಿತ ।
ಬೆಸುಗೆಗಳಚಿದ ನಾಸಿಕವ ನಿದಿರಲಿ ಖರಾಸುರನ ॥
ಅಸುರನವಳನು ಕಾಣುತೀ ಜಗ ।
ದಸುವಿನಳುವಿನ ಕಾಲರುದ್ರನ ।
ನಿಶಿತ ಕೋಪಜ್ವಾಲೆ ಗಿಂಮಿಗಿಲೆನಲು ಖತಿಗೊಂಡ ॥ ॥ ೨೦೩ ॥

ಹೇಳುಹೇಳೀ ಮಾನಭಂಗ ಚ ।
ಡಾಳ ವಾರಿಂದಾದುದೆಂಬುದ ।
ಹೇಳು ಹೇಳೀ ನಾಸಿಕಚ್ಯುತಿ ಯಾರ ದೆಸೆಯಿಂದ ॥
ಮೇಳವಿಸಿ ತಾನವನ ಮೂಗನು ।
ಸೀಳಿ ನಿಮಿಷಾರ್ಧದಲಿ ನಿಂನೀ ।
ಗಾಳಿ ತಪ್ರಾಣದಲಿ ಬೆಸುವೆನು ಬೇಗ ಹೇಳೆಂದ ॥ ॥ ೨೦೪ ॥

ಕಾಲನಾಗಲಿ ಕಾಲ ದಗ್ಗದ ।
ಶೂಲಿಯಾಗಲಿ ಮೃತ್ಯುವಾಗಲಿ ।
ಕಾಲಭೈರವ ನಾದಡಾಗಲಿ ಹರಿವಿರಿಂಚಿಗಳು ॥
ಹೇಳು ಸಾಕಾರಾದಡಾಗಲಿ ।
ಮೇಲಣಾಹವದೊಳಗೆ ಕೈಹದ ।
ದೇಳಿಗೆಯು ಕೌತುಕವ ನೆಸುತಲೆ ಖಂಡೆಯವ ಝಡಿದ ॥ ॥ ೨೦೫ ॥

ಖರನಖರ ಕೋಪಾನಲನ ದ ।
ಳ್ಳುರಿಗೆ ಸಿಡಿದವು ತಾರೆ ಸಿಮಿಸಿಮಿ ।
ಗರೆದು ದಂಬರ ಸಿಂಧುಸುರಪುರ ಜೊಗದುದಗಲದಲಿ ॥

ತರುಣಕೇಳ್ಳೈ ಕುಶನೆರಾಕ್ಷಸ ।
ತರುಣಿಗಾದಭಿ ಮಾನ ಭಂಗದ ।
ಭರದ ಬವರಕೆ ಬಹಳ ಬಲಸಹಿತಸುರ ಹೊರವಂಟ ॥ ॥ ೨೦೬ ॥

ಮೊರೆವ ವಾದ್ಯಧ್ವನಿಯು ಉಕ್ಕಿನ ।
ವರವರೂಥವ ನಡರಿದನು ನಿ ।
ರ್ಜರರ ಜೀವಗಳಡರೆ ನೆತ್ತಿಗೆ ನೆನೆಯಬಾರದೆನೆ ॥
ಧುರಕೆ ಮುಂಚಿತು ಮುಂದೆ ದೂಷಣ ।
ದುರುಳದುರ್ಮದ ದುಷ್ಟರಣ ದು ।
ರ್ಧರ ಖರತ್ರಿ ಶಿರಾದಿರಕ್ಕಸರಳುಕೆ ಭುವನಚಯ ॥ ॥ ೨೦೭ ॥

ಧೂಳಿ ಗಟ್ಟಿಗರಟ್ಟೆ ಸುಂಟುರು ।
ಘಾಳಿಮುಸುಕಿತು ಸೂಸಿದವು ಶುಂ ।
ಡಾಲಕುಲ ಕಂಬನಿಯತಲೆ ಗೊಡಹಿದವು ತೇಜಿಗಳು ॥
ಮೇಳವಿಸಿದವು ಧೂಮಕೇತು ದಿ ।
ಶಾಳಿಯಲಿರಥ ಕೇತು ದಂಡದ ।
ಮೇಲೆ ಹದ್ದೆರಗಿದವು ಕಲಿಖರ ದೂಷಣಾದಿಗಳ ॥ ॥ ೨೦೮ ॥

ಅವರಿತಿಳೆ ರುಧಿರಾಂಬು ಧಾರೆಯು ।
ಸುದುಗರಿಸಿತಾ ಕಾಶಕಾವಳ ।
ಕದುಬಿತಿನ ಮಂಡಲವನುದುರಿದ ವಿಳೆಗೆ ತಾರೆಗಳು ॥
ಮದಮುಖರಲ್ಲೈ ರಕ್ಕಸರು ತೋ ।
ರಿದ ಮಹೋತ್ಪಾತವನು ಬಗೆಯದೆ ।
ಕದನ ಕೋಳಾಹಳರು ದಳಉಳಿಸಿದರು ಧಾಳಿಯಲಿ ॥ ॥ ೨೦೯ ॥

ಮುಸುಕಿತಭ್ರವನಸುರಸೇನಾ ।
ವಿಸರ ಪದಹತ ಧೂತಧೂಳಿ ।
ಪ್ರಸರ ವಡಿಗಡಿಗಳುಕಿಸಿತು ರಣವಾದ್ಯ ನಿರ್ಘೋಷ ॥

ಜಿಸಜ ಗರ್ಭಾಂಡವನು ಕಿವಿಗೇ |
ಆಸಿತಲ್ಲೈ ನಿಂಮರಸಗೀ ರಾ |
ಕ್ಷಸರ ರಣರಭಸದ ಘಡಾವಣೆ ಪರ್ಣಶಾಲೆಯ.ಲಿ || || ೨೧೦ ||

ಆಗದಿರದೀ ಯಬ್ಬರವು ಕಿವಿ |
ಮೂಗು ಮಸುಳಿಸಿದವಳಬುವರದ |
ಬಾಗೆಕಾರರಬ್ಬರವು ಭರತಾವರಜ ನೋಡೆನಲು ||
ಆಗಳಾ ಸೌಮಿತ್ರಿ ಸಕಳ ಗು |
ಣಾಗಮಜ್ಞನ ನುಡಿಗೆ ಗಿರಿ ತುದಿ |
ಗಾಗಿ ಬಂದೇರಿಳಿದು ಬಿಂನೈಸಿದನು ರಘುಪತಿಗೆ || || ೨೧೧ ||

ಅರಸ ಚಿತ್ತೈಸಹುದು ನಾವಂ |
ದಿರಿದನಾಸಿಕದವಳ ತೆತ್ತಿಗ |
ರುರವಣಿಸಿ ಬರುತಿದೆ ನಿರೂಪಿಸು ಜೀಯ ಸಂಗರಕೆ ||
ಸರಳಸೂತ್ರದಲಹಿತವೀರರ |
ಶಿರವ ಸೂತ್ರಿಸಿ ಕಾಲಕಂಠನ |
ಕೊರಳಿಗಿಕ್ಕುವೆನೆನುತ ಬಿಲುಮಡುಕಿದನು ಸೌಮಿತ್ರಿ || || ೨೧೨ ||

ಬೇಗಮಾಡದಿರಿರಿಸು ಸೀತೆಯ |
ನೀಗಿರಿಯ ಶಿಖರದಲಿ ಕೈಮಿಗಿ |
ಲಾಗಿಬಂದರಿಭಟರ ಭಂಜಿಪ ನೇಮ ನಿನಗಿಸಿತು ||
ಬಾಗೆ ನಮಗೀರಕ್ಕಸರ ರಣ |
ದಾಗು ತಾ ಕಾರ್ಮುಕವನೆಂದು ಸ |
ರಾಗದಲಿ ಸಾಹಸ ಪರಾಕ್ರಮಿ ಸಮರಕನುವಾದ || || ೨೧೩

## SLAUGHTER OF GIANTS. *Rámáyana*

## ಖರ, ದೂಷಣ, ತ್ರಿಶಿರರೆಂಬ ರಾಕ್ಷಸರ ಸಂಹಾರ. ॥ ರಾಮಾಯಣ ॥

### ಭಾಮಿನೀ ಷಟ್ಪದಿ.

॥ ಸೂಚನೆ ॥ ಅಸುರದ ಸಂನಾಹದಲಿ ಖರ ।
ದೂಷಣ ತ್ರಿಶಿರಾದಿಗಳ ಕೀ ।
ನಾಶ ನಗರಿಗೆ ಕಳುಹಿದನು ಸಂಗ್ರಾಮದಲಿರಾಮ ॥

॥ ಪದ್ಯ ॥ ಆದುದಾರಕ್ಕಸಿಯ ನಾಸಾ ।
ಚ್ಛೇದವೇ ಭೂಭಾರ ಕರವಿ ।
ಚ್ಛೇದನಾಪ್ರಾರಂಭವೆಲೆ ಕುಶ ಕೇಳಿದೈ ಬಳಿಕ ॥
ಯೈದಿತೀ ರಘುಪತಿಯನಾಕ್ರ
ವ್ಯಾದಬಲವೇಡೈಸಿಕೊಂಡುದು ।
ಹೋದ ಮೂಗಿನ ಖಳಸತಿಯು ಕೈಸಂಗಾಶ್ರಮವ । ॥ ೨೧೪ ॥

ಅದೆ ನಿಶಾಚರಮೋಘ ಮಾರುತ ।
ಸದನವಸುರಾನ್ವಯ ಪರಾಕ್ರಮ ।
ಸುದತಿಯುಗ್ರದ ಕರ್ಣನಾಸಾಚ್ಛೇದ ನಿಜನಿಳಯ ॥
ಅದೆ ರಣೋತ್ಸವ ಸಿರಿಯವಿಟನ ।
ಭ್ಯುನಯಶಾಲೆ ವಿಶಾಲಬಲಸಂ ।
ಪದನ ಭವನದ ವೀಧಿಯನು ತೋರಿದಳು ಶೂರ್ಪನಖಿ ॥ ॥ ೨೧೫ ॥

ಮುತ್ತಿತಾರಿಪು ಸೇನೆ ಸೂರ್ಯಕು ।
ಲೋತ್ತಮನ ದಳನಿಳಯವನು ದಿಗು ।
ಭಿತ್ತಿಬಿರಿಯಲು ಮೊರೆವ ಭೇರಿ ಮೃದಂಗದುನ್ನತಿಯ ॥
ತಿತ್ತಿರಿಯ ತಂಬಡದಲಗ್ಗಿಯ ।
ಮತ್ತವಾರಣ ಹಯ ವರೂಥದ ।
ಪತ್ತಿಗಳ ಪಡಿತಳದ ಭಾರಿಯ ಘೋರಘೋಷದಲಿ ॥ ॥ ೨೧೬ ॥

ನಡೆ ಸುಮಿತ್ರಾಸೂನು ಕೇಳ್ಕೆಲ ।
ಸಿಡಿ ಸರೋಜಾನನೆ ಸಹಿತ ಸಂ ।
ಗಡಿಸು ಕಡುಕೋದಂಡ ಕೌಂಕ್ಷೇಯಕಕಳಂ ಬಕವ ॥
ತೊಡೆವೆ ನಾತೋರ್ಪಿನಿಶಾಚರ ।
ಪಡೆಯಭಾಗ್ಯದ ಭಾಳಲಿಪಿಯನು ।
ನೆಡಿಸುವೆನು ನೈಶಾಟವಿಜಯಸ್ತಂಭಡಂಬರವ ॥ ॥ ೧೯೭ ॥

ಬಿಗಿದು ಬೆಳುವಟ್ಟೆಯ ಕಠಾರಿಯ ।
ಮಿಗೆ ಕಟಿಗೆ ಸಿಂಗರಿಸಿಹೊಂನಾ ।
ಯುಗದ ಖಡ್ಗವ ನಕ್ಷಯದ ಮೂಡಿಗೆಯ ದಕ್ಷಿಣದ ॥
ಹೆಗಲಿಗಾನಿಸಿ ಹರದ ಜಡೆಗಳ ।
ಜಗುಳದೋಳ್ಕೊಳ್ಚಾಚಿ ಚಾಪವ ।
ತೆಗದುಕೊಂಡೆಲೆಮನೆಯ ಹೊರವಂಟನು ರಘುಪ್ರಭವ ॥ ॥ ೧೯೮ ॥

ಕುಶನೆ ಕೇಳೆಂದಾಹಿರಣ್ಯಕ ।
ನಸೆಮುದ್ದೈತ್ಯಕದಂಬದಲಿರೂ ।
ಹಿಸಿದ ನರಕೇಸರಿಯ ರೌದ್ರಾಟೋಪದಂದದಲಿ ॥
ಮುಸಗಿ ಮಾರ್ಬಲದಿದಿರಿನಲಿ ಮೋ ।
ಹಿಸಿದನೈ ಲವ ಕೇಳು ಹೂಂಕೃತಿ ।
ಮುಸಗೆ ಹೊಡಿದ ನಹಿತರೆ ದೆನಿಳಿನಿಟಲೆನಲು ಧನುವ ॥ ॥ ೧೯೯ ॥

ಧನುವನೇವರಿಸಿದನು ಕೊಪ್ಪಿನ ।
ಕೊನೆಯ ನಾರೈದುಭಯದಲಿ ಸಿಂ ।
ಜಿನಿಯ ಧನಿದೋರಿಸಿದನಬುಜಭವಾಂಡಘಟ ಬಿರಿಯೆ ॥
ವನಧಿಗಳು ತುಳುಕಾಡೆ ತಾರಕಿ ।
ತನಿಗೆದರೆ ತಳ್ಳಂಕಗೊಳೆ ಮೋ ।
ದಿನಿ ಸುರಾಚಲವಲುಗೆ ಬೊಬ್ಬಿರಿದುಬ್ಬಿದನು ರಘುಜ ॥ ॥ ೨೦೦ ॥

ಅರಿದರಾತ್ರಿಶಿರಾದಿಗಳು ಮೂ।
ಕೊರತಿ ಹೇಳಿದ ಹಳ್ಳಿಕಾರನ।
ಕುರುಹ ಕವಿ ಕವಿ ಯೆನುತ ಭೋಯೆಂದುಬ್ಬಿ ಬೊಬ್ಬಿರಿದು॥
ಹರೆಯುಹೊಯಿಲಿನ ಲಮರಗಿರಿ ತರ।
ತರಿಸೆ ತೂಳಿದರಸ್ತ್ರಶಸ್ತ್ರದ।
ಹೊರಿಗೆಯುಲಿ ಹೂಳಿದರು ಹೊಗಿಸಿದರಾನೆಕುದುರೆಗಳ॥ ॥ ೨೨೧ ॥

ಸರಳಸರಿ ಶಲ್ಲೆಹದ ಮಳೆ ಮು।
ದ್ಗರದ ವೃಷ್ಟಿ ಮುಸುಂಡಿ ಮುಸಲದ।
ವರುಷಧಾರಾಸಾರಕದ ಸಿಡಿಲಂಬು ಶಕ್ತಿಗಳ॥
ಬಿರುಬಿನಗ್ಗದ ಸೋನೆ ರಜನೀ।
ಚರಬಲಾಹಕ ಪಟಲದಿಂದ।
ಬ್ಬರಿಸಿ ಸುರಿದುದು ರಾಮಸುಮನೋದ್ದಾಮ ಶಿಖರಿಯಲಿ॥ ॥ ೨೨೨ ॥

ಬೀಸಿದುದು ಬಿರುಗಾಳಿ ರಾಮಶ।
ರಾಸನದ ಸರಳೋಟದಲಿ ಹೊರ।
ಬೀಸಿ ಬಿದ್ದವು ಬಿರುದಿನಸುರರ ಸಾಲುವಲೆ ನೆಲಕೆ॥
ಸೂಸಿ ಸಿಡಿವರುಣಾಂಬುವನಲಾ।
ಕಾಶದಮರ ವಿಮಾನ ವರಳದ।
ದಾಸಣದ ಧಾತುಗಳಲಿರ್ದವು ಕೂಡೆ ಗಗನದಲಿ॥ ॥ ೨೨೩ ॥

ಬೀಳು ವಾಯುಧವನು ನಿವಾರಿಪ।
ಕೋಲದೊಂದು ಪದಾತಿಹಯಶಂ।
ಡಾಲ ರಥಕೊಂದೊಂದು ಮೇಲಾರೈಕೆಗೊಂದು ಶರ॥
ಕೇಳುವದು ಮೂಡಿಗೆಯೊಳೊಂದಂ।
ಬೂಳಿಗವ ನಚ್ಚರಿಯಲಾರಣ।
ಕೇಳು ಸಾಮಕ ವಲ್ಲದಿಲ್ಲೆಸುಗೆಯಲಿ ರಘುಪತಿಯ॥ ॥ ೨೨೪ ॥

ಕಾಣೆ ನಿದಿರಲಿ ಕವಿವ ಕಾದುವ ।
ಕೋಣಪರ ಕೋಳಾಹಳಿಕೆಗಳ ।
ಕಾಣೆನೈ ಕಂಣಳತೆಯಲಿ ಕುಂಭಿಣಿಯು ವಿವರಣವ ॥
ಕಾಣಿಸಿತು ಕರ್ಬುರರ ಕದನದ ।
ಶೋಣಿತಾಂಬುಧಿ ಯುಗಲದಲಿ ಬಿಲು ।
ಜಾಣರೊಳಗಿಂನಾವ ವೀರನೊ ನಿಮ್ಮ ಪಿತನೆಂದ ॥ ॥ ೧೦೫ ॥

ಸೀಳಬಿದ್ದವು ಬಲುವುದೇಭ ಘ ।
ಟಾಳಘೋಟಕ ನಿಕರನೆಲದಲಿ ।
ಹೋಳುಗಳದವು ಕಳಚಿ ಬಿದ್ದು ನಭೋಗ್ರದಲಿ ರಥವ ॥
ಗಾಲಿತಿರ್‍ಱನೆ ತಿರುಗು ತಿರ್ದವು ।
ಕೋಲವೊನೆಯೊಲಿ ಭೂತಗಣ ಕರ ।
ತಾಳದಲಿ ಕುಣಿದಾಡುತಿರ್ದವು ಪಾಡುತವನಿಪನ ॥ ॥ ೧೦೬ ॥

ಎಲೆಲೆಕವಿ ತಿವಿ ಕೊಲ್ಲು ಕೊಲ್ಲಿರಿ ।
ತಲೆಯ ಹೊಯ್ ಹೊಯ್ ಕಾಲ ಹಿಡಿದ ।
ಪ್ಪಳಿಸು ನರನೊಟ್ಟೈಸುವನು ಗೆಡ ರಕ್ಕಸರ ನೆನೆತ ॥
ಬಳಿಯು ರಕ್ಕಸರಧಿಕ ರೆಸುಗೆಯು ।
ಚಳಚವತ್ಕೃತಿಯಿಂದ ದೂಷಣ ।
ಹಳಚಿದನು ಹರಿದಶ್ವ ಕುಲಸರಸಿರುಹಬಾಂಧವನ ॥ ॥ ೧೦೭ ॥

ಉರವಣಿಸಿದರು ರಾಯರಾವ್ತರು ।
ಕರದ ಖಡುಗದ ನೆಗಹಿನಲಿ ನಿಡು ।
ವರಿಯು ಗಜ ತೂಳಿದವು ತೋಳನ ಬಾಳನೆಗಹಿಸಲಿ ॥
ಹರಿಗೆ ಖಡ್ಗ ಕಠಾರಿ ಕುಂತದ ।
ಛುರಿತಕಾರರು ಹೊಕ್ಕರನಿಬರ ।
ಕೊರಳೊಲಾಡಿದ ವಂಬು ಖಳಕುಲ ಕಾಲಭೈರವನ ॥ ॥ ೧೦೮ ॥

ರುಂಡಕುಣಿದವು ಕೂಡೆ ನಭದಲಿ ।
ಮುಂಡ ಹೊರಳಿದವವನಿಯಲಿಕಡಿ ।
ಖಂಡ ಮಯವಾಯ್ತಿಭ ರಥಾಶ್ವಕದಂಬ ನಿಮಿಷದಲಿ ॥
ಕಂಡಷ್ಟೈಯ್ಯಲಿ ಕರುಳರಕುತದ ।
ಜೊಂಡೆಯದ ಜರಿದೆಲುಗಳಲಿ ಜವ ।
ನುಂಡುಕಾರಿದ ನೆಲನವೊಲು ರಣಭೂಮಿ ರಂಜಿಸಿತು ॥ ॥೧೯೯॥

ಒಣಗಃಮಾನವ ಕೇಳು ಕಲಿ ದೂ ।
ಷಣಕಣಾ ಬಂದವನು ಮೃತ್ಯುವಿ ।
ನಣಲಿಗಾಂತ ಶರೀರಿಗುಂಟೆ ಪುನರ್ಭವಾಭ್ಯುದಯ ॥
ತೃಣಕೆ ಕೊಂಬೆನೆ ದೇವ ದಾನವ ।
ಗಣವನಕಟವೃಥಾ ನಿಶಾಟರ ।
ಕೆಣಕಿ ಕೆಟ್ಟೆ ಯೆನುತ್ತ ಕವಿದೆಚ್ಚನು ಕಕುಸ್ಥಜನ ॥ ॥ ೨೦೦ ॥

ಎಚ್ಚಮಾರ್ಗಣ ಗಣವನೆಡೆಯಲಿ ।
ಕೊಚ್ಚಿದನು ಗಹಗಹಿಸುತೆಲವೋ ।
ಕೆಚ್ಚುಕದಳಿಯೊಳುಳ್ಳಡದು ತಾ ಜಗಕೆಚಿತ್ರವಲಾ ॥
ಬೆಚ್ಚದಿರು ದೋರ್ಬಲತಟಾಕವ ।
ಮುಚ್ಚುದೂಬನು ನಾವು ಮುಂದೆನು ।
ತೆಚ್ಚು ಗಗನಕೆ ದೂಟಿಸಿದ ದೂಷಣನ ಮಸ್ತಕವ ॥ ॥ ೨೦೧ ॥

ದೂಟಿಸೆ ಮಸ್ತಕ ವಭ್ರಕಿಟ್ಟದು ।
ಕೂಟದಲಿ ಮುಸಲದಲಿ ಗದೆಯಲಿ ।
ಘಾಟಶಕ್ತಿಯಲೀಟಿಯಲಿ ಶೂಲದಲಿ ನೆತ್ತರಿನ ॥
ಓಟಪಳಿಯಂತರಕದಂಬನಿ ।
ಕಾಟರಿಪ್ಪವನು ಸುರರು ಬೆರಗಿಡೆ ।
ದಾಟಿತಲ್ಲಿಂ ಮೇಲೆ ಮೆಲ್ಲನೆ ಜೀವನಾಖಳನ ॥ ॥ ೨೦೨ ॥

ನೂಕಿದನು ಕೈಯೊಡನೆ ರಥವ ಸ ।
ಮೀಕಸಾಹಸ ಮಲ್ಲನಾ ನರ ।
ಲೋಕನಾಥನ ಸರಿಸದಲಿ ಸರಳಿಸುಗೆಯಲಿ ತ್ರಿಶರ ॥
ಓಕರಿಸಿದುದೊ ಗಗನಮಣಿದಶ ।
ನೀಕಬೆಸಲಾದುದೊ ಲಯಾಗ್ನಿಕ ।
ಣಾಕಲಿತ ಮಾರ್ಗಣವ ನೆನೆಮುಸುಕಿದುದು ಶರಜಾಲ ॥ ॥ ೧೩೩ ॥

ಅಸುರಹರನೇನಲ್ಪನೇ ಸಾ ।
ಹಸದರಿದ್ರನೆ ಸುರ ನರೇಂದ್ರರ ।
ಅಸಮನಯನನ ನೋಟಕಿದಿರೆ ಚರಾಚರದ ವಿಭವ ॥
ವಿಷಮ ವಿಕ್ರಮ ವೀರ ರಾಮನ ।
ವಿಶಿಖ ಮುಖದಲಿ ಸಮರದಲಿ ಜೀ ।
ವಿಸುವನಾರೈ ತ್ರಿಶಿರ ಮಸ್ತಕ ವಡರಿದವು ನಭವ ॥ ॥ ೧೩೪ ॥

ಏನ ಹೇಳುವೆ ನಮಮ! ಹರಚತು ।
ರಾನನಾಖಂಡಲರನಗಸಿದ ।
ವಾನಿಶಾಟನ ಮೂರು ಮಸ್ತಕ ವಟ್ಟ ಸುರಬಲವ ॥
ಆನೆಯಿಂದಿಳಿದೋಡಿದನು ಸುರ ।
ಸೇನೆ ಸಹಿತಮರೇಂದ್ರನಜಗೆ ಪ್ರ ।
ಯಾಣವಾದುದು ಕಾಣೆನಭದೊಳಗಾತ್ರಿಯಂಬಕನ ॥ ॥ ೧೩೫ ॥

ನೋಡಿ ಕಂಡನು ಸುರರಮುರಿಗೆಡ ।
ದೋಡಿಕೆಯ ಕಳಕಳವ ನಸುರವಿ ।
ಭಾಡನಸುನಗು ತೂಗ್ರವೈಷ್ಣವ ಬಾಣವನು ಬೆಸಸೆ ॥
ಝಾಡಿಗಿಡಿಗಳ ಝಳದದಳ್ಳುರಿ ।
ಝಾಡಣೆಯ ಜವಗತಿಯಲಮರರ ।
ಬೀಡಿಗಭಯವ ಕೊಡುತಲಡಗಿಸಿ ತಾಶಿರತ್ರಯವ ॥ ॥ ೧೩೬ ॥

ತನುಜನೇಕಾಗ್ರಕ್ರ್ಯವನು ಸ್ಯಂ।
ದನದ ಮೇಲಣ ಮುಂಡ ಬೊಬ್ಬೆಯು।
ನಿನದ ತಪ್ಪಿಸಿ ತಪ್ಪದೆಚುತಿರ್ದುದು ಕಕುಸ್ಥಜನ॥
ನೆನಹವೆಂತಹುದೂ ಸವಿಯುಸರಳು।
ಬ್ಬಿನಲಿ ಚಕ್ರದಲಿಟ್ಟುದಿಟ್ಟುದು।
ಕನಲಿ ಕೈದುಗಳಸಿತರಲಿ ಜಲಿ ರಾಘವೇಶ್ವರನ॥ ॥೨೩೭॥

ತೀರೆ ಕೈದುಗಳಳಿದುಬೊಬ್ಬೆಯು।
ದೋರಿ ಕಡಿಗೊರಳನಲಿ ಕೋಪಿಸಿ।
ತೇರಿನಗ್ರವ ಪಿಡಿದು ತಿರುಹಿಟ್ಟುದು ಕಬಂಧಕವು॥
ವೈರಿಯನು ಬಳಿಕಾಕಬಂಧದ।
ಭಾರಿಭುಜವಿಕ್ರಮವನಾ ರಘು।
ವೀರ ಕಂಡಚ್ಚರಿಯುತಾಳ್ದನು ತೂಗಿಮಸ್ತಕವ॥ ॥೨೩೮॥

ಲೇಸುಲೇಸೆನುತದರ ಸಮರ ವಿ।
ಳಾಸವಿಭವಕೆ ಮೆಚ್ಚಿನಗುತ ಶ।
ರಾಸನಾಗ್ರದಲಿರಿಯೆ ಬಿದ್ದುದು ಧರಣಿಗಪ್ಪಳಿಸಿ॥
ಸೂಸುವರುಣಾಂಬುವಿನಧಾರೆಯು।
ಭಾಸುರದ ಪರಿಗೊರಳ ತೋಳಿನ।
ಬೀಸಿಗೆಯು ಬಿರಿಸಿನಲಿ ಪೊರಳುತುಮುಂಡವಾಳಿಸನ॥ ॥೨೩೯॥

ಧರಣಿಜಾಸುತ ಕೇಳು ತ್ರಿಶಿರನ।
ಮರಣವನು ಕಾಣುತ್ತ ಜಗಸಂ।
ಹರಣ ರುದ್ರನ ಕುಪಿತರೌದ್ರಾವೇಶ ರೋಷದಲಿ॥
ಖರನು ನೂಕಿದನದ್ರಿಸಾರದ।
ವರವರೂಥವನೊಜನೆ ಗಜರಥ।
ತುರಗ ಕಾಲಾಳಿರಿ ಮುತ್ತಿತು ಮನುಕುಲೇಶ್ವರನ॥ ॥೨೪೦॥

ಅಸುರದ ಬೊಬ್ಬಾಟ ಹಯದುರು ।
ಹೇಷಿತಧ್ವನಿ ಕರಿಯ ಬೃಂಹಿತ ।
ಘೋಷ ರಥರಾಜಿಗಳ ಚಿತ್ಕೃತಿ ಭಟರ ಸಿಂಹರವ ॥
ಆಸಮರ ವಾದ್ಯದ ಘಡಾವಣೆ ।
ಯಾಸುರದಿ ಬೆದರಿಸಿತು ರಾಮು ಸು ।
ವಾಸಿನಿಯು ನಳವಳಿದು ನುಡಿದಳು ರಘುಜನನುಜಂಗೆ ॥ ॥ ೨೪೧ ॥

ದೇವ ರಾಮನ ರೌದ್ರ ರವದಭಿ ।
ರಾವ ಕರ್ಣಕೆ ಬೀಳದಿದೆ ಭುವ ।
ನಾವಳಿಯು ಸಬ್ಬರಿಸುತದೆ ಕರ್ಬುರರ ರಣರಭಸ ॥
ಆವಹದನೋ ಹರಣದಲಿ ಮ ।
ಜ್ಜೀವಿತೇಶನು ಕೇಳದೈ ಯಿಲೆ ।
ದೇವ ನರ ದೇವೇಶ ನಿರವೆಂತೆಂದಳಬುಜಾಕ್ಷಿ ॥ ॥ ೨೪೨ ॥

ನೊಂದೆ ಲಕ್ಷ್ಮಣದೇವ ನಡೆ ರಘು ।
ನಂದನನ ಬೆಂಬಲಕೆ ರಿಪುಗಳ ।
ಬಂದಿಯನು ಬಿಡಿಸವಿಂತ ಮಾರ್ಗಣ ಪಣವನುಣಲಿಕ್ಕು ॥
ತಂದೆ ಹೋಗೈ ತಳುವ ಮಾಡದಿ ।
ರೆಂದು ಜಾನಕಿ ನುಡಿಯಲಾ ಪೂ ।
ರ್ಣೇಂದು ಮುಖಿಗೀ ಮಾತನೆಂದನು ಮಾಗಧೀಸೂನು ॥ ॥ ೨೪೩ ॥

ಹಲಬರುಂಟೇ ರವಿಗಳಡಿಗ ।
ತ್ತಲೆಯ ಮೊತ್ತಕೆ ಘನಬಲಾಹಕ ।
ಬಳಗಕೆನಿಬರು ಮಾರುತರು ಪದನೇರಿದಂಬುಧಿಯು ॥
ಸಲಿಲಕೆನಿಬರು ಜೀಕು ಉರ್ವಾ ।
ನಲರು ಹೇಳಾ ತಾಯೆ ರಾಮನ ।
ಕಲಹಕ್ಕಾಕ್ಸ್ಮೆ ನೆರವು ಕಳವಳವೇಕೆ ನಿಮಗೆಂದ ॥ ೨೪೪ ॥

ಬಿಜಯು ಮಾಡೀ ಕುಧರದಗ್ರದ ।
ಕುಜದ ನೆರಳಿಗೆ ಕೋಟಿ ವೃಷಭ ।
ಧ್ವಜಪರಾಕ್ರಮ ಪೌರುಷನ ರಣಪಥವ ತೋರುವೆನು ॥
ಭಜಿಸದಿರಿ ಭೀತಿಯನೆನುತ ಭೂ ।
ಮಿಜೆಯು ಭೂಧರದಗ್ರಕೇರಿಸಿ ।
ವಿಜಯ ವಿಕ್ರಮ ವೀರ ರಾಮನ ರಣವ ನೋಡೆಂದ ॥ ॥ ೧೪೫ ॥

ಅದೆ ರಘುಕ್ಷಿತಿಪಾಲಕನ ಚಾ ।
ಪದ ಚಡಾಳಧ್ವನಿಯು ಚಿತ್ರ ।
ಸಿದಿರೆ ಮುಂದಿದೆ ಸಮರಭೈರವನುಗ್ರಸಿಂಹರವ ॥
ಅದೆ ಶಿಖಾಳಿಯು ನುಗುಳ್ವ ಸರಳಿನ ।
ಹೊದರ ಹೋರಟೆ ನೋಡೆ ಮೂರುತಿ ।
ಯದೆ ಜಗದ್ವ್ಯಾಪಕನ ನಿಲವಿನ ನಿಗರ ನೋಡೆಂದ ॥ ॥ ೧೪೬ ॥

ಹರಿಯು ಬಿಡಿಲೋಚನನ ನಿದಿರಿನ ।
ಲುರವಣಿಸುತಿದೆ ರಾಮ ಬಾಣ ।
ಸ್ಫುರಿತ ವಿಕ್ರಮ ವಹ್ನಿವಿದ್ವಿಷ ವಿಪಿನವೀಥಿಯಲಿ ॥
ಉರುಳುತಿವೆ ಗಜವರುಣ ಜಲದಲಿ ।
ಹೊರಳುತಿವೆ ಹಯುವಸುರರಸುಗಳು ।
ತೆರಳುತಿವೆ ತಾರಾಧ್ವದಲಿ ತರಳಾಕ್ಷಿ ನೋಡೆಂದ ॥ ॥ ೧೪೭ ॥

ಕುಣಿವುತಿವೆ ರಣಭೂತ ರಾಮನ ।
ಕಣೆಯ ಭೀಂಕೃತಿರವಕೆ ನಭದಲಿ ।
ಮಣಿವುತಿವೆ ಮೌಳಿಗಳು ರಾಮನ ಸಂಗರಕೆ ಸುರರ ॥
ಯಣಿಕೆ ಯಾತಕೆ ರಾಮನೀಧಾ ।
ರುಣಿಯ ಭಾರವ ಭಂಜಿಸಲು ಕಾ ।
ರಣಿಕನಾದನು ಕಮಲನಾಭನು [illegible] ॥ ॥ ೧೪೮ ॥

ಈ ಪರಿಯ ರಣ ರಭಸವನು ಸತಿ ।
ಗಾಪರಂತಪ ತೋರುತಿರಲಾ ।
ಟೋಪ ಮಸಗಿದುದತ್ತ ಸಂಗರಮುಭಯವೀರರಿಗೆ ॥
ಆ ಪುಲಸ್ತ್ಯಾನ್ವಯನು ಚಾಪಕ ।
ಳಾಪವನು ಕೈಕೊಂಡು ಮುಸುಕಿದ ।
ನೀಪತಂಗಾನ್ವಯ ಶಿರೋಮಣಿಯನು ಸರಾಗದಲಿ ॥ ॥ ೨೪೯ ॥

ಮುಸುಕಿದರಿಶರಜಾಲವನು ಖಂ ।
ಡಿಸಿದನಾರಘುನಾಥ ಮೂಗು ।
ಬ್ಬಸವ ಮಾಡಿದನೆಸುಗೆಯಲಿ ಬಳಿಕಾ ನಿಶಾಟಂಗೆ ॥
ವಿಶಿಖಹತಿಯಲಿ ನೊಂದು ಹಲುಮೊರ ।
ದಸುರ ನುಗಿದನು ಬತ್ತಳಿಕೆಯಿಂ ।
ದಸಮಸಯನ ಕಳಂಬವನು ಕಳವಳಿಸೆ ಸುರನಿಕರ ॥ ॥ ೨೫೦ ॥

ಈಸುಭಟನುದ್ದಂಡ ಬಿಲ್ಲಿಂ ।
ದೈಸಲೇ ತಪ್ಪೇನೆನುತ್ತಮ ।
ಹೇಶ ದತ್ತಕಳಂಬವನು ಕಾರ್ಮುಕಕೆ ನೆಲೆಗೊಳಿಸಿ ॥
ಆ ಸಮಸ್ತ ನೃಪಾಲ ಮಧ್ಯದ ।
ಲೀಶಚಾಪವ ಮುರಿದಸ್ಥೈರವ ।
ವಾಸಿನಿನಗಿಂನರಿಯ ಬಹುದೆನುತೆದ್ದು ಬೊಬ್ಬಿರಿದ ॥ ॥ ೨೫೧ ॥

ಅದು ಮಹೇಶ್ವರ ಮಾರ್ಗಣವದೆಂ ।
ದದನದೊಂದಿಗೆ ವಹ್ನಿಸುತ ಚಾ ।
ಪಿದನು ಚಟುಳಚಡಾಳ ಚಾಪವನಾಚರಾಚರದ ॥
ಹೃದಯದಂತರ್ಯಾಮಿ ಸರಳ ।
ತ್ತಿದದು ಬಳಿಕರ್ಧವನು ಕೊಂಡೊಯ್ ।
ದುದುರಿಸಿತು ಸೀತಾಸುಮಿತ್ರಾ ಸುತರ ಸರಿಸದಲಿ ॥ ॥ ೨೫೨ ॥

ಆ ಯೆನುತ ಮುಕ್ಕುರಿಕಿ ತಸುರನಿ |
ಕಾಯುನಿಸಿತಮಹೋಗ್ರಶರನಿಬಿ |
ಳಾಯುಧದ ಭಟ ತಾಕಿದುದು ಗಂಧರ್ವರಂಗದವ ||
ಬಾಯು ಬಿಟ್ಟುದು ಗಗನದಲಿ ರಘು |
ರಾಮಗಾದುದೆ ರಣಧುರಂಧರ |
ದಾಯತಿಕೆಗವಸಾನ ಹಾಯೆನುತಖಿಳಸುರನಿಕರ || || ೧೪೩ ||

ಬಳಿಕಲೇವೇಳುವೆನು ಕಂಚುಕಿ |
ಗಳದ ಕಾಳೋರಗನಖಾತಿಯು |
ಕಳಕಳಿಕೆ ಮಿಗಲುಗಿದನೊರೆಯಿಂದುಗ್ರಬಿಂಚಿಯನು ||
ಕಳಲಿ ರಣದಲಿ ಕೆಡದರಕ್ಕಸ |
ವಲಗೆ ಯಿರಲದ ಕೊಂಡು ಮುಂಗೈ |
ಗೋಳಿಸಿ ಯಜ್ಞದ ವೀರಭದ್ರನ ರಣಕೆ ಗುರುವಾದ || || ೧೪೪ ||

ಅಟ್ಟಿಪೊಯ್ದನು ಹೂಗುವ ತೇರಿನ |
ಘಟ್ಟಿತೂಳಿದ ತೋಳಿನಾನೆಯು |
ಮೆಟ್ಟಿಮೊದೆ ಗೆಡಹಿದನು ವರತೇಜಿಗಳ ತಿಂಥಿಣಿಯು ||
ಅಟ್ಟಿಕುಣಿಯಲು ಕುಬುಜಿರಿದು ತಲೆ
ಯೊಟ್ಟಿಲನು ತೋರಿದನು ಕಾಲಗೆ |
ಕೊಟ್ಟಿಗೆಯೊಲಾಯ್ತೆನಲು ಕಡಿದಿಕ್ಕಿದನು ಖಳಬಲವ || || ೧೪೫ ||

ಮತ್ತೆ ಮುಸುಕುವ ಕರಿಯುಶಿರದಲಿ |
ಮುತ್ತುಗಳ ಮಿಡಿಚಿದನು ಮಾವುತ |
ರುತ್ತಮಾಂಗಕೆ ಹರಿವ ಕಂಡನು ಹಯದರಾವುತರ ||
ಎತ್ತಿಸಿದನಸುಗಳನು ರಥಿಕರ |
ಹತ್ತಿಸಿದನಂಬರವ ಭೀಕರ |
ಹುತ್ತನೇರಿಸಿ ಪೊಳಕಿದನು ಪೊಳಪೊಳವ ಖಡ್ಗದಲಿ || || ೧೪೬ ||

ನೀರೊಳೆಳದಸಿಯಂತೆ ಖಡ್ಗದ ।
ಧಾರೆ ಚರುರಂಗದಲಿ ವಿಹರಿಸಿ ।
ತಾರನುಪಮಿಸುವೆನು ಸುರಾಸುರ ನರ ಭುಜಂಗರಲಿ ॥
ವೀರರಾಮಗೆ ರಾಮನೇ ಪ್ರತಿ ।
ವೀರ ಕೇಳೈ ಮುಗಿಲುಗಂಡ ಮ ।
ಯೂರನವೊಲುಬ್ಬಿದನು ಸಂಗರರಂಗಮಧ್ಯದಲಿ ॥ ॥ ೧೫೭ ॥

ಪುಟನೆಗೆದು ತೆಗದೆಸುವ ಖಳನು ।
ಬ್ಬಟೆಯು ತೇರಿನ ತೇಜಿಗಳ ನಾ ।
ರ್ಭಟಿಸಿ ನೂಕುವ ಸಾರಥಿಯುನಾಧ್ವಜಪತಾಕೆಗಳ ॥
ಅಟಕಟಿಸಿ ಅಳಿಯೇರಿ ತರಿದು ।
ತ್ಕಟವ ತೋರಿದನಂತಕನಬೆಳೆ ।
ಗಟವಟವು ಫಲಿಸುವುದೆ ದೈವದಲಣುಗ ಕೇಳೆಂದ ॥ ॥ ೧೫೮ ॥

ಅಡರಿದನು ಹೊಸರಥವನವನದ ।
ಕಡಿದು ಹಾಯ್ಕಿದನೀತನಾ ಖಳ ।
ಪಡಿರಥಕೆ ದುಂಮಿಕ್ಕಲದ ತರಿದನು ಕೃಪಾಣದಲಿ ॥
ಬಿಡದೆ ನೂರೆಂಭತ್ತು ಪರಿಯಂ ।
ತಡಸಿ ಸಾರಥಿಸಹಿತ ರಥವಂ ।
ಗಡಸ ವಿಂಗಡಿಸಿದನು ಸಂಗರರಂಗಮಧ್ಯದಲಿ ॥ ॥ ೧೫೯ ॥

ಏನಿದಚ್ಚರಿ ಕಡಿದ ಧನುವಿದು ।
ಭಾನುಕುಲಜನದಾಗಧಿರಜಿದ ।
ನೀನು ಕಂಡ್ಯೆಯುಪಮಯುವನುಪಕರಿಸವಲೆ ಪತಿಗೆ ॥
ಆನಿಭೃತಕೋದಂಡ ಚಂಡೆ ।
ಧ್ವಾನರವವನು ಕಾಣನೀನಿದ ।
ಕೇನುಪಾಯುವಕಂಡೆ ಯೆಂದಳು ಸೀತೆ ಮೈದುನನ ॥ ॥ ೧೬೦ ॥

ಐಸಲೇ ಚಿತ್ರೈಸಿ ಚಿತ್ರಕ ।
ಳಾಸವನು ನೀವೆನುತ ಲಕ್ಷ್ಮಣ ।
ನಾಸುರೇಶ್ವರದತ್ತ ವಜ್ರಾವರ್ತ ಕಾರ್ಮುಕವ ‖
ಭಾಸುರಾಸ್ತ್ರ ಮುಖಾಗ್ರದಲಿ ಮೋ ।
ಳೈಸಿ ಮಿಗೆ ಬೋಳೈಸಿ ಸಂಗರ ।
ಸಾಸಿಗರ ಬಲ್ಲಹನ ಬಳಿಗೈದೆಂದು ಬಿನ್ನೈಸೆ ‖ ‖ ೨೬೧ ‖

ಆಯೆನುತ ಹರಿ ವರುಣ ಶಂಕರ ।
ವಾಯು ವಿತ್ತಪ ನಿರುತಿ ಶಿಖಿ ಯಮ ।
ರಾಯುಧರ ನಿರ್ಗಮಕೆ ಲಘುಸಂಧಾನ ಕೌಶಲಕೆ ‖
ರಾಯ ರಾಘವ ನಿಗಮರುಝುಸರಘು ।
ರಾಯ ಮಂದರ ಕೂರ್ಮ ರಾಘವ ।
ರಾಯ ಧರಣಿವರಾಹ ಯೆಂದುದು ಕೂಡೆ ಲಕ್ಷ್ಮಣನ ‖ ‖ ೨೬೨ ‖

ಸಿಡಿಲಮರಿಕಾರ್ಮುಕ ಮುಖದೊಳು ।
ಗ್ಗಡಿಸುವಂತಿರೆ ಧಣಧಣತ್ಕೃತಿ ।
ಜಡಿಯುದ್ಘಾಡಿಯು ಜೋಡಿಗಳ ಬೊಂಬಾಳ ಚಾರಿಯಲಿ ‖
ಹೊಡಕರಿಸಿ ಹೊಗದೇಳ್ವ ಮಿಂಚಿನ ।
ಕುಡಿನೆಳಗ ದೆಸೆದೆಸೆಗೆ ಪಸರಿಸು ।
ತಡಸಿ ಬಂದುದು ಚಾಪವಾ ರಘುಭೂಪ ನಿದ್ದೆಡೆಗೆ ‖ ‖ ೨೬೩ ‖

ಅರಿದನಾಶತ್ರುಘ್ನನಗ್ರಜ ।
ಕುರುಹಿದೆಂಬುದನಾಕೃಪಾರ್ಣವ ।
ನೊರೆಗೊಳಿಸಿ ರಘುನಾಥ ಕೈಯಿಕ್ಕಿದನು ಕಾರ್ಮುಕಕೆ ‖
ತೆರನೆಯಾದುದು ಭೀತಿ ಬಿಲುಬೊ ।
ಬ್ಬಿರಿತ ಕಸುರನಧೈರ್ಯ ಕಾಲನ ।
ಮರೆಯ ಹೊಕ್ಕುದು ಹೊರಳಿಗೊಳಿಸಿದುದು ಮಿಕ್ಕ ರಕ್ಕಸರ ‖ ‖೨೬೪‖

ಮರುಳೆಲಾ ನೀನೆಲವೊ ಖಳ ಮಾ ।
ಗರಿಕಿಗಾದಭಿಮಾನ ಭಂಗಕೆ ।
ಧುರವನೆಸಗುವ ಸಪ್ರಬುದ್ಧನೊ ಮೋಹ್ವಿಚಕ್ಷನೊ ॥
ಶರಣು ವೊಗು ಪಿತನಾಣೆ ಕಾವೆನು ।
ಹರಣವನು ಕೊಡಬೇಡ ಕಾಲಗೆ ।
ಕರುಣವಿಲ್ಲ ವೃಥಾವಿರೋಧಿ ಸಾಯಬೇಕೆಂದ ॥ ॥ ೧೬೫ ॥

ನಿಂನವೊಲು ಬಹು ಬಾಹು ಸಹಸಿಗ ॥
ರಿಂನು ಜನಿಸರು ಜಗದೊಳಾಜಿಯು ।
ನಿಂನುಕೊಂಡೆಸಗಿದರೆ ಮಾಡದುಮಾಗು ಮಾಸಿನಿಗೆ ॥
ಹೊಂನಬಾಣವನೆಚ್ಚು ಕೆಡಿಸದಿ ।
ರೆಂನಮಾತನು ಕೇಳು ತಾನಿದು ।
ನಿಂನ ಚಿತ್ತಕೆ ಬಾರದಿರೆ ಕಲಿಯಾಗುಬೇಗೆಂದ ॥ ॥ ೧೬೬ ॥

ರಾಮ ಕೇಳ್ಕೈ ಕೊಂಡಛಲಪದ ।
ಕಾಮಿತವ ಬಿಡಲೇನು ತನುವಿದು ।
ತಾಮರಸಬಾಂಧವನ ಬಾಳಿಕೆ ತನಕ ಖಾತ್ರಿತವೆ ॥
ಈ ಮರುಳುತನವೇಕೆ ಬಬನಿ ।
ನಾಮನಾಯ್ತೆಂದುಬ್ಬಿ ವಚಿಸುವ ।
ಕೈಮೆಗಿದಕೋಯೆನುತ ತೆಗದೆಚ್ಚನು ಕಕುಸ್ಥಜನ ॥ ॥ ೧೬೭ ॥

ಎಚ್ಚಬಾಣವ ತರಿದು ತೊಡಚಿದ ।
ನುಚ್ಚಿಮಾಡಿಗೆಯುಂಬ ಸಮರರೊ ।
ಳೊಚ್ಚಶೌರ್ಯವ ನಂಸಿ ಕಾಲನ ಕರದು ನೆಲೆಗೊಳಿಸಿ ॥
ಚುಚ್ಚುಗೊಂಡೆಯುದಧಟ ಜಡೆಗಳ ।
ವಚ್ಚಿವರ್ತಿಸಿ ರಾಮಕುಬುಜಿರಿ ।
ದೆಚ್ಚು ಕಡಿದನು ಶಿವನ ಸರಳನಬಾಹುದಾನವನ ॥ ॥ ೧೬೮ ॥

ನೆಗಹಿಕೊಂಡವು ಭೂತ ಬೇಳುವ ।
ವಿಗಡ ರಕ್ಕಸ ತಲೆಯ ನಟ್ಟಿಯೊ ।
ಳೊಗುವ ರಕುತಕೆ ಬಾಯನೊಡ್ಡಿತು ಶಾಕಿನೀನಿವಹ ॥
ಆಗಿದು ನಲಿನಲಿದಾಡಿ ಹೆಣಗಳ ।
ಬಿಗಿದುಕೊಂಡಾಚಂಡಿ ಚಾಮುಂ ।
ಡಿಗಳು ಚಪ್ಪರಿಸಿದವು ಭೇರಿಗಳಮರಕಟಕದಲಿ ॥ ॥ ೨೧೯ ॥

ರಣಕೆ ನವಿಸಿ ಸಮಸ್ತ ಶಾಕಿನಿ ।
ಗಣಕೆ ಬೆಸಸಿ ಮಹೋಗ್ರಚಾಪದ ।
ಗುಣವ ಸಡಲಿಸಿ ಬಿಸಿವ ಪ್ಪೈವಸೆಗಳನು ಬಳಿದಿಡುಕಿ ॥
ಪ್ರಣುತಸುರ ಮುನಿಜನದ ಜಯಜಯ ।
ರ್ಕಣಿತ ರವದುಬ್ಬಿನಲಿ ರಕ್ಕಸ ।
ರಣಭಯಂಕರನೈದಿದನು ನಿಜಪರ್ಣಮಂದಿರವ ॥ ॥ ೨೨೦ ॥

ಸುಳಿದವಾರತಿ ಯಮರಿಯರ ಹೊಂ ।
ದಳಿಗೆಗಳ ದೀವಿಗೆಯ ಮುಕ್ತಾ ।
ಫಲದ ಸೇಶಾಕ್ಷತೆಯಮಳೆ ಸಿರಿಮುಡಿಯ ಸೆರಿಸದಲಿ ॥
ಹೊಳಕಿದವು ಬಳಿಕಿತ್ತಲೀ ಮ್ಯೈ ।
ಥಿಳಿಯ ಕಂಕರದಂಡದಾರತಿ ।
ವೆಳಗು ಹರಕೆಗಳೊಳಗೆ ಹೊಕ್ಕನು ಪರ್ಣಮಂದಿರವ ॥ ॥ ೨೨೧ ॥

## THE SEA.—*Rája Shékhara.*

## ಸಮುದ್ರ ವರ್ಣನೆ. ರಾಜಶೇಖರ.

॥ ಸ್ರಗ್ಧರಾ ವೃತ್ತ ॥

ಅಂಭಃಕುಂಭೀನಕುಂಭೀನ ಸಮುಕರ
ಮಹಾಕೂರ್ಮಕೀರ್ಣೋರ್ಮಿಮಾಲಾ।
ಜೃಂಭದ್ದಂಭೋಳಿಹಸ್ತಾಹತಚಕಿತಗತಕ್ಷ್ಮಾಧ್ರವಿಸ್ಫಾರವಿದ್ಯು
ತ್ಸಂಭಿನ್ನಾಂಭೋಭೃದುದ್ಯತ್ಕಟಚಟುಳಚಳನ್ಮೀನಫೇನಪ್ರತಾನ
ಶುಂಭದ್ಗಂಭೀರಿಮಂ ರಂಜಿಸಿದುದಮಮಃದತ್ತೇಂದ್ರಭದ್ರಂಸಮುದ್ರಂ
॥ ೨೩೦ ॥

॥ ಕಂದಪದ್ಯ ॥

ಪಡೆದುದುಗಡ ಮೊದಲಿಂದುವ।
ಕಡಲಿದು ಮೇಣಿಂದು ಪಡೆದುದುಡುವಿತತಿಯನೆಂ॥
ಬೆಡಗೆಡೆಯಾದುದು ಜಡನಿಧಿ।
ಸಿಡಿದೆಡೆವಿಡದಿಡಿದ ವಾರಿಕಣಗಣದಿಂದಂ॥ ॥ ೨೩೧ ॥

॥ ಮತ್ತೇಭವಿಕ್ರೀಡಿತ ವೃತ್ತ ॥

ಘನ ಲಾವಣ್ಯರಸಾನ್ವಿತಂಗೆ ನವರತ್ನಾಲಂಕೃತಾಂಗಂಗೆಜೀ।
ವನವೊಂದಾಗಿರೆ ಕೂಡಿಮುಳ್ಗಿಸಿದ ಪಾರಾವಾರಕಾಂತಂಗೆ ಸೋ
ಲ್ತು ನದೀನಾರಿಯರಿತ್ತನುಣ್ಗುರುಳಿಪೆಂಬಂತಂಗುಳಿವ್ರಾತ ಮೆಂ
ಬಿನೆಗಂ ತೀರದ ನೀರದಂಗಳೆಸೆಗುಂ ಸದ್ವಿದ್ರುಮಾಗ್ರಂಗಳುಂ
॥ ೨೩೪ ॥

॥ ಚಂಪಕಮಾಲಾ ವೃತ್ತ ॥

ಜಲನಿಧಿ ಜಂಭವೈರಿ ಗರಿಯಂಗಿರಿಯುಂ ಬಿಡುಬೇಗಮೆಂದು ಬಂ
ಧುಳಿಮವೊಲೊಪ್ಪೆ ಸುಸ್ತಸಿತಮುಳ್ಗಟತ್ಕರವಾಳನಾಂತತ।

ಜ್ಜಲದಭಟಂಗದಂ ಕೂಡದೆ ತನ್ನಯ ಜೀವನಮಿತ್ತುದಬ್ಧಿ ಭೂ ।
ತಲದೊಳೆಸತ್ವಶಾಲಿ ಪಗೆಗೇಂಮರೆವೊಕ್ಕನನೀಯ್ಯಲಾರ್ಪನೆ॥
॥ ೧೨೫ ॥

॥ ಶಾರ್ದೂಲ ವಿಕ್ರೀಡಿತ ವೃತ್ತ ॥

ಎನ್ನೊಳ್ಪುಟ್ಟಿದ ಚಂದ್ರನಿಂದೆ ಪಡೆಗುಂ ಸಸ್ಯಾಳಿಸಂಪತ್ತನಂ ।
ತೆನ್ನೊಳ್ಪುಟ್ಟಿದಲಕ್ಷ್ಮಿಯಿಂದೆಪಡೆಗುಂಸೌಭಾಗ್ಯಮಂಧಾತ್ರಿಮೇ।
ಣೆನ್ನೊಳ್ಪುಟ್ಟಿದ ವಸ್ತುವಿಂದೆಪಡೆದಂ ಸರ್ವಾರ್ಥಮಂ ಜಿಷ್ಣುತಾ।
ನೆನ್ನೊಳ್ಪೇಳ್ಸರಿಯಾವನೆಂದುಲಿವಪೋಲುದ್ಘೋಷಿಕುಂಸಾಗರಂ॥
॥ ೧೨೬ ॥

॥ ಚಂಪಕಮಾಲಾ ವೃತ್ತ ॥

ಘುಳುಘುಳಿಸುತ್ತೆ ಬರ್ಪ್ಪತೆರೆಯಿಂನೊರೆಯಿಂಕರೆಯುಂಬಿನೊಳ್ಕರಂ ।
ಬಳೆದತಮಾಲನೀಲವನದಿಂ ಘನದಿಂಬಿನಮಂಬುಗುತ್ತೆಸಂ ।
ಚಳಿಸುವ ಪೀನಮೀನಕುಲದಿಂ ಬಲದಿಂ ಜಲದಿಂ ಸಿಡಿಲ್ದನಿ ।
ಮೊಳತರಶುಕ್ತಿಯಿಂದೆಕರಿಯಿಂಕರಿಯಿಂಗಿರಿಯಿಂದದೊಪ್ಪಗುಂ॥
॥ ೧೨೭ ॥

॥ ಮತ್ತೇಭ ವಿಕ್ರೀಡಿತ ವೃತ್ತ ॥

ಯಮಿಯಂತಂಬರದಂತೆ ಹಂಸನಿಲಯಂಪದ್ಮಾಭಿರಾಮಂ ರಮಾ।
ರಮನಂತಾನಿಧಿಯಂತೆ ಪುಷ್ಕರಯುತಂ ಮತ್ತೇಭದಂತೆರ್ಕನಂ ।
ತೆ ಮಹಾಮಾರುತಿಯಂತೆಚೈತ್ರಕುಜದಂತುದ್ಯತ್ಪ್ರವಾಳಾಶ್ರಯಂ।
ಸುಮದಂತುತ್ತಮನಂತೆಸಂಭೃತರಸಶ್ರೀಗಾಗರಂಸಾಗರಂ ॥ ೧೨೮॥

**SPRING.**—*Channa Basava Purána.*

## ವಸಂತ ಋತು ವರ್ಣನೆ. ಚನ್ನಬಸವ ಪುರಾಣ.

|| ವಾರ್ಧಕಷಟ್ಪದಿ. ||

ಛಳಿಯೊಡ್ಡುಜಾರೆ ತಂಗಾಳಿ ತಲೆದೋರೆ ಪೂ |
ಗಳ ಕಂಪು ಮೀರೆ ಭೃಂಗಂನಲಿದು ಪಾರೆ ಕೋ |
ಕಿಲೆಯ ದನಿಸಾರೆ ಮದನಂಗೆ ಬಲವೇರೆ ನಡಿಗಳ್ತಾರೆ ಮಾಮಗಗಳು ||
ತಳಿರುಗಳು ಪೇರೆ ವಿರಹಿಗಳ ಬಾಯಾರೆ ಸುಖಿ |
ಗಳ ತಾಪವಾರೆ ಮುನಿಗಳ ಮನಂ ಮೀರೆ ಭೂ |
ವಳಯಕೆ ವಸಂತಾಗಮಂ ಮನೋರಾಗಮಂ ಮಾಡುತ್ತೈತರುತಿರ್ದುದು ||
|| ೧೭೯ ||

ಮೌನ ವ್ರತಾಚಾರಿಯಾದ ಕೋಕಿಲೆಯೆಂದು |
ಮೌನವಂ ಬಿಟ್ಟುಲಿಯ ತೊಡಗಿದುದು ಮಲ್ಲಿಕಾ |
ಮಾನಿನಿಗೆ ಚಂಡಾಳಿಗಳ ಸಂಗವಾದುದಿನ ನಸಿಸಿರಿವನೆ ಯೆನಿಸುವ ||
ಅನಳಿನಿಬಂಡಿ ನೊಳಗಾವಳುತ್ತಮಜಾತಿ |
ಹೀನ ಮಾಯ್ತಿಳಿಯೊಳಿಪು ಮಧು:ಸಂಗದಿಂದಲೇ |
ನೇನಾಗದಿರದೆಂದು ತೋರ್ಪಂತೆ ಬಂಧುದು ವಸಂತಮುದ ನೇನೆಂಬೆನು ||
|| ೧೮೦ ||

ಎಳೆದಳಿರ ಕೆಂಪು ಪೂಗಳ ಕಂಪು ಕೋಕಿಲಂ |
ಗಳ ಸರದನುಂಪು ತಂಗಾಳಿಯುಪದಂಪು ಗಿಳಿ |
ಗಳ ರವದಸೊಂಪು ತುಂಬಿಯುಗಾನದಿಂಪು ನಾನಾಫಲಾವಳಿಯ ಬಣ್ಪು ||
ತಿಳಿಗೊಳದತಂಪು ವಿರಹಿಯುಕ್ಕೈಕದಂಪು ಸುಖಿ |
ಗಳ ಮನದ ಪೆಂಪು ಜನಗಳಗುಂಪು ನುಂಪು ಸಂ |
ಗಳಿಸಿತೆಲ್ಲೆಲ್ಲಿಯುಂ ಚೈತ್ರಾಗಮಂ ಬರಲುಪೇಳ್ವುದೇಂಸಚ್ಚರಿಯನು ||
|| ೧೮೧ ||

ತೆರೈಸಿಬರ್ಪ ತುಂಬಿಗಳ ಸ್ಮೈಗಪ್ಪು ಮುಂ |
ಗಾರ ಮುಗಿಲವರ ಝುಂಕಾರವೇ ಮೊಳಗು ಚೆಗ |
ನಾರಿಯುರಥಳಪಗಣ್ಮಿಂಚುಮಾರುತಪತಿಬಿಸೊಳೊಗುವಮಲ್ಲಿಗೆಯುರಳ್ಗಳೆ ||
ತೋರವಳೆವನಿಗಳೊಂದೊಂದುದಿರೆ ಬಂದುಗೆಯು |
ಪೂರಯ್ಯ ಮಾದಿಂದ್ರಗೋಪಂಗಳಾಗೆ ಶೃಂ |
ಗಾರಮಾಯ್ತುದು ವರುಷಮೋ ವಸಂತಮೋತಿಳಿಯಲರಿದೆನಲು ಬನ ಬನ
ದೊಳು || || ೨೮೨ ||

ಸರಸಿಯೊಳಗಾಡುವರಸಂಚೆಯಿಂ ಕೊಂಚೆಯಿಂ |
ಬಿರಿಮುಗುಳ್ಗೆರಗುವ ಮದಾಳಿಯಿಂ ಗಾಳಿಯಿಂ |
ವರಫಲಮನುಂಬಪೊಕ್ಕಳಿಗಳಿಂ ಗಿಳಿಗಳಿಂ ಲತೆವ ನೆಗಳೋವರೆಯೊಳು ||
ಹರುಷದಿಂದೊಪ್ಪುವ ಪಿಕಾಳಿಯಿಂ ಕೇಳಿಯಿಂ |
ಮೊರೆವ ನಾನಾ ಪಕ್ಷಿ ಜಾಳದಿಂ ಮೇಳದಿಂ |
ದರಳೊ ಪೂಗಳ ಸೊಗಸು ಗಂಪಿನಿಂ ಪೆಂಪಿನಿಂ ವನವನಂಗಳ್ಮೆರೆದವು ||
|| ೨೮೩ ||

ಅಲ್ಲಿಗಲ್ಲಿಗೆ ಲತಾ ಮಂಟಪಂಗಳು ನೋಡ |
ಲಲ್ಲಿಗಲ್ಲಿಗೆ ತಳಿರ ಚಪ್ಪರಂಗಳು ಬಳಿ |
ಕಲ್ಲಿಗಲ್ಲಿಗೆ ಪೂಗಳಿಂ ಸಮೆದ ತೋರ್ಪ ಚಾವಡಿ ಮಲಗುಮಾಡಂಗಳು ||
ಅಲ್ಲಿಗಲ್ಲಿಗೆ ಮಾಡಿಪಿಟ್ಟು ತಳಿರುಯ್ಯಾಲೆ ಗ |
ಳಲ್ಲಲ್ಲಿ ಪಂನೀರು ಕಾಲ್ಗಳರವಟ್ಟಿಗೆ ಗ |
ಳೆಲ್ಲೆಡೆಯೊಳಂತು ಸಾಹಸ್ರಯೋಜನವನಂ ಕಣ್ಗೆಸೆದುದೇನೆಂಬೆನು || ೨೮೪ ||

ತಳಿರಗುಡಿ ತೋರಣದ ಸಾಲ್ಗಳಿಂದೆಡೆಗೆಡೆಗೆ |
ತೊಳಪಮುಕುಳದ ಪಂಕರ ತೋರಣಂಗಳಿಂದೆ ಪೂ |
ಗಳಕುರುಜುದೊಪ್ಪ ಮೇರುವೆಗಳಿಂದವನಿಸೆಲೆಸೆಲೆಗಳೊಳ್ ರಂಗೋಳಿಸುವ ||
ನಲಿದುನರ್ತಿಸುವ ಪೂವಲಿಗೆ ಪರಿಕಲಿತ ಪರಿ |
ಮಳ ಜಲಂಗಳನೆ ಜೀರ್ಕೊಳವಿಯಿಂದೆಸೆವ ಪೂ |
ಗಳಬೊಂಬೆಗಳ ಸಾಲ್ಗಳಿಂದೆಚೆಲ್ವಾದ ಪಟ್ಟಣಮದೇಂವರ್ಣಿಸುವೆನು ||
|| ೨೮೫ ||

ಶಿರವನಲ್ಲಾಡಿದಂ ವನಪಾಲನಾ ಬನದ ।
ಸಿರಿಯುನೀಶಂಗರುಪ ಜೇಕೆಂದು ಮಲ್ಲಿಗೆಯು ।
ಬಿರಿವ ಮುಗುಳುಗಳೆಸೆವ ಸಂಪಿಗೆಯು ಪೂಗಳಂತಾವರೆಯುಮೊಗ್ಗೆಗಳನು ॥
ಕುರುವಕದ ಕುಸುಮ ಮುಸುಗೆಯ ತಳಿರನಾಪೊಂನೆ ।
ಯರಳುಗಳ ಪಾದರಿಯ ಪೂವಮುಡಿವಾಳಕ ।
ತ್ತುರಿಯ ಪೊಂಬಾಳೆಗಳ ಪೊಟ್ಟಣಗಳಂ ಕಟ್ಟಿದಂ ಕಣ್ಗೆಸೊಬಗೆಸೆಯಲು ॥
॥ ೧೮೬ ॥

ಕಿಕ್ಕಿರಿದು ಬೆಳೆವ ರಸಬಾಳೆವಣ್ಗೊನೆಗಳಂ ।
ಕಕ್ಕಸದೆ ಬೆಳೆವ ತೆಂಗಾಯ್ಗೊನೆಗಳಂ ನೆಲ ।
ಕ್ಕೊಕ್ಕಪುದುರಸವೆಂಬಮಾವಿನ ಸಿವಣ್ಗೊನೆಗಳಂ ಬೇರ್ಗಳೊಳಗೆ ಕಾತ ॥
ಬಕ್ಕೆವಲಸುಗಳ ಪಣ್ಗೊನೆಗಳಂ ಬಿತ್ತುಳಗ ।
ವೆಕ್ಕಸಂ ಬಿರಿದದಾಳಿಂಬ ವಣ್ಗೊನೆಗಳಂ ।
ಮುಕ್ಕಣ್ಣನೆಡೆಗೆ ವನಪಾಲಕಂಪೊರಿಸಿ ಕೊಂಡೈತಂದ ನಾಕ್ಷಣದೊಳು ॥
॥ ೧೮೭ ॥

ಬಕುಳ ಪಾದರಿ ಪಾರಿಜಾತ ಪುಂನಾಗ ಕುರ ।
ವಕಕರ್ಣಿಕಾರ ಪ್ರಿಯಂಗು ಮಧುದೂತಿ ಜಂ ।
ಪಕತಿಲಕ ಬಂಧೂಕ ಚೂತ ಕರವೀರ ಕೇತಕಿ ಯೂಧಿಕಾಮಲ್ಲಿಕಾ ॥
ಪ್ರಕಟ ಮಂದಾರಬಗೆ ನಾಗಸಂಪಗೆಯಾದಿ ।
ಸಕಲ ಕುಸುಮಂಗಳಂ ತಂದು ತಮತಮಗೆ ಕಾ ।
ಣಿಕೆಯ ನವರಿಯುಬಂಚಿಕೆ ಸಹಿತಲೀಶ್ವರಂಕೈಕೊಂಡನುತ್ಸವದೊಳು ॥
॥ ೧೮೮ ॥

ಕಂಗೊಳಿಪರಂನ ಸೋಪಾನವಿತಾನ ಪ್ರಸೂ ।
ನಂಗಳಿಂದೇಳ್ವ ತೆರೆನೊರೆ ಪೊರೆಯುರಾಜ ಹಂ ।
ಸಂಗಳಿಂ ನಿರ್ಮಳಿನ ಪುಳಿನನಳಿನಂಗಳಿಂ ತಡಿವಿಡಿದು ಸಂತಸದೊಳು ॥
ಸಂಗಳಿಸಿ ನಲಿವ ನವಚಕ್ರ ನಕ್ರಪ್ರಕ್ರ ।
ಮಂಗಳಿಂ ಭೃಂಗಾಳಿಗಾಳಿಕೇಳಿಗಳ ವಿಹ ।
ಗಂಗಳಿಂ ಪೂಗಂಪು ತಂಪುಗುಂಪುಗಳೊಳಾಕಾಸಾರಮಂದೆಸೆದುದು ॥ ೧೮೯ ॥

ವಿಕಸಿತೋತ್ಪುಂಡರೀಕೋತ್ಸಾಹದಿಂ ಮೆರೆವ ।
ವಿಕಟವಾಜಿಗಳಿಂದ ತೀತವಾರಣದಿಂದೆ ।
ಪ್ರಕಟತರ ರಾಜಹಂಸಾಳಿಗಳ ಸಾಖ್ಯದಿಂ ವಿವಿಧಕೋಶಂಗಳಿಂದ॥
ಸಕಲಕುವಲಯ ಮಹೋತ್ಪತ್ತಿಯಿಂ ಕಾಲಕಾ ।
ಲಕೆ ಮುಕುಳಿತೋತ್ಕರ ಸರೋಜದಿಂದಮಲ ।
ಮಸ್ತಕದೊಳೊಪ್ಪುವ ಭುವನ ಶೋಭೆಯಿಂ ಸರಸಿಯರಸಿನ ತೆರದೊಳಂ
ದೆಸೆದುದು ॥ ॥ ೬೯೦ ॥

ಪರವರಾಬ್ಜರಮ್ಯ ಮುಡುಗಣದಂತೆ ಹರಿಯಂತೆ ।
ವರದಿಜಾಲಂಕೃತಂ ಹನನಂತೆ ಯಜ್ಞದಂ ।
ತುರುಚಕ್ರಶೋಭಿರವಿಯಂತೆ ರಥದಂತೆ ಸತ್ಕುವಲಯಾ ಶ್ರಿತವೊಪ್ಪುವ॥
ಅರಸನಂತಾ ಕೃಷ್ಣಪಕ್ಷೇಂದುವಂತ ವ್ರತ ।
ಪರಿಪಾಲನಂ ಸಗ್ಗದಂತಬ್ಧಿಯಂತೆ ಶಿವ ।
ಭರಿತವಾ ಕೈಲಾಸದಂತೆ ವನದಂತೆ ನಲ್ಪದ್ಮಾಕರಂ ಮೆರದುದು ॥೬೯೧॥

ಹಾರಿದ್ರ ಜಲಮದೊಂದೆಡೆ ರಕ್ತವರ್ಣಾಂಬು ।
ವ್ರೋರೊಂದು ಕಡೆಸಿತೋದಕವೊಂದುದೆಸೆ ಕೃಷ್ಣ ।
ನೀರೊಂದು ದೆಸೆಯೊಳಿರಲೊಪ್ಪಿತು ಕೊಳಂ ಶಿವ ಕ್ರೀಡನಾರ್ಥಂಕದಡಿದ॥
ಗೋರೋಜನವಮಳ ಕುಂಕುಮದ ಮಲಯಜದ ಕ ।
ಸ್ತೂರಿಯ ಕೆಸರ್ಗರೆಗಳಂ ತಡಿಗೆ ಸಾರೆಕಾ ।
ಸಾರವಧುವೀಶಗೆ ನಿವಾಳಿಸುವಬಂಣವುರದಾರತಿ ಯಿದೆಂಬಂತಿರೆ ॥೬೯೨॥

---

THE FOREST AND CAVES OF SHRIGIRI—*Basava Purāṇa.*

## ಶ್ರೀಗಿರಿಯ ಅರಣ್ಯಗುಹೆಗಳ ವರ್ಣನೆ. ಬಸವ ಪುರಾಣ.

|| ಭಾಮಿನೀ ಷಟ್ಪದಿ. ||

|| ಸೂಚನೆ || ಶ್ರೀಗಿರೀಂದ್ರಕೆ ಪೋಗಿಯುದರ ವು |
ಹಾಗಹನಗುಹೆಗಳೊಳರಸಿ ಶಿವ |
ಯೋಗಿ ಮಲ್ಲರಸರನು ಕಂಡನು ಮಾದಿರಾಜಯ್ಯ ||

|| ಪದ್ಯ || ಪರಮ ಭಕ್ತರ ಪರಮ ಭಕ್ತನು |
ಶರಣರಿಗೆ ಶರಣನು ಹಿರಿಯರಿಗೆ |
ಹಿರಿಯ ನರಸರಿಗರಸನಂ ಮೊದಲಿಗರ ಮೊದಲಿಗನು ||
ಸರಸರಿಗೆ ಸರಸನು ವಿರಸರಿಗೆ |
ವಿರಸ ನಿತರರ ಬೆರಸಿದವರಂ |
ಬೆರಸನೀಶ್ವರ ವಿರಹಿತರ ವಿರಹಿತನ ತುಳಸುವುತಿ || || ೧೯೩ ||

ನಾದವಿದ್ಯಾ ಪಂಡಿತಂ ವೀ |
ಣಾದಿ ಸಕಳಕಳಾವಿದಂಭರ |
ತಾದಿಶಾಸ್ತ್ರ ವಿಚಕ್ಷಣಂಸದ್ಗುಣಗಣಾನ್ವಿತನು ||
ವೇದವೇದಾಂತಾದಿ ಕಥನಾ |
ಪಾದಿತೋಪರಿ ತತ್ವನಿಶ್ಚಯ |
ವಾದಿಘನಸಂಸಾರ ದುರ್ವ್ಯಾಪಾರ ಸಂಹಾರಿ || || ೧೯೪ ||

ಯಮನಿಯಮ ಯೋಗವ್ರತಾಯುತ |
ಶಮದಮಾಶ್ರಯ ಸಚ್ಚರಿತ ನು |
ತ್ತಮಾಚಾರ ಪ್ರವರ್ತನಿರಸ್ತ ಸಕಲಾರ್ತಿ ||
ಅಮಿತ ಕರುಣಾಮೂರ್ತಿದಶ ದಿ |
ಗ್ಭ್ರಮಿತ ಕೀರ್ತಿಯುದಾರಧೀರನು |
ನಮಿತ ಲೋಕನೆನಿಪ್ಪ [illegible] ಮಾದರಸ || || ೧೯೫ ||

ಆಮಹಾಂತಂ ನಿಹಿತಭಕ್ತಿ ಮ ।
ಹಾಮಹಿಮೆ ಯಿಂದಂಬೆಯೆಂಬಖಿ ।
ಶಿವಪುರವೇ ರಾಜಧಾನಿಯೆನಲ್ಕೆ ಸುಶಿವೆತ್ತು ॥
ಭೂಮಿಯುಂ ಪರಿಪಾಲಿಸುತ್ತು ।
ದ್ದಾಮ ವಿಕ್ರಮವೀರವಿತರಣ ।
ನೇಮರೂಪ ವಿವೇಕದಿಂದಾಳುತ್ತ್ತ ರಾಜ್ಯವನು ॥ ॥ ೧೯೬ ॥

ಚಾರುಗೌರವ ಲೈಂಗ್ಯಭಕ್ತ್ಯಾ ।
ಚಾರದಿಂದರ್ಚಿಸುತ ಧರ್ಮವಿ ।
ಚಾರದೊಳು ವಿವಿಧೋಪಚಾರಂಗಳನೊಡಂ ಬಡಲು ॥
ಸೂರಿಲೋಲಂಗಳಿಗೆ ಗಳಿಗೆಗ ।
ನಾರತಂ ಭಜಿಸುತ್ತ ನಾನಾ ।
ಚಾರುಪುಷ್ಪಕ ಶೀತಳಪ್ರದ ಯುತನಿವಾಸದಲಿ ॥ ॥ ೧೯೭ ॥

ಆದಿಶಿವನಂ ಸ್ತುತಿಸುವದರಿಂ ।
ಮಾದಿರಾಜನು ಮತ್ತೆಬತ್ತೀ ।
ಸಾದಿರಾಗಂಗಳಗನಿತುದಂಡಿಗೆಗಳಂರಚಿಸಿ ॥
ವೇದಿಸಲು ತಾನಾವರಾಗನಿ ।
ನಾದವಾ ಸಕಳೇಶನೊಳ್ಪ್ರಿಯು ।
ವಾದರಾಗದ ವೀಣೆವೊರೆಯುಲ್ಪ್ರಸ್ತುತವನರಿದು ॥ ॥ ೧೯೮ ॥

ಧರೆಯೊಳವು ಮೊದಲಾದ ಸೊಗಸುವ ।
ಪಿರಿದುರಾಗಂಗಳು ಮೆರವಮಲ ।
ಹರಿಲಲಿತೆ ಧನ್ಯಾಶಿ ಮಂಗಳ ಕೌಶಿ ದೇಶಾಕ್ಷಿ ॥
ಕುರುಜಿ ಗುರ್ಜರಿ ದೇಶಿ ವೇಳಾ ।
ವುರಿಯು ತೋಡಿಯು ಚಿತ್ರಸೇಳಾ ।
ವುರಿಯು ಕಂಬಾವತಿಯು ಮಧು ಮಾಧವಿಯು ಕಾಂಬೋದಿ ॥ ೧೯೯ ॥

ಮಾಳವ ಶ್ರೀಮೇಘರಂಜಿವ ।
ರಾಳಿ ಸಿಂಧುವರಾಳಿ ನಾಗವ ।
ರಾಳಿ ದೇವಕ್ರಿಯೆಯು ಸಾಳಗ ನಾಟ ಭೂಪಾಳಿ ॥
ಗೌಳಪಂಚಕವುಂಬ ಹುಳಿ ಬಂ ।
ಗಾಳವುಂ ಗುಂಡಕ್ರಿಯೆಯು ಮೇ ।
ಘೌಕ್ರೀಳಿಯುಂ ಪಳಮಂಜರಿಯು ರಾಮ ಕ್ರಿಯೆಗಳೆಲ್ಲ ॥ ॥ ೩೦೦ ॥

ರೇವಗುಪ್ತಿಯು ಭೈರವಿದ್ವಯು ।
ಮಾವಸಂತಮುಮಾದಿಯಾದಸು ।
ಭಾವಿಸಲ್ಕಿ ೨(ರಾಗ ಪಾರುಷರಾಗವಿತತಿಗಳು ॥
ಭಾವ ಸರಸ ಸಲಕ್ಷ್ಮ ಲಕ್ಷಣ ।
ಜೀವಮೇಳವ ನಿರ್ವಿಕಾರಕ ।
ಳಾವಿನೇಕನಿನಾದ ನೂತನಗೀತಜಾತದಲಿ ॥ ॥ ೩೦೧ ॥

ಪೊಂಗಿಹಾಡುತ ತಮತಮಗೆವಾ ।
ದ್ಯಂಗಳುಲಿಯಲ್ಕೇಳಿಕೆಗಳಸು ।
ರಂಗಗತಿಗಳನಾಡುತವರವರಿಗೆ ಪರಿಣಮಿಸಲು ॥
ಜಂಗಮವನರ್ಚಿಸುತ ಲಿಂಗಾ ।
ಸಂಗ ಪೂಜಾರತಿಯೊಳಿರುತಂ ।
ಸಾಂಗದಿಂ ಸಾಂಮ್ರಾಜ್ಯ ಭೋಗಕೆ ತಾಂಸೊಗಸದಿರಲು ॥ ॥ ೩೦೨ ॥

ಮಲ್ಲರಸನೆಂಬೊಬ್ಬ ಧರಣೀ ।
ವಲ್ಲಭಂ ಮುಂನಿಹಿಗೆ ರಾಜ್ಯವ ।
ನೊಲ್ಲದೆಲ್ಲಂ ತ್ಯಜಿಸಿ ತಾಂ ಶ್ರೀಪರ್ವತಕೆಹೋಗಿ ॥
ಅಲ್ಲಿ ನಿಶ್ಚಿಂತದ ಸಮಾಧಿಸ ।
ಮುಲ್ಲಸನದಿಂದಾಗಿರೀಂದ್ರನ ।
ಸಲ್ಲಲಿತ ಘನಬಿಲ್ವವಿಪಿನಾಂತರದೊಳಿಹನೆಂದು ॥ ॥ ೩೦೩ ॥

ಅವರ ಗುರುತರ ಭಕ್ತಿ ಚರಿತವ ।
ನವರ ಸದ್ಗುಣವಿಹಿತ ಕಥನವ ।
ನವರಪರಮಧ್ಯಾನ ಯೋಗದ ನಿಜಮಹೋನ್ನತಿಯ ॥
ಅವರ ಶಿವತತ್ವಾನುಭವಸಂ ।
ಭವಮಹತ್ವ ಸಮಗ್ರತೆಯುಮಂ ।
ಶಿವ ಗಣಂಗಳು ಹೇಳುತಿರಲಂತಾಗಳುಂ ಕೇಳ್ವ ॥ ॥ ೨೦೪ ॥

ಆಮಹಾ ಶಿವ ಯೋಗಿವರನಂ ।
ಪ್ರೇಮದಿಂದಾನೆಂದು ಕಾಣ್ಬೆನೊ ।
ಆ ಮಹಾತ್ಮನ ಮೆಲ್ಲಡಿಯನೆಂದರ್ಚಿಸುವೆನೆನುತ ॥
ಆ ಮಹಾ ಪರ್ವತ ಶಿಖರದು ।
ದ್ದಾಮಮಂ ಕಂಡಾಗಿರೀಂದ್ರಮ ।
ಹಾಮಹಿಮೆಯಂ ಮಾಡಿರಾಜನು ನುತಿಸುತಿಂತೆಂದಂ ॥ ॥ ೨೦೫ ॥

ದೂರವೈದಿ ಹಿಮಾಂಬುವಂಕೇ ।
ತಾರದಲಿ ಸೇವಿಸುವರಂತೆ ಶ ।
ರೀರವಂ ಬಿಡವೇಳ್ಕುಗಡ ತತ್ಕಾಶಿಯಲಿ ಮುಂನ ॥
ಘೋರ ವಿಂತಿಂತಪ್ಪವಸ್ಥೆಗೆ ।
ಸೈರಿಸುವ ರಾರೀಗಿರೀಂದ್ರದ ।
ಚಾರು ಶಿಖರವನೊಂಮೆ ಕಂಡಡವಂಗಹುದು ಮುಕ್ತಿ ॥ ॥ ೨೦೬ ॥

ಈನಗೇಂದ್ರವನೊಂಮೆ ನೋಡಿದ ।
ಮಾನವಂಗಪವರ್ಗವಹುದನು ।
ಮಾನವಿಲ್ಲಡಿಗಡಿಗೆ ನೋಡುತ ನೋಡುತ್ತೈತರ್ಪ ॥
ಮಾನುಷನ ತತ್ಪುಣ್ಯ ಫಲಕವ ।
ಸಾನವುಂಟೇಯನವರತವಾ ।
ಸ್ಥಾನದಲ್ಲಿಯೆ ವಸಿಸಿಕೊಂಡಿರ್ದಾತನೀಶ್ವರನು ॥ ॥ ೨೦೭ ॥

ಸರ್ವ ತೀರ್ಥಂಗಳನಿವಾಸಂ ।
ಸರ್ವ ದೇವಋಷಿಗಳನೆಲೆವನೆ ।
ಸರ್ವ ಸಾಧಕ ಸಿದ್ಧರಿಗೆ ಕಾವನ್ಯದಿ ವೃದ್ಧಿಕರ ॥
ಸರ್ವ ದೃಷ್ಟಾ ದೃಷ್ಟಭೋಗಾ ।
ಪೂರ್ವ ಸಾಖ್ಯಪ್ರತತಿಗೀಶ್ರೀ ।
ಪರ್ವತೇಂದ್ರಂ ಮೆರವುದಿದರ ಮಹಿಮೆ ಘನಕೆ ಘನವು ॥ ॥ ೨೦೮ ॥

ಮುಳಿದಗಸ್ತ್ಯನು ಮೆಟ್ಟದಡೆ ಭೂ ।
ತಳಕೆ ಕುಗ್ಗಿದವಿಂಧ್ಯನಗದ ।
ಗ್ಗಳಿಕೆಯೆಂತುಟು ಹರಿನೆಗಹಿದರೆ ನೆಗೆದಮಂದರದ ॥
ಬಲುಹೆನಿತು ದಶಮುಖನ ಲುಗಿಸಿದ ।
ಮಲಹರಾದ್ರಿಯ ಗುಂಪೆನಿತು ಘನ ।
ವುಳದು ಲಘುಧನುವಾದ ಮೇರುವಿನುನ್ನತಿಕೆಯೆನಿತು ॥ ॥ ೨೦೯

ಪವಿಧರನ ಭಯಕಂಜಿ ಸರಿದ ।
ರ್ಣವದೊಳಿಹ ಮೈನಾಕದ ವಿಶಾ ।
ಲವದೆನಿತು ತಾನೆಡೆಗೆಡೆಗೆ ಗಂಗಾಜಲೋದ್ಧತಿಗೆ ॥
ತವೆಸವೆವುತಿಹ ಮಾಲ್ಯವಂತದ ।
ಪವಣೆನಿತು ರವಿರಶ್ಮಿಗಾರದೆ ।
ಜವೆಗೆಡುವ ಹಿಮವನ್ನಗೇಂದ್ರದ ಘನತರವದೆನಿತು ॥ ॥ ೨೧೦

ದಿನಕರೋದಯ ಸಮಯಕಲ್ಲದ ।
ವನಿಯೊಳೊಪ್ಪುವುದಯಕುಧರದೊ ।
ಪ್ಪೆನಿತು ಬಸುರೊಳು ಪೊಕ್ಕ ಮಿತ್ರನ ತೇಜವಂ ಕೆಡಿಸಿ ॥
ಕನಲುವಸ್ತಾಚಳದ ಗೌರವ ।
ವೆನಿತು ಚಂದನವಲ್ಲದೇಮಿ ।
ಕ್ಕಿನ ತರುಗಳಿಲ್ಲದಮಲೆಯಭೂಧರದ ಪೆಂಪೆನಿತು ॥ ॥ ೨೧೧

ಹರನನೊಂದಿನವಾದಡಂ ತಾಂ ।
ಧರಿಸಲಾರದ ಮಾನಸೋತ್ತಮ ।
ಗಿರಿಯನಿಳುಹೆನಿತೀಶ್ವರಂ ತಂದಿವನಗಲಿ ಪೋದ ॥
ಸುರಪ ಕೀಲದ ಧೈರ್ಯವೆನಿತು ।
ಸ್ಫುರದರುಣ ಪಾಷಾಣವರ್ಣೋ ।
ತ್ಕರದಿ ನಟಿಸುವ ರೋಹಣಾದ್ರಿಯ ಘನತೆಯೇ ತರದು ॥ ॥ ೨೧೨ ॥

ಪೊಡವಿಪತಿ ರಾಘವನ ಧನುವಿಂ ।
ಕಡಿವಡೆದುಳಿದ ಗಂಧಮಾದನ ।
ದಡರುವಿಕೆ ತಾನೆನಿತು ಭೂಭಾರವದತನವೆನಿತು ॥
ಬಿಡದ ಕುಲ ಶೈಲಂಗಳಗ್ಗದ ।
ಕಡುಹೆನಿತು ವಾನರರು ಪೊರಲೆಡೆ ।
ಗಡೆಗೆ ಜರಿವಾ ಮಣ್ಣ ಬೆಟ್ಟಂಗಳ ಬಿಗುಹೆನಿತು ॥ ॥ ೨೧೩ ॥

ಅಂದುವಿಂದಾವಾವಕಾಲದೊ ।
ಳೆಂದು ಪುಂತಾಂ ಕುಂದುನಿಂದೆಗ ।
ಳೊಂದುವಿಲ್ಲದ ಮಂದ ಮಹಿಮಾನಂದದಿಂದಿರ್ಪ ॥
ಹೆಂದದುದ್ಯಚ್ಛ್ರೀ ನಗೇಂದ್ರಮ ।
ನಂದದಿಂ ಕೀರ್ತಿಸುತಡಿಗಡಿಗೆ ।
ವಂದಿಸುತ ಮಾದರಸನಾಗಿರಿ ವನ ಸಮೀಪದಲಿ ॥ ॥ ೨೧೪ ॥

ಶ್ರೀ ಗಿರಿಗೆ ನಡೆತಂದ ನಾಶಿವ ।
ಯೋಗಿ ಮಲ್ಲಯ್ಯಂಗಳಂತಾ ।
ನ್ನಾಗ್ಯೆಗೆ ಕಂಡಿಹೆನೆಂಬ ಭರದಿಂ ಮಾದಿರಾಜಯ್ಯ ॥
ಆ ಗಿರೀಂದ್ರವನಾಂತರದ ಪು ।
ಣ್ಯಾಗಣಿತ ತೀರ್ಥಂಗಳೊಳು ತೆದು ।
ಭಾಗ ಪುಣ್ಯಾಯತನ ಗಣ್ಯಾಸ್ಥಾನ ಭೂಮಿಯಲಿ ॥ ॥ ೨೧೫ ॥

ಸಂಗಳಪ್ರದ ದೀರ್ಘಿಕಾ ತೀ ।
ರಂಗಳೊಳು ಪಟುವಿವಿಧ ಗಿರಿದು ।
ರ್ಗಂಗಳೊಳು ವನದುರ್ಗಜಲದುರ್ಗಂಗಳೊಳುಬಿಡದೆ ॥
ಹಿಂಗದತಿಗಂ ಹರಗುಹಾದಿ ಬಿ ।
ಲಂಗಳೊಳು ಸ್ಫಟಿಕ ಕುಧರಶ್ರೃಂ ।
ಗಂಗಳೊಳು ಸೌವರ್ಣವಜ್ರ ಮಯೋರು ಗಿರಿಗಳೊಳು ॥ ॥ ೩೧೬ ॥

ಭೂತಳಪ್ರಛನ್ನ ಪುರವರ ।
ಜಾತದೊಳು ಪಾತಾಳ ಗುಹೆಗಳೊ ।
ಳಾತತಾಭ್ರಂಕಷ ಶಿಲೆಗಳೊಳು ರತ್ನಗಿರಿಗಳೊಳು ॥
ಸ್ಫೀತವಿಲಸತ್ಸ್ಪರ್ಶ ವೇದಿ ।
ವ್ರಾತದೊಳು ದರುಶನವೆ ಮುಕ್ತಿ ।
ಖ್ಯಾತ ಸುಸಾ ನಂಗಳೊಳು ನಂದನ ವನಂಗಳೊಳು ॥ ॥ ೩೧೭ ॥

ಸಂಗತೋರಗ ಖಗಮೃಗಾ ವಾ ।
ಸಂಗಳೊಳು ಗಿರಿಶಿಖರನಿಪತಿತ ।
ತುಂಗದಾರೋ ದಾರ ಕಲ್ಲೋಲೋರ್ಮಿತಲಂಗಳೊಳು ॥
ಪೊಂಗಿ ನಡೆವುತ ಪರಿಮಿತಾ ವಾ ।
ಸಂಗಳೊಳಗೆಡೆಗೆಡೆಗೆ ನಿಲುತವೆ ।
ಲಿಂಗ ಪೂಜೆಗಳಂ ಸಲಿಸುತಂ ಬರ ಬರಲುಮುಂದೆ ॥ ॥ ೩೧೮ ॥

ವಿನುತ ಬಿಲ್ವವನ ಪ್ರದೇಶಾ ।
ವನಿಸಮೀಪದೊಳೆಸೆವ ರುದ್ರಾ ।
ಕ್ಷನಗ ರುದ್ರಾಕ್ಷತರು ರುದ್ರಾಕ್ಷನದ ರುದ್ರಾಕ್ಷ ॥
ಘನಕಣಿಗಳೊಳು ಭಸಿತ ಗಿರಿಗಳೊ ।
ಳುನತ ಭಸಿತ ಕುಜಂಗಳೊಳು ಪಾ ।
ವನ ಭಸಿತ ಸಿಂಧುಗಳೊಳುತ್ತಮ ಭಸಿತಕಣಿಗಳೊಳು ॥ ॥ ೩೧೯ ॥

ಲಿಂಗ ಶೈಲಂಗಳೊಳು ಲಿಂಗಕು।
ಜಂಗಳೊಳು ಲಿಂಗಾಪಗೆಗಳೊಳು।
ಲಿಂಗ ತೀರ್ಥಂಗಳೊಳು ಜಂಗಮ ಭೂಧರಂಗಳೊಳು॥
ಜಂಗಮ ಕ್ಷಿತಿರುಹನಿವಹದೊಳು।
ಜಂಗಮಾಯತ ಗುಲ್ಮತತಿಯೊಳು।
ಜಂಗಮಲತಾ ಶ್ರೇಣಿಯೊಳು ಸಕಲೇಶ ಮಾದರಸ॥ ॥೩೬೦॥

ವ್ಯಾಪಿಸುತ ಸಲ್ಲಾಪತರುಸ।
ಲ್ಲಾಪಗಿರಿ ಸಲ್ಲಾಪಲತೆ ಸ।
ಲ್ಲಾಪ ವಲ್ಲರಿ ದೀಪಿಸುವ ಘನಗಹನಮಧ್ಯದಲಿ॥
ರೂಪಿಸುವ ಗಾಯಕ ಗಿರಿಗಳೊಳು।
ಪ್ರಾಪಿಸುವ ಗಾಯಕ ತರುಗಳೊಳ।
ಗೀಪರಿಯ ಗಾಯಕ ಬಹಳ ಗುಲ್ಮ ಪ್ರತಾನದೊಳು॥ ॥೩೬೧॥

ಗಾಯಕದ ಲತಿ ಕಾಪ್ರತತಿಯೊಳು।
ಗಾಯಕದ ಮೃಗಸಂತತಿಗಳೊಳು।
ಗಾಯಕದ ಮಧುಪಂಗಳೊಳು ಗಾಯಕದ ಫಣಿಗಳೊಳು॥
ಗಾಯಕದ ವಾನರ ನಿಕರದೊಳು।
ಗಾಯಕದ ಸಿಂಹಾವಳಿಗಳೊಳು।
ಗಾಯಕದ ಕರಿಗಳೊಳು ಗಾಯಕದಂಡಜಂಗಳೊಳು॥ ॥೩೬೨॥

ನಾಟ್ಯ ಧರಣೀ ಧರ ನಿಕರದೊಳು।
ನಾಟ್ಯ ಭೂಜಾತಪ್ರತತಿಯೊಳು।
ನಾಟ್ಯ ಗುಲ್ಮಾ ನಿಕರದೊಳು ನವನಾಟ್ಯಲತೆಗಳೊಳು॥
ನಾಟ್ಯ ಮೃಗ ಯೂಥಂಗಳೊಳು ನವ।
ನಾಟ್ಯಪಕ್ಷಿ ವಿತಾನದೊಳು ನವ।
ನಾಟ್ಯ ವಾನರ ವೃಂದದೊಳು ನಾಟ್ಯೋರಗಂಗಳೊಳು॥ ॥೩೬೩॥

ಹೊಳೆವಕಾಷ್ಠ ಜ್ಯೋತಿಗಳೊಳು ।
ಜ್ವಲಿಸುವ ಶಿಲಾಜ್ಯೋತಿಗಳೊಳುಂ ।
ಬೆಳಗುವ ತೃಣ ಜ್ಯೋತಿಗಳೊಳುಂ ವಾಳುಕ ಜ್ಯೋತಿ ॥
ಗಳೊಳಗುಂ ಜ್ಯೋತಿರ್ನದಿಗಳೊಳು ।
ಜಲಗಿರಿಗಳೊಳು ಜಲ ತರುಗಳೊಳು ।
ಜಲವಿಹಂಗಮ ವಿತತಿಯೊಳು ಜಲಮೃಗ ಸಮೂಹದೊಳು ॥೨೦೪॥

ಹಲವು ವರ್ಣ ದ್ರುಮಸಮಿತಿಯೊಳು ।
ಹಲವು ವರ್ಣ ಶಿಲಾವಳಿಗಳೊಳು ।
ಹಲವು ವರ್ಣದಗುಲ್ಮಲತಿಕಾಸಂಕುಳಂಗಳೊಳು ॥
ಹಲವು ರೂಪ ಮಹಾ ಶಿಲೆಗಳೊಳು ।
ಹಲವು ರೂಪ ಮಹಾತರುಗಳೊಳು ।
ಹಲವು ರೂಪ ಮಹಾ ಲತಾಗುಲ್ಮೋತ್ಕರಂಗಳೊಳು ॥ ॥೨೦೫॥

ಭರಿತ ಖೇಚರ ತರುಗಳೊಳು ಖೇ ।
ಚರ ಶಿಲೆಗಳೊಳು ಖೇಚರದ ವ ।
ಲ್ಲರಿಗಳೊಳು ಖೇಚರ ವಿಪುಳ ಗುಲ್ಮಂಗಳೊಳು ಹರ್ಮ್ಯ ॥
ಗಿರಿಗಳೊಳು ಹರ್ಮ್ಯಾವನೀಜನಿ ।
ಕರದೊಳುಂ ಘನ ಹರ್ಮ್ಯ ಗುಲ್ಮೋ ।
ತ್ಕರದೊಳುಂ ಹರ್ಮ್ಯ ಪ್ರಥಿತವಲ್ಲೀನಿಕಾಯದೊಳು ॥ ॥೨೦೬॥

ಸುಲಲಿತದ ಮೃಗರೂಪ ವೃಕ್ಷಾ ।
ವಳಿಗಳೊಳು ಮೃಗರೂಪ ಶೈಲಾ ।
ವಳಿಗಳೊಳು ಖಗರೂಪ ವೃಕ್ಷಾವಳಿಯೊಳಂಸುತ್ತ ॥
ಸಳನಳಿಪ ಖಗರೂಪ ದುಪಲಾ ।
ವಳಿಗಳೊಳು ನರರೂಪ ವೃಕ್ಷಾ ।
ವಳಿಗಳೊಳು ನರರೂಪ ದುಪಲಾವಳಿಗಳೊಳು ಬಳಿಕ ॥ ॥೨೦೭॥

ದೇವರೂಪ ಕುಜಾವಳಿಗಳೊಳು ।
ದೇವರೂಪ ಶಿಲಾವಳಿಗಳೊಳು ।
ದೇವಸಂಭೂತ ಪ್ರಸೂತದ್ರುಮ ಸಮೂಹದೊಳು ॥
ಭೂವಿನುತ ಭೂತಪ್ರಸೂತನ ।
ಗಾವಳಿಗಳೊಳು ಮಹಿತ ಗಂಧ ।
ರ್ವಾವನೀಜ ಸಮಾಜದೊಳು ಗಂಧರ್ವ ಶಿಲೆಗಳೊಳು ॥ ॥ ೨೧೮ ॥

ಲಲಿತಕರ ಗಂಧರ್ವ ಗುಲ್ಮಾ ।
ವಳಿಗಳೊಳು ಗಂಧರ್ವಲತಿಕಾ ।
ವಳಿಗಳೊಳು ನೆಳಲುಗಳು ತಿರುಗದ ನಿತ್ಯತರುಗಳೊಳು ॥
ನೆಳಲು ತಿರುಗದ ನಿತ್ಯಶೈಲಾ ।
ವಳಿಗಳೊಳು ನೆಳಲಿಲ್ಲದಗ ಸಂ ।
ಕುಳದೊಳುಂ ನೆಳಲಿಲ್ಲದಹ ಸಾನ್ನಿಧ್ಯ ಗಿರಿಗಳೊಳು ॥ ॥ ೨೧೯ ॥

ದೂರದಲಿ ನೆಳಲೊಪ್ಪಿ ತೋರುವ ।
ಧಾರುಣೀ ಜಾತಾವಳಿಗಳೊಳು ।
ದೂರದಲಿ ನೆಳಲೊಪ್ಪಿ ತೋರುವ ಭೂಧರಂಗಳೊಳು ॥
ಆರಯುಲು ಹೊತ್ತೊಂದು ಛಾಯದ ।
ಧಾರುಣೀ ಜಾತಾವಳಿಗಳೊಳ ।
ಗಾರಯುಲು ಹೊತ್ತೊಂದು ಛಾಯದ ಭೂಧರಂಗಳೊಳು ॥ ॥ ೨೨೦ ॥

ಏರಿ ನೋಡಲು ಲೋಕವೆಲ್ಲಂ ।
ತೋರ್ಪಲಾಪ ಮಹೀರುಹಂಗಳ ।
ನೇರಿನೋಡಲು ಲೋಕವೆಲ್ಲಂ ತೋರುವದ್ರಿಗಳ ॥
ಏರಿಪ್ಪಂಕಿಸ ಲೆಲ್ಲಿಗಾದಡೆ ।
ಜಾರದೊಯ್ವ ಮಹೀರುಹಂಗಳ ।
ನೇರಿಪ್ಪಂಕಿಸಲೆಲ್ಲಿಗಾದಡೆ ಪ್ರೊಯ್ವುವ ಗತಕಿಯು ॥ ॥ ೨೨೧ ॥

ರೂಪಿಸುತ ಬಂದೇರಲೊಡನೆ ನಿ ।
ರೂಪನಾಗಳೆ ವೃಕ್ಷತರುಗಳ ।
ರೂಪಿಸುತ ಬಂದೇರಲೊಡನೇ ರೂಪನಾದಡೆಯು ॥
ಈ ಪರಿಯೊಳುಂ ವೃಕ್ಷ ಗಿರಿಗಳ ।
ತಾಪಿಸುತ ಬಿಸಿಲಾದಡೇರಿಪ ।
ರೋಪಕಾರದಿ ಚಂದ್ರಿಕೆಯು ನೊಂದಿಸುವ ಶಾಖೆಗಳ ॥ ॥ ೭೭೧ ॥

ಶ್ವೇತಮಹೀಧರ ಶ್ವೇತಮಹೀರುಹ ।
ಶ್ವೇತತಟಾಕ ಶ್ವೇತಾಂಬುಜಾಕರ ।
ವಿತತಿಗಳ ಮೋಣಿವೃತ ಶೈಲಾವೃತ ಕುಜವ್ರಜದ ॥
ಅತಿಶಯಾವೃತ ದೀರ್ಘಿಕಾವೃತ ।
ಶತದಳಾಕರ ರಸನಗರಸ ।
ಕ್ಷಿತಿಜರಸ ಕಾಸಾರವೃಂದದ ಬಿಲ್ವವನದೊಳಗೆ ॥ ॥ ೭೭೭ ॥

ಕನಕ ಪರ್ವತ ಕನಕ ಪಾದಪ ।
ಕನಕ ಗುಲ್ಮಸು ಕನಕವಲ್ಲೀ ।
ಕನಕ ವಿಪುಳ ತಟಾಕ ಕನಕ ಸರೋವರಾವಳಿಯು ॥
ಕನಕ ಮೃಗಕುಲ ಕನಕ ಖಗಕುಲ ।
ಕನಕ ಫಣಿಕುಲ ಕನಕ ಮಧುಕರ ।
ಕನಕ ರೇಣು ಸುವರ್ಣಮಯುವಹವಾಳುಕಾಸೀಕ ॥ ॥ ೭೭೪ ॥

ಕನಕನಗರೀ ಕನಕಹರ್ಮ್ಯಸು ।
ಕನಕವಪ್ರ ಕನಕಸುರಾಲಯು ।
ವಿನುತಮಣಿ ನಗಮಣಿ ಮಹೀರುಹ ಮಣಿಲತಾಗುಲ್ಮ ॥
ಘನದರತ್ನಾದ್ರಿಗಳರತ್ನಾ ।
ವನಿರುಹಂಗಳ ರತ್ನಮಯ ಗು ।
ಲ್ಮನಿಕರಂಗಳ ರತ್ನಲತೆಗಳ ಬಿಲ್ವವನವಲ್ಲಿ ॥ ॥ ೭೭೫ ॥

ಒಂದುಕೊಂಬ ಶ್ವತ್ಥಮುಂ ವಟ।
ವೊಂದುಕೊಂಬುಂ ಕ್ರಮುಕಶಾಖೆಯು।
ದೊಂದು ನೇರಿಲ ದೊಂದು ಶಾಖೆಯು ಶೋಕ ವೊಕ್ಕೊಂಬು॥
ಒಂದುಶಾಖಂ ನಾಗಕೇಸರ।
ವೊಂದು ಶಾಖಂ ನಾರಿಕೇಳವ।
ದೊಂದುಶಾಖಂ ಚಂದನಂ ಘನ ಸಾರವೊಕ್ಕೊಂಬು॥ ॥೩೩೬॥

ಒಂದರಳು ಯಿರುವತಿಗೆ ಪಡ್ಡಳಿ।
ವೊಂದರಳು ಸೇವತಿಗೆ ವೊಂದರ।
ಳೊಂದರಳು ಸುರಹೊಂನೆ ಒಂದುಗೆ ಒಂದರಳು ಜಾಜಿ॥
ಒಂದುಪೂ ವೊಂದರಳು ಮಲ್ಲಿಗೆ।
ವೊಂದುಹೂ ಮಂದಾರ ವುತ್ಪಲ।
ಒಂದು ಚಂನ್ಯೈದಿಲು ವಕುಳ ಒಂದೊಂದು ವರವಿಂದ॥ ॥೩೩೭॥

ಒಂದು ಜಂಬುಫಲಂ ವರುಣಫಲ।
ಒಂದು ಬದರಿ ಫಲಂಬಳಕತಾ।
ನೊಂದು ಕದಳಿಫಲಂ ಕಪಿಥ್ಥಫಲಂಗಳೊಂದೊಂದು॥
ಒಂದು ಫಲವದು ಮಾತುಳಂಗವ।
ದೊಂದುಫಲವದು ತಿಂತ್ರಿಣೀಕವ।
ದೊಂದು ಫಲವದು ಹಲಸುಸೋಣ್ಣಾಗಂಗ ಫಲವೊಂದು॥ ॥೩೩೮॥

ಒಂದು ಮೊದಲಾಗಿರ್ಕುನೋಡಲು।
ಮುಂದೆ ಬಹು ವರ್ಣದ್ರುಮಾವಳಿ।
ಒಂದು ಕಡೆ ಬಿಳಿದೊಂದುಕಡೆ ಕಂದೊಂದುಕಡೆ ಕೆಂಪು॥
ಒಂದು ಕಡೆ ಪೀತಂ ಕಪೋತವ।
ದೊಂದು ಕಡೆ ಮಾಂಜಿಷ್ಠ ವೊಂದೆಸೆ।
ವೊಂದರಲಿ ತೋರಲ್ಕೆ ಬಹುವರ್ಣದ ಮರಂಗಳಲಿ॥ ॥೩೩೯॥

ಪಲವು ವರ್ಣಂಗಳ ನಗಂಗಳ।
ಫಲಿತವಿದ್ರುಮ ವಿನಿತಿನಿತುಕೋ।
ಮಳಮರೀ ಚಿದ್ರಾಕ್ಷೆ ವೊಂದಿನಿತಿನಿತು ತಾಂಬೂಲಿ॥
ನೆಲೆಗೆ ಮೊದಲೊಂದಾಗಿ ಪಸರಿಸಿ।
ಪಲವು ರೂಪಂಗಳ ಲತಿಕೆಗಳ
ಸುಳಿಸುಳಿದು ಲಿಂಗಾಂಗಣದ ರಜವಂಗುಡಿಸುವನಿಲ॥ ॥ ೩೪೦ ॥

ಗಂಡ ವ್ಯಗಮೃಗರಾಜ ಹರಿಸೇ।
ದಂಡ ಸೂಕರ ಪುರುಷಮೃಗ ಭೇ।
ರುಂಡ ಭಲ್ಲುಕ ವೃಕಹರಿಣ ಸಾರಂಗ ಮಾರ್ಜಾಲ॥
ಪುಂಡರೀಕಂ ಶರಭ ಮಹಿಷಂ।
ಚಂಡ ಚಮರೀ ಮೃಗಶಿಖರಿಗಳ।
ತಂಡ ವಿಂತನ್ಯೋನ್ಯ ವೈರವ ಸುಳಿದುಚರಿಸುತಿಹ॥ ॥ ೩೪೧ ॥

ಘನದ ಬಿಲ್ವವನದ ಮಹಿಮೆಯಂ।
ವಿನುತಿಸುವೆ ನೋಡುತ್ತ ಮದರಲಿ।
ವಿನಯದಿಂ ತಂಮಡಿಗಳಂ ಮುಂನರಸುತೈತಪ್ಪ॥
ಅನಘನಪ್ಪ ಮಾದಿರಾಜನ।
ಮನದ ಬಲುಹಂ ನೋಡಿದಪೆನಾ।
ನೆನುತಸದ್ಗುಣಿ ಮಲ್ಲಿಕಾರ್ಜುನ ದೇಶಿಕೋತ್ತಮನು॥ ॥ ೩೪೨ ॥

## ROYAL POLICY.—*Channa Basava Purána.*

## ರಾಜನೀತಿ.—ಚನ್ನಬಸವ ಪುರಾಣ.

॥ ವಾರ್ಧಕಷಟ್ಪದಿ. ॥

॥ ಸೂಚನೆ ॥ ರಾಜ ನೀತಿಯನೊಲಿದು ಕಲ್ಯಾಣ ಪಟ್ಟಣದ ।
ರಾಜನೆನಿಸುವ ಬಿಜ್ಜಳಂಗಾಗಲಾಬಸವ ।
ರಾಜನಳಿಯಂ ಚನ್ನ ಬಸವರಾಜಂ ಪೇಳ್ದನಧಿಕತರ ವಿನಯದಿಂದಂ ॥

॥ ಪದ್ಯ ॥ ದಶಶಿರಂ ತಪದಿಂದಲೆದ್ದೀಶಪದ ಯುಗಕೆ ।
ಸಸಿನದಿಂ ನಮಿಸಲಿನ್ನೂರೊಂದು ಕಂಣಿರ ।
ಲ್ಪೊಸತೆನುತ ಕೌತುಕಂಬಟ್ಟನಾರಾಯಣನನಯನಸಪ್ರೊಂದಿರ್ಪುದೆಂದು ॥
ಉಸುರುವರೆನುತ್ತೀಕ್ಷಿಸನ ಮುಗ್ಧಭಾವಕ್ಕೆ ।
ಶಶಿಧರಂ ಮರಳಿ ಮೆಚ್ಚಲ್ಕಂದು ಹರಿಯಜರು ।
ಬಸವಳಿವುತಿರೆ ಕಂಡು ನಸುನಗುವ ಪಂಪಾ ವಿರೂಪಾಕ್ಷಸಲಹೆಮ್ಮನು ॥
॥ ೩೪೩ ॥

ತರಣಿ ಮುಂಚುವ ನಭ್ರಂಸು ದರ್ಪಣವನಂ ।
ದಿರದೆ ಕಾಳಿಕೆ ನಿರ್ಮಳೋದಕವ ನಾಪಾಂಸೆ ।
ಪರಮಾತ್ಮನಂ ಜೀವ ಭಾವಮಿವುಮುಸುಕಿಕೊಂಡಿರ್ಪಂತೆ ಜಗದೊಳುಳ್ಳ ॥
ಅರಸರಂ ಕ್ಷಾತ್ರ ತಾಮಸಪೇಕ್ಷ್ಟಿಸಿರ್ಪುದಿದು ।
ನಿರುತವವ ಪರಿಹರಿಸು ಪ್ರೌಢರಾಜ ನೀತಿಯುಂ ।
ಬೊರವೆನಾಕಿಪುದೆಂದು ಚನ್ನಬಸವೇಶ್ವರಂ ಬಿಜ್ಜಳಂ ಗಿಂತೆಂದನು ॥
॥ ೩೪೪ ॥

ಪರಿಕಿಪೊಡೆ ಸಂತತಂ ವಕ್ರಚರಿತಂ ಸುಜಿವ ।
ಡೆರಡು ನಾಲಿಗೆ ಧನವನೇ ಕಾದುಕೊಂಡಿರ್ಪ । [ಕೋಪಂ॥
ಪಂಚಲೋಭಂಘೋಗದೊಡನೆ ಕೂಡಿದ ಬಾಳ್ವೆ ಪರರಸುವ ನುಗಿವ

ಉರುಗಂಗಮುರಗಿಂಗ ಮನೋಲ್ಲಾಸ್ಯ ಮೂದೊಡಂ ।
ನಿರುತದಿಂ ಕಣ್ಣು ಕಿವಿ ಕಿವಿಡು ಕಂಗೆಡೆಂಬ ।
ಪರಿಯಾಯಭೇದವಿದ ನಾಡಾಡಿಗಿದು ನೀತಿಯನುಚಿತಂ ಕೇಳೆಂದನು ॥
॥೨೪೫॥

ಕೊಂಡೆಯರ ನುಡಿಗಳೇ ಕರ್ಣಕ್ಕೆ ಭೂಷಣಂ ।
ಕೊಂಡೆಯರಮಾರ್ಗವೇದಾವಂಗೆ ಭಾಸ್ಕರಂ ।
ಕೊಂಡೆಯರೆ ತನಗೆ ಕಡುಹಿತವರೆಂದೆರಡಿಲ್ಲದೇ ನಂಬುವವನೀಶನ ॥
ಮಂಡಲಕೆ ಕೇಡಪ್ಪುದಾನೃಪನ ಸಿರಿನಭೋ ।
ಮಂಡಲದ ಕುಸುಮದೊಲ್ಬಯಲಪ್ಪುದವರಿನಿಂ ।
ಮಂಡಲೇಶ್ವರ ರಾವಗಂಕೊಂಡೆಯಂ ಕೇಳ್ವುದನುಚಿತಂ ಕೇಳೆಂದನು ॥
॥೨೪೬॥

ಕುಳಿರೊಮಂಜಿನ ಪನಿಗಳಂ ಕಮಲ ಸಂಕುಲಂ ।
ಜಲಬಿಂದು ವಿಂದೆ ಮಧುಲೋಭದಿಂ ಗುಣಗಣಂ ।
ಗಳಹತನದಿಂದೆ ಗೌರವ ಮನಾಚಾರ ಪ್ರವರ್ತನದೆ ಕುಲದಪೆಂಪು ॥
ಪುಳಿಯಿಂದೆ ಪಾಲ್ಬಪಳ ಕೋಪದೆ ತಪಃಫಲಮುಂ ।
ಮಲೆದು ಬೀಸುವ ಗಾಳಿಯಿಂ ಮೇಘದೊಡ್ಡವಣೆ ।
ಸಲೆ ಕೆಡುವ ಪೊಲ್ಕೆಡುವುದರಸಾಳ್ವಧರೆಪಿಶುಣರಿಂನೃಪತಿಕೇಳೆಂದನು ॥
॥೨೪೭॥

ಖಳರಮಾಯಾವಿಗಳ ದುರ್ವಿನೀತರಮಹಾ ।
ಕುಳರ ದುರ್ಜನರ ಡಂಬರ ನೀತಿಮಾರ್ಗವಿ ।
ಹ್ವಲರ ನಿಷ್ಠುರವಚನಕೋವಿದರ ದುರ್ಬೋಧಕರ ದುರಾಚಾರ ಪರರ ॥
ಕುಲವಿಹೀನರ ಕುಮಂತ್ರಾನ್ವಿತರ ಸುತಿಪಥವ ।
ನುಳಿದು ನುಡಿವವರ ಕಂಡರೆ ನಿರಾಕರಿಸುವದು ।
ನೆಲನನಾಳ್ವರಸು ಮುಖ್ಯನೀತಿ ಬಿಜ್ಜಳ ನೃಪಾಲ ನೀಂ ಕೇಳೆಂದನು ॥
॥೨೪೮॥

ಪರಗೆ ತಾಂಮಾಡಿದುಪಕಾರಂಗಳಂ ತನಗೆ ।
ಪರರಿಂದ ಲೊದಗಿದಪಕಾರಂಗಳಂನಾಡೆ ।
ಪರರ ಕೂಡಾಡಿಕೆಡಿಸುವದುತ್ತಮರ ಮಾರ್ಕೆ ಸಲ್ಲದು ಮಹೀತಳದೊಳು ॥

ಪರಗೆ ತಾಂಮಾಡಿದುಪಕಾರಂಗಳಂ ತನಗೆ ।
ಪರರಿಂದಲೊದಗಿದುಪಕಾರಂಗಳಂನಾಡೆ ।
ಪೆರರ ಕೂಡಾಡಿ ತೋರುವ ಪಾತ್ರಮಾರ ಮತಕೆ ಸಲ್ವುದೈ ಕೇಳೆಂದನು ॥
॥೨೪೯॥

ಧರ್ಮವಂ ಬಿಡದೆ ಮಾಳ್ಪುದು ತನ್ನ ರಾಜ್ಯದೊ ।
ಳ್ಧರ್ಮಿಷ್ಠರುಳ್ಳೊಡವರಂ ಪಾಲಿಸುವುದು ವಿಮುಖ ।
ಧರ್ಮಕ್ಕೆಡರ್ಬಂದೊಡಾಲಸ್ಯಮಂ ಮಾಡ ದೊಡನೊಡನೆ ಪರಿಹರಿಪುದು॥
ಧರ್ಮಹೀನರನುದಾಸಿಸುವುದು ನಿರುಪಮಜಾತಿ।
ಧರ್ಮಂಗಳಂ ತಪ್ಪದಂತೆ ನಡೆಸುವುದು ನೃಪ ।
ಧರ್ಮದ ರಹಸ್ಯವಿದು ತಪ್ಪದವನೀಪಾಲತಿಲಕ ನೀಂಕೇಳೆಂದನು ॥೨೫೦॥

ಧನವಧಿಕವಾಗಬೇಕೆಂಬಾಶೆಯಿಂದ ದು ।
ರ್ಜನರ ಚಪಡಿಯ ಮಾತುಗಳ ಕೇಳ್ದು ಸಕಲಸ ।
ಜ್ಜನರನಾಕರಿಸಿ ಪಾಪವನೆ ಸಂಗ್ರಹಿಸಂತೆ ಸಂಗ್ರಹಂ ಮಾಡಿದೊಡವೆ ॥
ಘನವಾಗಿ ಕಾಲೋಚಿತಕೆ ತೋರಿ ಹೆಚ್ಚಿದಿಂ ।
ಧನವಗ್ನಿಯಿಂದಹನವಪ್ಪಂತೆ ಕತ್ಯನೃಪ ।
ಜನದಿಂದೆ ಕಡೆಗೆ ಬಯಲಹುದು ಪುಸಿಯಲ್ಲವನಿಪಾಲ ನೀಂ ಕೇಳೆಂದನು॥
॥ ೨೫೧ ॥

ಧನದಾಶೆಗಾಗಿ ದೇಶ ಪ್ರಜೆಯ ನೋಯಿಸದೆ ।
ಧನವುಳ್ಳವರ ಬದುಕುಗಳ ಕಂಡು ಕರುಬಿಸದೆ ।
ಧನವನೊದವಿಸುವ ದೊಕ್ಕಲಿಗೈದುಪಾಲರಸಿಗೊಂದುಪಾಲೀಕ್ರಮದೊಳು॥
ಧನವಧಿಕ ವಮದೀಪರಿಯೊಳಾರ್ಜಿಸಿದೊಡೆ ತ ।
ದ್ಧನವ ನೊಲವಿಂ ಸುಪಾತ್ರದೆ ವೆಚ್ಚಿಸಲ್ವುಣ್ಯ ।
ಧನಪಾಲನಪ್ಪನಾನೃಪತಿಪರಲೋಕದೊಳಗರಸನೀಂಕೇಳೆಂದನು ॥೨೫೨॥

ಅಣೆ ಈಗರಸುತನ ವೆಂದೆಂಬ ತನುವಿಂಗೆ ।
ಪ್ರಾಣಮದಕಜಯಂಬಂದು ಪ್ರೋರ್ಗದೊಡೆ ತತ್ ।
ಕ್ಷೋಣಿಪತಿಹರಣವಿಮ್ಮಂಮೃತವಸ್ಥೆ ದಿಗವನಿದಕೆಸಂದೇಹಮೇಕೆ ॥

ತ್ರಾಣವಿಲ್ಲದೆ ಬರಿಯ ಭುಜಬಲದಗರ್ವದಿಂ ।
ಹಾಸಿಹೊಕ್ಕಿರಿಯಲಾರದೆ ಮುರಿದು ಬನ್ದುವಂ ।
ರಾಣಿಯರ ನಗೆಯುಕ್ಕೆ ಹೊಯಿಲುವಾದ್ಯದ ಗೇಯನರ್ತಕಂ ಕೇಳೆಂದನು ॥
॥ ೩೫೩ ॥
ಮರೆಯೊಕ್ಕವರ ಕಾಯ್ವ ವರರಾಂತ ಭೂ ಭುಜರ ।
ನಿರಿವ ಬೇಡಿದರ್ಗೆ ಬೇಡಿದ ಸುವಸ್ತುವಂ ।
ನೆರೆಕೊಡುವದೀಗ ಕ್ಷತ್ರಿಯರಸದ್ಧರ್ಮವರ್ತನವಾಸುವರ್ತಿಸುವನು ॥
ತೊರೆದು ಚಾವಡಿಯೊಳಗೆ ಗಳಹಿ ಹುಯ್ಯಲಿಕಂಡು ।
ಬೆರತೋಡಿ ಘಟ್ಟ ಬೆಟ್ಟಂಗಳಂ ಸಾರ್ದುಬಾ ।
ಯ್ದುಗಪವಂ ರಾಜನೇ ಪಗರಣದ ರಾಜನಲ್ಲವೆ ಮಹೀಮಂಡಲದೊಳು ॥
॥ ೩೫೪ ॥
ಎನಿತೆನಿತು ಸನ್ಮಾರ್ಗದೊಳು ಬಿಡದೆ ನಡದರೆಯು ।
ವೆನಿತೆನಿತು ಸತ್ಕೀರ್ತಿ ಪಡದರೆಯು ಮನನಿಯೊಳ ।
ಗೆನಿತೆನಿತು ಸದ್ಧರ್ಮ ಸಂಜನಿತವಸ್ತುವಂಪಿಡಿದೊಡೆಯುವಿಹಾನೆಲದೊಳು ॥
ಎನಿತೆನಿತು ಬಲ್ಲವಿಕೆ ಮೊಳತೋಹಂ ಬಾಹುಬಲ ।
ವೆನಿತೆನಿತು ತನಗೆ ಪಿರಿದಾಗಿರ್ದೊಡಂ ಶತ್ರು ।
ಜನವಸಾಧಿಸುವಲ್ಲಿ ಕರುಣವುಂ ಮಾಳ್ಪುದನುಚಿತ ವರಸಕೇಳೆಂದನು ॥
॥ ೩೫೫ ॥
ಸಾಮವೇ ವೇದಂಗಳೊಳಗಧಿಕವಾದಂತೆ ।
ಸಾಮವೇ ಮಿಗಿಲುಯ್ಪುಪಾಯಂಗಳಲ್ಲಿ ತ ।
ತ್ಸಾಮಸೇಭೂಭುಜರ ಬಾಳ್ಕೆಗನುಸಾರಿ ಮಿಕ್ಕಿನ ಮೂರುಪಾಯಂಗಳು ॥
ಸಾಮಾನ್ಯಮವರೊಳಗೆ ದಂಡಮೊಂದೆಂಬುದದು ।
ಸಾಮಾನ್ಯ ದೊಳಗೆ ಸಾಮಾನ್ಯಮಿದ ನರಿಯದರು ।
ಸಾಮಾನ್ಯರೆನಿಸುವರಸೀ ಪತಿಗಳೊಳು ನೃಪಲಲಾಮ ನೀಂ ಕೇಳೆಂದನು ॥
॥ ೩೫೬ ॥
ಅರಿನೃಪರ ಸಂಧಾನ ಸಮಯಂಗಳಲ್ಲಿ ಕರಿ ।
ತುರಗಂಗಳೇರಾಟದಲ್ಲಿ ಸಂಗರದಲ್ಲಿ ।
ತರುಣಿಯರ ಕೇಳಮೇಳಂಗಳೆಡೆಯಲ್ಲಿ ಮಜ್ಜನದಲ್ಲಿ ಮಲಗುವಲ್ಲಿ ॥

ಪರಿಸರಿಯು ಪರಿಕರದ ಭೋಜ್ಯ ಭೋಜನದನಲ್ಲಿ ।
ವರವಿವಾಹಾದ್ಯನೇಕೋತ್ಸವದಲ್ಲಿ ಭೂ ।
ವರನಿಕರಕೆಚ್ಚರಿಕೆಯಿರಿದಾಗಬೇಕು ಬಿಜ್ಜಳ ನೃಪತಿಕೇಳೆಂದನು ॥೩೪೭॥

ವ್ಯಸನ ಸಪ್ತಕದ ನೆತ್ತಿಗಳ ಸಿರದೊಡೆ ಬಡಿದು ।
ಪುಸಿಯು ನವನೀತಳದೊಳಡಿಯುರದಂತೆ ತೊಲ ।
ಗಿಸಿ ಜಾತಿ ಸಂಕರಂಗಳ ಮೂಗ ನರಿದು ಬೆಳಗುವಕೆಯಂ ಸುಟ್ಟುತೂರಿ॥
ಪೆಸರ ನಡಿಗಿಸಿ ಕಳವು ಪಾದರಂಗಳ ಹಿಂಸೆ ।
ಯುಸುವತೊಲಗಿಸಿ ಧರಾತಳವನಾಳ್ದವೊಳು ಪಾ ।
ಲಿಸುವರಾಜಂಗಿಹಪರಂಗಳೊಳಗನುಪಮಾನವಿಸ್ತರಸ ಕೇಳೆಂದನು ॥೩೪೮॥

ಹಿರಿಯರೊಳು ದೇವರೊಳು ಗುರುಗಳೊಳು ಘನಭಯಂ ।
ಪರಮ ಪುಣ್ಯಕ್ಷೇತ್ರ ತೀರ್ಥಂಗಳೊಳು ಭಕ್ತಿ ।
ಶರಣಾಗತರೊಳನಗುಣಂಗಳಂ ನೋಡದೇಱಿಸುವ ದೃಢವಪ್ಪವ॥
ಪರಿಜನಂಗಳೊಳವಿಳಿದಯೆ ಸಾರ ಸಜ್ಜನರ ।
ನೆರವಿಯೊಳಗಾದರಣೆ ಹಿತರೊಳತಿವಿಶ್ವಾಸ ।
ವಿರಬೇಕು ನೀತಿಕೋವಿದನೆನಿಸುವರಸಿಂಗೆ ನೃಪತಿನೀಂ ಕೇಳೆಂದನು ॥
॥೩೪೯॥

ಸಿರಿಯ ಮದದಿಂ ಸೊಕ್ಕಿ ಮಾತ್ಸರಂ ಧಿಕ್ಕರಿಸಿ ।
ಪರಿವಾರಕಾಗಾಗ ಸಂಬಳಂಗಳ ನಿಕ್ಕು ।
ಪೊರೆದು ಕೊಂಡಿರದೆ ಸಪ್ತಾಂಗ ಸಂಸಾಧಮೊಳಗೆಚ್ಚರಿಕೆ ಯಿನಿತಿಲ್ಲದೆ ॥
ಪರಮ ಬಾಂಧವರ ಲೆಕ್ಕಿಸದೆ ಕೈವಿಡಿದವಳ ।
ನರವರಿಸಿ ಸೂಳೆವೆಂಡಿರ ಸಂಗದೊಳಗಿಪ್ಪ ।
ಧರಣಿಪತಿಯಂ ಹಿಂಗದಿರ್ಪಳೇ ಜಯಲಕ್ಷ್ಮಿ ನೃಪತಿನೀಂ ಕೇಳೆಂದನು ॥
॥೩೫೦॥

ಆವಾಗಲುಂ ಸಚ್ಚರಿತ್ರಮೊಂದೇ ಮಾಡು ।
ತಾವರಿದು ಮಪ್ಪಬಿಯ್ಯಂ ಸಕಲ ಪರಿಜನವ ।
ನೋವಿಕಾಲೋಚಿತವನರಿದುಭೋಗಿಸಭೋಗವಪರಾಧಕುಚಿತಕೋಪಂ॥

ಅವಕರ ನುಡಿಗೇಳದುದು ಕೇಳ್ದೊಡಂ ಬಲ್ಲ ।
ಕೋವಿದರ ಮುಖದಿ ನಿರ್ಧರಿಸಿ ಮಾಳ್ಪುದು ಸನ್ಮ ।
ಹೀವಲ್ಲಭರ ಮಾರ್ಗವಿದ ಪಿಡಿವುದುತ್ತಮೋತ್ತಮಪರಸ ಕೇಳೆಂದನು ॥
॥ ೩೬೧ ॥

ಮಳೆಯಿಂದ ಸಕಲ ಸಸ್ಯಾದಿಗಳ್ಕುಸುಮಪರಿ ।
ಮಳದಿಂದ ತುಂಬಿಗಳ್ಜ್ಞಾನದಿಂ ತಪಸಿಂದು ।
ಕಳೆಯಿಂ ಚಕೋರಿಗಳು ಧರ್ಮದಿಂದರಸಾಳ್ವ ಭೂಮಂಡಲಂ ಭಾಪಿಸೆ ॥
ಕಳೆಯರಿಂ ಬೇಟಂ ಸುಪುತ್ರರಿಂದಿಹಪರಂ ।
ಗಳಸುಖಂವೆಚ್ಚುವಂದದೆ ಪೆಚ್ಚುವದು ಮಂತ್ರಿ ।
ತಿಲಕನಿಂದೈಶ್ವರ್ಯವವನಿಪಂಗಿ ದುರಾಜನೀತಿ ನೀಂ ಕೇಳೆಂದನು ॥ ೩೬೨ ॥

ಆದರಿನುತ್ತಮ ಸಚಿವನುಳ್ಳ ಭೂಪಾಲಕನ ।
ಪದವಿಗಪ್ಪುದು ಪೆಚ್ಚು ದಿನ ದಿನಕೆ ಶುಕ್ಲಪ ।
ಕ್ಷದ ಚಂದ್ರನಂದದಿಂ ನಾಡಾಡ ಮಾತ್ಯನೇತಪದನಾಯಕ ಬಸವನು ॥
ವದವಿದ್ಯೈಶ್ವರ್ಯದಿಂ ಬಾಳ್ವರಂ ಕಂಡು ಕಡು ।
ಕುದಿದು ಮತ್ಸರದೆ ಕೊಂಡೆಯವನುಸುರಿದರೆ ಕೇ ।
ಳ್ವುದು ನೀತಿ ಮಾರ್ಗವೇರಾಯನೀಂಕೇಳೆಂದು ಚನ್ನಬಸವಂನುಡಿಯಲು ॥
॥ ೩೬೩ ॥

ಪರೆದುದಾಕ್ಷಣ ಮನದ ಸಂದೇಹವೆಂದೆಂಬ ।
ಪರಮ ತಿಮಿರಂ ವಿವೇಕವೆನಿಪ್ಪ ಪೊಂಬಿಸಲು ।
ನಿರುತದಿಂಪಸರಿಸಿತು ವದನವೆಂಬೆಂಬ ನೀರೇಜಮಿರದಲರ್ದು ದೊಡನೆ ॥
ಪರ ಬಸವ ರಾಜನಮನಂ ತನ್ನ ಮನವೆಂಬ ।
ಗುರು ಚಕ್ರವಾಕ ಮೋದಭೋಂದಾದ ಪಂದು ಭೂ ।
ಮನ ಸುಜ್ಞಾನ ಸೂರ್ಯೋದಯಂ ತಳೆದೋರಲೇನೆಂಬೆನಚ್ಚರಿಯನು ॥
॥ ೩೬೪ ॥

## MORNING—*Rája Shékhara.*

## ಪ್ರಾತಃಕಾಲ ವರ್ಣನೆ. ರಾಜಶೇಖರ.

||ಕಂದಪದ್ಯಗಳು.||

ಬೆಳ್ವೆಳಗಿನ ಬಾಳ್ವೆಳೆಯುಂ |
ತಳ್ವದೆ ಬಾಂಬೊಲದೊಳರುಣ ಕರಶಿಖಿಶಿಖೆ ಪಾ ||
ಳೇಳ್ವಿನ ಮಳುರ್ದಿರಚಿಂತೆಯು |
ನಾಳ್ವಂತೆ ವೊಲೋಷಧೀಶ್ವರಂ ಕಳೆಗೆಟ್ಟಂ || || ೨೬೫ ||

ರಾಜಬಲಂ ಕುಂದಿದುದೆನ |
ಗೀ ಜಲಜನಿ ರಾಜಹಂಸಯುತೆ ಮಧುಪರವ ||
ವ್ಯಾಜದೆ ನಕ್ಕಪಳೆಂದಾ |
ರಾಜಿತಕುಮುದಿನಿ ವಿಷಾದದಿಂ ಕೊರಗಿರ್ದಳ್ || || ೨೬೬ ||

ಮೊದಲೆಂನ ಸಿರಿಯು ಸಿದುನೋ |
ಡದೆ ಕಣ್ಮುಚ್ಚಿದುದು ಗಡ ಸರೋಜಿನಿಸಿರಿವೆ ||
ತ್ತಿದನಿಂದು ನೋಡೆ ನಾನೆನು |
ತದುಕಣ್ಮುಚ್ಚಿದ ವೊಲಿ ಮುಗಿದುದು ಕುಮುದಂ || || ೨೬೭ ||

ವಿಧುವಿರಹಿಣಿ ನವಕುಮುದಿನಿ |
ಮಧುಮಿತ್ರ ನಿರೂಪಣಾತಿ ಭೀಕರ ವಿಚರ ||
ನ್ಮಧುಕರ ಮಾಲಾ ದರ್ಶನ |
ವಿಧುರಿತೆ ಸುಗಿದಂತೆ ಮುಗಿದುದಸಿತಾಂಭೋಜಂ || || ೨೬೮ ||

ಎನಗಾಗದ ವನರುಹಮುಂ |
ಮನೆವಾಡಿದಳೆಂದು ಕಂಡು ಮುಳಿದಂ ಶಶಿಸಿಂ ||
ದೆನುತಿರುಳೆ ಮುಚ್ಚಿ ಸಿರಿಯಾ |
ತನಭಾವವೆ ಬಿಚ್ಚಿದಂತಲರ್ದುದು ಕಮಳಂ || || ೨೬೯ ||

ಇರುಳಹಿ ತೇಂದೀವರದ ।
ಲ್ಲಿರುತದು ಮುನಿದೊಡೆ ಮಧುವ್ರತಂ ಬರೆ ಮೊದಲಂ ॥
ತಿರೆ ಕಂಡುದು ಗಡ ಕಮಳಂ ।
ಪರೀಕ್ಷಿಸಗ್ಗ್ರಣಿಗಳಾಶ್ರಿತ ರೊಳವ ಗುಣಮಂ ॥ ॥ ೩೨೦ ॥

ಕನಕ ಕರಂಡಕದಿಂದಂ ।
ದಿನಲಕ್ಷ್ಮಿ ಸರಾಗಮಿಂದ್ರನೀಲದ ಸರಮಂ ॥
ದಿನಪಂಗೀಯಲ್ತೆಗೆದಪ ।
ಳೆನೆ ಮಧುಕರಮಾಲೆ ನಳಿನದಿಂ ನೆಗೆದೆಸೆಗುಂ ॥ ॥ ೩೨೧ ॥

ಜಳಕಣ ಕಲಿತದಳಂ ನೀ ।
ರ್ದ್ಗಳದಿಟ್ಟೆಲೆಯಾಗೆ ನಳಿನಿಕೆಲಬಟ್ಟೆಗಳ ॥
ಟ್ಟಳೆನಿಸೆ ವಿಕಚಾಬ್ಜಂಗ ।
ಳ್ಕೊಳನೆಸೆದುದು ರಾಜಹಂಸನೌತಣದೆಡೆವೋಲ್ ॥ ॥ ೩೨೨ ॥

ಪಾಡುವ ಪರಮೆಗಳಿಂದೊ ।
ಲ್ದಾಡುವ ಮುದ್ದಂಚೆಮರಿಗಳಿಂನನುಗಂಪಿಂ ॥
ತೀಡುವೆಳೆಗಾಳಿಯಿಂ ಸಿರಿ ।
ಗೂಡಿದ ಗೃಹದಂತಿದಿರ್ದುದಲರ್ದಂಭೋಜಂ ॥ ॥ ೩೨೩ ॥

ತೀರದೊಳಿರೆ ವಿದ್ರುಮತತಿ ।
ವಾರಿಯೊಳಿರೆ ಪದ್ಮರಾಗ ಮಬ್ಜಾಕರಮಾ ॥
ನೀರಾಕರಮೆನೆ ಕಣ್ಗೆಂ ।
ರಾರಾಜಿಸಿದುದೊ ಸಿತಾಬ್ಜ ಮುಕ್ತಾಳಿಗಳಂ ॥ ॥ ೩೨೪ ॥

ಸುರವರಕರಿಮುರಿದೊಟ್ಟಿದ ।
ಸುರುಚಿರ ನಂದನರಸಾಲಪಲ್ಲವತತಿಯುಂ ॥
ತಿರೆ ಕರಮೆಸೆದುದು ಮೂಡಣ ।
ಗಿರಿಯೆಡೆಯೊಳ್ಮೂಡಿ ತೋರ್ಪ ಸಂಧ್ಯಾರಾಗಂ ॥ ॥ ೩೨೫ ॥

ಸುರವರ ನಂದನ ವನವುಂ ।
ಸುರವರ ನಂದನನ ಬಾಣದುರಿದರ್ವಿದುದೀ ॥
ಪರಿಯೆಂದರುಪ್ಪುವ ತೆರದಿಂ ।
ಪರಿರಂಜಿಸುತ್ತಿರ್ದುದುದಯ ಸಂಧ್ಯಾರಾಗಂ ॥ ॥ ೩೩೬ ॥

ಹರಿದಿಕ್ಪಣವಧು ಬರೆ ಹಿಮ ।
ಕರಖರಕರರೊಂದೆ ತೆರದೊಳನುರಕ್ತತೆಯಿಂ ॥
ನೆರೆನಲ್ಗಡ ವಸುಪಿತ್ತೊಡೆ ।
ಸರಿಮೃದುಕರಿನಕರ್ಗಳೀರ್ವರುಂ ಗಣಿಕೆಯರೊಳ್ ॥ ॥ ೩೩೭ ॥

ಹರಿಗೆಮಣಿವ ಪುರನಿಕರದ ।
ಕಿರೀಟ ವೊರಸಿದೊಡೆ ಸುರಿವ ಕನಕದ ರಜವುಂ ॥
ಸುರಕರ ಕರದಿಂ ಕೆದರ್ದಂ ।
ತಿರೆ ಪಸರಿಸುತಿರ್ದುದುದಿತ ಖರಕರಕಿರಣಂ ॥ ॥ ೩೩೮ ॥

ಪರಿಕಲಿತಾರುಣಕರ ಭಾ ।
ಸ್ಕರಬಿಂಬಂ ಕಣ್ಗೆವಂದುದೈಂದ್ರೀವಧುನಾ ॥
ಕ್ಕೊರಲೊಳ್ಕಟ್ಟಿದ ಮಾಣಿಕ ।
ವರಲೊಂದಿರ್ದ್ದುದೆದಾಳಿಯೆನೆ ರಕ್ತಿಯುತಂ ॥ ॥ ೩೩೯ ॥

ಪರಿರಕ್ತ ದಿವಾಕರ ಭಾ ।
ಸುರಬಿಂಬವುದಿಂಬು ಪಡೆದುದಪಿಳದಿಶಾ ವಿ ॥
ಸ್ಫುರಿತ ಸುಧಾಕರಕರ ಸಾ ।
ಗರಮುಂ ಕುಡಿದಿರ್ದ್ದಬಡಬ ಶಿಖಿಪಿಂಡದವೋಲ್ ॥ ॥ ೩೪೦ ॥

ಕೆಂಬೆಳಗೆಸದುದು ಕೌಸುಂ ।
ಭಾಂಬರ ಕೃತತಲ್ಪದಂತೆ ಖರರುಚಿ ಬಿಂಬಂ ॥
ಕೆಂಬಟ್ಟೆಯ ಪೊಸಕೌಳುಡೆ ।
ಯೆಂಬಂತಿರೆ ತಳ್ತು ಮೆರೆದುದೈಂದ್ರೀವಧುವಾ ॥ ॥ ೩೪೧ ॥

ಕೆಂಬಟ್ಟೆಯ ಗವಸಣಿಗೆಯ |
ನಂಬರರಮೆ ನೋಡಲುಗಿದ ಮಣಿಗಂನಡಿಯೆಂ ||
ದೆಂಬಂತೆ ಸಂಜೆ ತೊಲಗಿ |
ರ್ದ್ದಂಬರ ಮಣಿಬಿಂಬಮೊಂ ಮನಂಗೊಳಿಸಿದುದೊ || ||೨೮೨||

---

THE CHASE.—*Rája Shékhara.*

ಮೃಗಯಾವರ್ಣನೆ. ರಾಜಶೇಖರ.

||ಮತ್ತೇಭ ವಿಕ್ರೀಡಿತ ವೃತ್ತ||

ಗರುಡಂ ಗೀಜಗನಂಚೆ ಕೋಂಚೆ ಗಿಡುಗಂ ಕರ್ಬ್ಬಕ್ಕಿ ಪಾರಾವತಂ |
ಪರಪುಟ್ಟಂ ಚರಣಾಯುಧಂ ಶಕುನಿ ಶಂ ಕಂತೊಂಡಿಗಂ ಸೋರೆತಿ|
ತ್ತಿರಿ ಕೋಕಂ ಪಿಕಳಂಬಕಂ ಶಿಖಿಕಂಬಾನಾಡಿ ಪೇರ್ಬ್ಬಕ್ಕಿ ಹಿಂ|
ಗುರು ಕಾಕಂ ಚಿಲುಕೂಲಿ ರತ್ನ ಖಗಮಿರ್ಕ್ಕುಂ ತದ್ವನಾಗೌಘದೊಳ್ ||
||೨೮೩||

||ಉತ್ಪಲಮಾಲಾ ವೃತ್ತ||

ಕೋಡಿಡುಮಾನೆಗಳ್ಪರಿವ ಪುಲ್ಲೆಗಳೊಲ್ದೊಡಗೂಡಿ ಮೇದು ಮೇ|
ಲ್ಕಾಡುವ ಸೈರಿಭಂಗಳುರೆ ಲಂಘಿಪ ಕೇಸರಿಗಳ್ಧರಿತ್ರಿಯಂ |
ತೋಡುವ ಸೂಕರಂಗಳಡಿಯಿಟ್ಟಿಸಿನೆಂಟಡಿಗಳ್ಕನಲ್ಕೆಯಿಂ |
ನೋಡಿಕಡಂಗಿ ಗರ್ಜಿಪ ತರಕ್ಷುಗಳೊಪ್ಪುಗು ಮಾವನಾಂತದೊಳ್ ||
||೨೮೪||

||ಚಂಪಕಮಾಲಾ ವೃತ್ತ||

ಮರಿಪಸಿದೈದೆ ತಾಂ ಮೊಲೆಗುಡಲ್ಕೆರೆದಿರ್ಪುದು ಮಂಗಸಂಗಮು|
ಕ್ಕೆರಗಲೊಡರ್ಚೆ ಹಸ್ತಿಜವದಿಂ ಪಿಡಿಮುಂದೆಸೆಗಾಂತುನಿಂದುದುಬಾ|
ಯ್ದೆರೆದದರಗ್ರಪಲ್ಲವಮನಾಂತೆಣಲೋರ್ವ್ವಳರೂಡಿ ನೇಹಮಂ |
ಮೆರೆದದಕಿತ್ತುದಂತೆ ಮೊಲೆಯುಂ ಪತಿಯಿಂ ಸುತನಲ್ತೆ ನೆಗ್ಗಳಂ ||೨೮೫||

॥ಚಂಪಕಮಾಲಾ ವೃತ್ತ॥

ಕೊಳದೊಳವಿಂದಪಂಕಜರಜಂಗಳನಂಗದೊಳೊಟ್ಟಿಕೊಂಡುಮಂ।
ಡಳಿಸಿಮದಕ್ಕೆಸಾರ್ವ ದಿಮುಂಬಿಯನೀಲದಮಾಲೆಯಾಂತುಮಂ।
ಜಳಗತಿ ಮತ್ತಹಸ್ತಿಪಿಡಿಯಿರ್ಪೆಡೆಗೈದಿ ಭುಜಂಗಲೀಲೆಯುಂ।
ತಳೆದಿಳೆಮುತ್ತನೊತ್ತೆ ಗುಡುಮಂಚಿರೆ ಸೂಸಿತು ಪಾಪ್ಕಣೌಘಮಂ ॥೩೮೬॥

॥ಚಂಪಕಮಾಲಾ ವೃತ್ತ॥

ಸುರುಚಿರ ಪುಷ್ಕರಾಕರ ಜಲಾಂತರ ಮಗ್ನ ಕರೀಂದ್ರಬೃಂದ ಪು।
ಷ್ಕರಮದುಪುಷ್ಕರಂಬೊಲಿರೆತದ್ಭ್ರಮಿಯಿಂದಳಿಪಾಯೆಪೊಣ್ಮೆ ಘಾ।
ತ್ಕರಿಸೆ ಸಿಡಿಲ್ದಸೀರ್ಪನಿಗಳೊಪ್ಪಿರೆ ಧೂಮದ ಪೊಳ್ಪಿರಾಜಿಸಿ।
ತ್ತರರೆ ತುಪಾಕದಿಂ ನೆಗೆವ ಗುಂಡಿನ ಪೊಳ್ಪು ಷಕೇತುವೀರನ ॥೩೮೭॥

॥ಮತ್ತೇಭ ವಿಕ್ರೀಡಿತವೃತ್ತ॥

ಮರಗೊಂಬಂಮುರಿವಲ್ಲಿ ತಳ್ತಮರಮಂಪ್ರೋದ್ದಾತ್ತಶುಂಡಾಗ್ರದೊ।
ಳ್ಭರದಿಂ ಪೊರ್ಕ್ಕೊಡೆ ಬೀಸಿ ಘಾತ್ತರಿಸಿಕೊಂಬಂಪ್ರಷ್ಕರಾಗ್ರಕ್ಕೆಸಂ।
ಸರಿದಂತಿಟ್ಟುಕಾ ಸುಂಗಿಬಲ್ಲಿದು ಫೀಳಟ್ಟಿಕ್ಕಿಬಾಯ್ಬಿಟ್ಟುಶೋ।
ಕರಸಂದಾಳ್ದುದಿಭಂ ವೃಥಾಸ್ಯ ಪರಿಭಂಗಂ ಭಂಗಮಂಸಾರ್ಚದೆ ॥೩೮೮॥

॥ಚಂಪಕಮಾಲಾವೃತ್ತ॥

ಕರವೆಸೆವತ್ತು ತಳ್ತಸರಿಯಿಂ ದರಿಯಿಂ ಜರಿಯಿಂಮೃಗಂಗಳಿಂ।
ತರತರಮಾಗಿ ತೋರ್ಪ ಮರದಿಂ ಸರದಿಂನೆರೆದಿಂಬುಗೊಂಡಭೀ।
ಕರತರ ಲುಬ್ಧಕ ಪ್ರಕರದಿಂ ಝುರದಿಂ ಪರಿದೀಪನಾಳ್ದ ಭಾ।
ಸುರನದಿಯಿಂ ಪೊದಳ್ದಮರೆಯಿಂ ಹರಿಯಿಂ ಕರಿಯಿಂದೆಕಾನನಂ ॥೩೮೯॥

॥ಮಹಾಸ್ರಗ್ಧರಾವೃತ್ತ॥

ಹರಿಣೀಮತ್ತೇಭವಿಕ್ರೀಡಿತಲಲಿತಮಯೂರಾನ್ವಿತಂಛಂದವಂಶಂ।
ಬರಭಾಸ್ವತ್ಪುಂಡರೀಕ ಸ್ಫುರಿತ ಹರಿಮರುದ್ಭ್ರಾಜಿತಂವಾರ್ಧಿಯುಂಬಂ।

ಧುರಭಾರಬ್ಯಾಜಶೌಂಡಿಲ್ಯಕಶುಕವಿಮಾನಾಗಸ್ತ್ಯಕಂಠಾಪಸಪ್ರೋ|
ತ್ಕರವುಂ ಸೋವನಾರ್ಕ ಋದ್ಧಾಂಚಿತನುದುನಭವಂಪ್ರೋಲ್ಲುತ್ತ ಜಲ್ಯಾಯ್ತು
ರಣ್ಯಂ ॥ ॥ ೨೯೦ ॥

॥ಚಂಪಕಮಾಲಾವೃತ್ತ॥

ವರತರುವಲ್ಲರಿ ಪ್ರಕರದಿಂ ಕರದಿಂ ಕರೆದಾಬು ಪೆತ್ತು ಸಂ ।
ಚರಿಸುವ ಕಿನ್ನರ ಪ್ರಸರದಿಂ ಸರದಿಂ ಸರದಾದು ಕಾಂತಿನಿ ।
ರ್ಝರಸಲಿಲಂಗಳಂ ಬದರಿ ಯಿಂದಾ ಯಿಂದಾ ಯಿಂದಗಲ್ದನಿಂ ।
ದುರುಮುನಿವೃಂದದಿಂದೆಹರಿಯಿಂಹರಿಯಿಂಹರಿದಾಪದೊಪ್ಪುಗುಂ॥೨೯೧॥

॥ಚಂಪಕಮಾಲಾವೃತ್ತ॥

ಪಡಿನೆಳಲಂ ಮೃಗೇಂದ್ರನುರೆ ಚಂದ್ರ ಶಿಲಾತಲದಲ್ಲಿ ಕಂಡು ಕಾ|
ಯ್ಪುಡರಲಿ ದಿಚ್ಚ್ರ ಮತ್ತದುಮಿದಿಚ್ಚ್ರರೆ ಗರ್ಜಿಸೆ ಮೇಘನಾದದಿಂ|
ದೊಡನದು ಗರ್ಜಿಸುತ್ತಿರೆ ಪಳಂಚಿವಿಲಂಘಿಸಿಸಿಂಹದ ಸ್ಪ್ರೋದ್ದತಾಂ ।
ಮಡಿದುದು ಶುದ್ಧರಲ್ಲಿ ನಿಜದೋಷ ಮನೊಂದಿಸೆಕೆಟ್ಟುಪೋಗರೆ ॥೨೯೨॥

॥ಮಹಾ ಸ್ರಗ್ಧರಾ ವೃತ್ತ॥

ನೊಳೆವುಲ್ಲಂಮೇದುಮಧ್ಯಂದಿನದಬಿರವಿಸಿಲ್ಗಾಗಬೆಸ್ಕಂಭದಂಗೊಂ|
ಡೆಳಸುತ್ತಂಪಲ್ಲವಲಾಂಭಃಪ್ಲವದಿಮುಳುಗಿತತ್ಕರ್ದಮಂಪತ್ತೆನಿಂದ ।
ವ್ಯಳಸುತ್ತೊಂದೊಂ ದರೋಳ್ಕ್ವೇಡಿಜುಕಮಗಳ್ದು ಸುಲ್ಕ್ಕಾಡುತುಂ
ಕಾಡೊಳೊಪ್ಪಂ ।
ದಳೆದಿದ್ದತ್ತರ್ಭ್ರಕಾಯಂಕೃಘುಮಹಿಷನಿಕಾಯಃಕಂಪ್ರೋತ್ಸಕಾಯಂ॥
॥ ೨೯೩ ॥

॥ಚಂಪಕಮಾಲಾವೃತ್ತ॥

ಇದು ಕರಿಪೋದ ತಾಣವಿದು ಸೈರಿಭನೈದಿದ ದಾರಿನೋಳ್ಪೊಡಿಂ ।
ತಿದು ಪುಲಿಯಿರ್ದ ಜಲ್ಮೆಳೆಯಿಡಕ್ಕಲಸೇಳ್ದಡಿಯಿಟ್ಟಬಟ್ಟೆನೋ

ಡಿದುಹರಿನಿಂದ ಪಜ್ಜೆಯಿಂದೆ ಪೊಕ್ಕಮದಾಂಬು ವಿದಾಸ್ಯಫೇನಮಿಂ।
ತಿದೆ'ತನಿಗರ್ಬು ತೆಳ್ತದೆ ಕೆಸರ್ಪರಿಗೊಂಡಿದೆ ಹಸ್ತಿಮೌಕ್ತಿಕಂ॥ ೩೯೪॥

॥ ಚಂಪಕಮಾಲಾ ವೃತ್ತ ॥

ಸರಳಿಪ ಪುಲ್ಲೆ ಪೋಡುವ ಮೊಲಂ ಬಿಡದಾಲಿಪ ಹಸ್ತಿನಿಲ್ವಸೂ।
ಕರನಡಿಗೊಳ್ವ ಪೇರ್ಮರೆ ಯೆಡಂಗುವ ಪೇರ್ಬುಲಿಪೂರ್ವಪಕ್ಷಿಗ।
ಳ್ಕೊರಗುವ ಖಡ್ಗಿಲಂಘಿಪವೃಕಂ ಮುರಿದೇಳ್ವಮೃಗೇಂದ್ರನೆತ್ತಲುಂ।
ನೆರೆದಿರೆ ಕಾಡೊಳುಣ್ಮಿದುದು ಬೇಡರ ಬೇಂಟೆಯ ವಾದ್ಯದಬ್ಬರಂ॥೩೯೫॥

॥ ಚಂಪಕಮಾಲಾ ವೃತ್ತ ॥

ನಡೆ ಬಿಡು ನಾಯ್ಗಳಂ ತೊಡುಸರಳ್ಗಳನಾರ್ದ್ದೆಸೆಸುತ್ತುಪತ್ತಬೊ।
ಬ್ಬಿಡು ಬಡಿ ಕೋಲ್ಗಳಂದಿಡುಮೊಲಂಗಳನೇಳ್ಬಲೆವೀಸಿಪುಲ್ಲೆಯಂ।
ಕೆಡವು ಕಡಂಗಿಪೊಯ್ಪುಬ್ಬುಲಿಯನಿಟ್ಟಿಯೊಳಾಂತಿಡುಪಂದಿಯಂಪಡ।
ಲ್ವಿಡಿಸು ಗಜಂಗಳಂಕುಳಿಯೊಳೆಂಬರವಂಪಿರಿದಾಯ್ತರಣ್ಯದೊಳ್ ॥೩೯೬॥

॥ ಚಂಪಕಮಾಲಾ ವೃತ್ತ ॥

ಚವರಿಮಿಗಕ್ಕೆ ನುಣ್ಗುರುಳ ನಗ್ಗದ ಹಸ್ತಿಗೆ ನೀಳ್ದಹಸ್ತಮಂ।
ಕವಲಿರಿದಿರ್ದ ಕೊಂಬಿನ ಮೃಗವ್ರಜಕೀರ್ಬ್ಬರಲಂ ದ್ವಿಪಾರಿಗು।
ಣ್ಮುವರಸನಾಗ್ರಮಂ ಪುಲಿಗೆ ಕೈಯೆರಡಂನಿಮಿರ್ದೆತ್ತಿಪಂದಿಗೊ।
ಪ್ಪುವನೊಳಕಯ್ತರ್ಪರರೆಬಬ್ಬಿಯದಸ್ಸಲೆಸಂಸವೇಟೆಯೊಳ್॥
॥ ೩೯೭ ॥

॥ ಮತ್ತೇಭ ವಿಕ್ರೀಡಿತ ವೃತ್ತ ॥

ಕಿಡಿಪುಟ್ಟುತ್ತಿರೆ ದಾಡೆಯಂಮಸೆದುಕೆಗ್ಗಣ್ಣಿಕ್ಕಿ ನೋಡುತ್ತೆ ಮೈ।
ಗೊಡಪುತ್ತಬ್ಬರ ಮಾಳಿಸುತ್ತೆ ಮೊಗಮಂತೂಗುತ್ತೆ ವಾಲಾಗ್ರಮಂ।
ಮಿಡುಕುತ್ತುಬ್ಬರಿಸುತ್ತೆ ರೋಮಚಯಮಂಮಿಾಂಟುತ್ತೆ ಕಂದಂಗಳಂ।
ಕೆಡಪುತ್ತಂ ಗದೊಳುರ್ದ್ದಿ ಬಲ್ಮರಗಳಂ ಬಂದತ್ತ ದೊಂದೆಕ್ಕಲಂ ॥೩೯೮॥

॥ ಉತ್ಪಲಮಾಲಾ ವೃತ್ತ ॥

ಪೋಗದಿರೆಂದು ಗರ್ಜಿಪ ಕಿರಾತನಮಾತದು ತಂನಕರ್ಣಮಂ।
ತಾಗದಮುನ್ನ ಮುಣ್ಮಿಕಿಡಿ ಕಣ್ಗಡೆಯೊಳ್ಕಿಡಿ ದಾಡೆಗಟ್ಟೆ ತಾಂ ।
ತಾಗಲಿದಿರ್ಚ್ಬಿ ಕೋಡುಡಿದ ಕಾಲನ ಸೈರಿಭದಂತೆ ಬರ್ಪಿನಂ ।
ತೂಗಿ ಕರಾಗ್ರದಿಂದೆ ಪೊಳೆವಿಟ್ಟಿಯೊಳಿಟ್ಟ ನದಂ ವನೇಚರಂ । ॥೩೯೯॥

॥ಉತ್ಪಲಮಾಲಾ ವೃತ್ತ॥

ಕಟ್ಟಿದಿರಲ್ಲಿ ಗರ್ಜಿಸೆ ತರಕ್ಷುತರಂ ತರಳಾಯತಾಕ್ಷಿ ಕಂ।
ಗೆಟ್ಟಮರ್ದಪ್ಪ ಲಂಜದಿರೆನುತ್ತ ಮಳಂಬೆಗಿದಪ್ಪುತಿರ್ಪಿನಂ ।
ತೊಟ್ಟನೆ ಪಾಯೆ ಪಜ್ಜೆ ಯಿಡದಲ್ಲಿಯೆ ನಿಂದು ಕಡಂಗಿ ಖಡ್ಗದಿಂ।
ದಟ್ಟೈನೆಲಕ್ಕೆ ಬೀಳನಮದಂ ಸದೆದಂ ಶಬರಾಧಿ ನಾಯಕಂ॥ ॥ ೪೦೦ ॥

---

ಪದ್ಯಸಾರಂ ಸಂಪೂರ್ಣಂ.

# NOTES.

## ತಾತ್ಪರ್ಯ ಸೂಚಕ ಟಿಪ್ಪಣಿ.

ಪದ್ಯ ಸಂಖ್ಯೆ

|| ಪಲ್ಲ || ಏಕ ದೈವವ, ಮುಖ್ಯವಾದ ದೇವರನ್ನು. ಮೂರ್ಖರು ಯುಕ್ತಾಯುಕ್ತ ತಿಳಿಯದ ಅಜ್ಞಾನರಾದರು.

|| ೧ || ಹೊರೆವವ, ಜೀವನ ಮಾಡುವವನು. ಮಡದಿ, ಹೆಂಡತಿ. ದಾರಿದ್ರ್ಯ, ಬಡತನ ಅಂದರೆ ದರಿದ್ರತ್ವವೆಂಬರ್ಥ. ವಾಗ್ವಿಧಾಯಿನಿ ೧೧೪ ಸೂತ್ರ ನೋಡು.

|| ೩ || ಸರ್ಪನೊಳು, ಹಾವಿನ ಸಂಗಡ. ವಾಗ್ವಿ. ೧೩೮ ಸೂ. ನೋಡು, ಇಪ್ಪತ್ತೊಂದು ಕುಲ, ಅಂದರೆ ತನ್ನ ಪಿತ್ರಾದಿಗಳು ೧೦ ಮಂದಿಯೂ ಆ ಮೇಲೆ ಪುತ್ರಾದಿ ೧೦ ಪುರುಷರೂ ತಾನೂ ಯೆಂಬ ಅರ್ಥ.

|| ೪ || ಬತ್ತಿ, ಆಧಾರ. ಹಂಬಲಿಸು, ಕಳವಳಪಡು

|| ೫ || ಕೊಂಡೆಯುವ, ಸುಳ್ಳನ್ನು. ಪುಂಡರೀಕಾಕ್ಷ, ಪುಂಡರೀಕವಂದರೆ ಕಮಲ, ಅಕ್ಷಿ. ಕಣ್ಣು. ಅಂದರೆ ವಿಷ್ಣುವೆಂದರ್ಥ.

|| ೬ || ಕೋಳಿ ಸ್ತನ್ಯ ಕೊಡದೆ ತನ್ನ ಮರಿಗಳನ್ನು ರೆಕ್ಕೆಗಳಲ್ಲಿಟ್ಟುಕೊಂಡು ಬೆಳಸುತ್ತದೆಂಬುವದು ಪ್ರಸಿದ್ಧವು. ಇದಕ್ಕೆ ಮಕ್ಕಳ ತಾಯಿಗೆ ಮೊಲೆ ಯಿಲ್ಲವೆಂಬ ಗಾಥೆ ದೃಷ್ಟಾಂತವು.

|| ೧೦ || ಸಿರಬಾಗಿ= ಶಿರಬಾಗಿ, ತಲೆಬೊಗ್ಗಿಸಿ ಅಂದರೆ ವಿಧೇಯನಾಗಿ. ವಾಗ್ವಿ. ೧೧೬ನೇ ಪ್ರಶ್ನೆ ೧ನೇ ಸೂ. ನೋಡು.

|| ೧೧ || ಸಿರಿಯೆಂಬ ಸೊಡರು, ಐಶ್ವರ್ಯವೆಂಬ ದೀಪ. ಸಿರಿ — ಶ್ರೀ ವಾಗ್ವಿ. ೧೧೬ನೇ ಪ್ರ. ೧ನೇ ಸೂ. ನೋಡು.

|| ೧೩ || ಲೋಕಾಪವಾದ, ನಿಂದೆ ಅಥವಾ ಸೊಡ್ಡು. ನಾಕೇಶ, ಇಂದ್ರನು. ನಾಕ ಅಂದರೆ ಸ್ವರ್ಗ ಅದಕ್ಕೆ ಈಶ, ಅರಸನೆಂದರ್ಥವು. ಸ್ವರವ್ಯಯಂ ಸ್ವರ್ಗ ನಾಕ ವೆಂಬ ಅಮರವು.

|| ೧೪ || ಜಾಡಿಯನ್ನು ಕೇಳಿ ಕೋಪವನ್ನು ಮಾಡಬೇಡ. ನಿಷ್ಟುರದ ವಾಕು, ಕಠಿನವಾದ ಮಾತು.

ಪದ್ಯ ಸಂಖ್ಯೆ.

|| ೧೫ || ನಳಮಾಂಧಾತ ಮುಂತಾದ ಚಕ್ರವರ್ತಿಗಳು ಸಹ ಸ್ಥಿರವಾಗಿ ನಿಲ್ಲಲಿಲ್ಲವೆಂಬದನ್ನು ಯೋಚಿಸಿ ಕೀರ್ತಿ ಮೇಲೆ ದೃಷ್ಟಿ ಇಟ್ಟಿರಬೇಕೆಂದು ತಾತ್ಪರ್ಯವು.

|| ೧೬ || ಅಳಲಿಸಿ, ದುಃಖ ಪಡಿಸಿ. ಪರರನ್ನು, ಅನ್ಯರನ್ನು. ಅಲ್ಪಕಾಲ, ಕೊಂಚಕಾಲ. ಮಳೆಯದಿರು, ಬಯ್ಯದಿರು.

|| ೧೭ || ಪರಧನ ಪರಪತ್ನಿಗಳಿಗೆ, ಹೆರರ ಹಣಕ್ಕೂ ಹೆಂಡತಿಯರಿಗೂ. ಅಳುಕಲು, ಆಶೆಪಟ್ಟರೆ. ಲಕ್ಷ್ಮಿ ತೊಲಗುವಳು. ಪರಧನ=ಪರರಧನ. ಷ. ತ. ಸಮಾಸ. ವ್ಯಾಗ್ವಿ. ೧೦೦ ಸೂ. ನೋ.

|| ೧೮ || ಮರಳ್ಛಿದ್ರಕುಂಭದ ವುದಕದಂತೆ, ವೊಡಕು ಹರವಿಯೊಳಗಣ ನೀರಿನ ಹಾಗೆ. ಆಯುಷ್ಯಸರಿಯುಪ್ಪುದು, ಆಯುಸ್ಸು ಗತಿಸಿ ಹೋಗುವದು. ಆದ್ದರಿಂದ ದೇವರ ಸ್ಮರಣೆ, ಅಂದರೆ ಧ್ಯಾನವನ್ನು ಮರೆಯದೆ ಜಾಗ್ರತೆಯಾಗಿರಬೇಕು.

|| ಪಲ್ಲ || ಮನುಷ್ಯರಿಗೆ ಯೆಷ್ಟು ಐಶ್ವರ್ಯವಿದ್ದಾಗ್ಯೂ ಇನ್ನೂ ಬೇಕೆಂಬ ಆಶೆ ಇರುತ್ತದೆಂದರ್ಥ.

|| ೨೦ || ವೃದ್ಧಾಪ್ಯ, ಮುದುಕತನ. ದಂತಗಳು, ಹಲ್ಲುಗಳು. ಶುದ್ಧಿಸಿತ ಕೇಶಂಗಳು, ನೆರತು ಯೆಲ್ಲಾ ಬಿಳೀ ಕೂದಲು ಉಂಟಾಗಿ. ಸ್ವತಂತ್ರವಹ ಬುದ್ಧಿ ಲೇಶಾಂಶವಿಲ್ಲದೆ, ೬೦ ವರುಷಕ್ಕೆ ಅರಳೂ ಮರುಳೂ ಎಂಬ ನಾಣ್ನುಡಿಯಂತೆ ಚಪಲಬುದ್ಧಿಯಾಗಿ.

|| ೨೧ || ಉದಯ ಮಧ್ಯಾಹ್ನ ಸಾಯಂಕಾಲಗಳು ಹ್ಯಾಗೋ ಹಾಗೆಯೇ ಅತಿ ತ್ವರೆಯಾಗಿ ಕಾಲವು ಹೋಗುತ್ತದೆಂಬದನ್ನು ಅರಿತು ಯಿದ್ದಾಗ್ಯೂ ಆಶೆ ಬಿಡದು.

|| ೨೨ || ಅಂತು, ಹಾಗೆ ಹೀಗೆ ಮಾಯಾ ಶಕ್ತಿಯಿಂದ ಮೋಹಿತರಾಗಿ ಚಿಂತಿಸುತ್ತಾ ಲೋಕ ಸುಖಗಳಲ್ಲಿ ಅನುಕೂಲವಿಲ್ಲದೆ ದುಃಖಿಪರು. ಆದರೆ ನಿತ್ಯಾತ್ಮನಾದ ದೇವರನ್ನ ನೆನಯುತ್ತಾ ಮಾಯೆಗೆ ಶಿಕ್ಕದೆ ಯಿರುವ ಜ್ಞಾನಿಯನ್ನು ವಿನಾಯಿಸಿ ನಿಂತ ಯೆಲ್ಲರಿಗೂ ಆಶೆ ಯೆಂಬದು ಬಿಟ್ಟು ಹೋಗುವದಿಲ್ಲವೆಂದಭಿಪ್ರಾಯವು.

|| ೨೪ || ಭೂಸುರರ, ಬ್ರಾಹ್ಮಣರನ್ನು. ಭಾಷೆ ಗೆಡಕನು, ಆಡಿದ ಮಾತು ತಪ್ಪುವವನು. ಕ್ಲೇಶ, ಕಲ್ಮಷ. ಆಶೆ, ಅಪೇಕ್ಷೆಯನ್ನು ಬಿಡದವನಿಗೆ ಸನ್ಯಾಸವೆಂಬ ಆಶ್ರಮವು ವ್ಯರ್ಥ.

ಪದ್ಯ ಸಂಖ್ಯೆ.

|| ೨೬ || ಕ್ಷಿತಿ, ಭೂಮಿ. ಸುತರು, ಮಕ್ಕಳು. ಸತಿ, ಹೆಂಡತಿ. ಮಿತ ವರಿತು, ನ್ಯಾಯ ತಿಳಿದು. ಸುತರಿಲ್ಲದವನಿಗೆ ಪೂಜ್ಯತ್ವ ಅಂದ ರೆ ಗೌರವವಿಲ್ಲ.

|| ೨೭ || ಕೃಷಿ, ಬೇಸಾಯ. ತೋಳು, ಭುಜಗಳು. ಭುಜ ಕೀರ್ತಿ ಯೆಂಬ ವೊಡವೆ.

|| ೨೮ || ಹಗೆಯೊಡನೆ, ಶತೃ ಜನರ ಸಂಗಡ. ಅಗಲಿ ಪೋಗು, ಬೇರೆ ಹೋಗು.

|| ೩೦ || ಹರಿದಾಸರೆನಿಸಿದರೆ, ಭಕ್ತರಾದರೆ. ಪರಗತಿಯೊಳು, ಪರಲೋ ಕ ಸುಖವಿಷಯದಲ್ಲಿ ಸಂಶಯವಿಲ್ಲ. ಜರೆಯ, ದೂಷಿಸಲು. ಇದು ನ್ಯೂನರೂಪ. ವಾಗ್ವಿ. ೮೪ ಸೂ. ನೋ.

|| ೩೨ || ದೇವರು ಕೋಪಿಸಿದರೆ ಅದಕ್ಕೆ ಪಾತ್ರನಾದ ಮನುಷ್ಯನ ನ್ನು ಕಾಪಾಡಲಾರರು. ದೈವ ಭಕ್ತಿಯುಳ್ಳವನು ದೈವ ದೂಷ ಕರ ಸಹವಾಸದಲ್ಲಿ ಕ್ಷಣವೂ ಇರುವದಿಲ್ಲ.

|| ಪಲ್ಲ || ಧನವು, ಹಣವು. ಇದ್ದರೆ ಮನುಷ್ಯನು. ಧನವಿಲ್ಲದವ ನು ಕಾಡು ಮೃಗಕ್ಕೆ ಸಮಾನ.

|| ೩೩ || ಧನವಂತನಿಗೆ ತಂದೆ ತಾಯಿ ಅಣ್ಣ ತಮ್ಮಂದಿರು ನೆಂ ಟರು ಯಿಷ್ಟರು ಯಾರೂ ಅಗತ್ಯವಿಲ್ಲ.

|| ೩೪ || ಧನವಂತನು ಹಣದ ಚಿಂತೆಯಿಂದ ಯೆಲ್ಲಿಯೂ ಹೋಗುವ ದೇ ಯಿಲ್ಲ.

|| ೩೬ || ಅವನಿಗೆ ಉತ್ತಮನು ಅಧಮನಾಗಿಯೂ ನೀಚನು ಉ ತ್ತಮನಾಗಿಯೂ ಕಾಣುವನು.

|| ೪೦ || ಅವನು ವಿನಯದಿಂದ ಮಾತಾಡ ಬರುವ ಬಡವನಿಗೆ ತನ್ನ ಸೆಡಕನ್ನು ತೋರುವನು.

|| ೪೧ || ಅರಸರು ಧನವಂತರಿಗೆ ಮರ್‍ಯಾದೆ ಮಾಡಿ ಬಹುಮಾನ ಗಳನ್ನು ಕೊಡುವರು.

|| ೪೨ || ಫಣಿಗಿರಿ, ಶೇಷಾದ್ರಿ. ಅಭೀಷ್ಟವ, ಕೋರಿಕೆಯನ್ನು. ಅಭೀಷ್ಟವ = ಅಭೀಷ್ಟವನ್ನು. ವಾಗ್ವಿ. ೧೩೧ನೇ ಪ್ರ ಶ್ನೆ ೫ನೇ ಸೂತ್ರವನ್ನು ನೋಡು.

|| ಪಲ್ಲ || ಲೋಭಿಯಲ್ಲಿ ದ್ರವ್ಯವಿದ್ದರೆ ಹಾವಿನ ತಲೆಯಲ್ಲಿನ ಮಾಣಿಕ್ಯದಂತೆ ವ್ಯರ್ಥವೆಂಬದು.

ಪದ್ಯ ಸಂಖ್ಯೆ.

|| ೪೪ || ಚೆಕ್ಕು ಮಣ್ಣನ್ನು ಕೆದರಿ ಅದರಲ್ಲಿ ಇಕ್ಕಿ ಅಂದರೆ ಮುಲವನ್ನು ಮುಚ್ಚಿಟ್ಟ ಹಾಗೆ.

|| ೪೫ || ಧರ್ಮರಹಿತವಾದ, ದಾನಮಾಡದ. ದುಷ್ಕರ್ಮ = ದುರ್‌ಕರ್ಮ. ವಾಗ್ವಿ. ೧೧೪ನೇ ಸೂ. ನೋಡು.

|| ಪಲ್ಲ || ದುರ್ಜನರ ಸಂಗ, ದುಷ್ಟ ಸಹವಾಸ. ತ್ಯಜಿಸು. ಬಿಡು. ಸಜ್ಜನರ ಸಂಗ, ಸತ್ಪುರುಷರ ಸಹವಾಸ. ಸಜ್ಜನರು = ಸತ್‌ಜನರು. ವಾಗ್ವಿ. ೧೧೪ನೇ ಸೂ. ನೋಡು.

|| ೪೮ || ದುಷ್ಟ ವ್ಯಾಘ್ರ, ಕೆಟ್ಟ ಹುಲಿ. ಅಟ್ಟಬಹ, ಹಿಂದೆಬಿದ್ದು ಬರುವ. ಬಹ = ಬರುವ. ಮದಕರಿ, ಮದ್ದಾನೆ. ಕೃಷ್ಣಸರ್ಪನ, ಕರೀ ನಾಗರ ಹಾವನ್ನು.

|| ೪೯ || ಜ್ವಾಲೆ, ಉರಿ. ಕಾಲಮೇಘ, ವರ್ಷಾ ಕಾಲದ ಮುಗಿಲು. ಶೂಲಪಾಣಿಯು, ಈಶ್ವರನ. ಫಣೆಯು = ಹಣೆಯು. ವಾಗ್ವಿ. ೧೧೬ ನೇ ಪ್ರ. ೪ನೇ ಸೂ. ನೋಡು. ಆಲಿ, ಕಣ್ಣು.

|| ೫೦ || ಗರಗಸ = ಕ್ರಕಚ. ವಾಗ್ವಿ. ೧೧೬ನೇ ಪ್ರ. ೧೫ನೇ ಸೂ. ನೋಡು. ಕೇಸರಿ, ಸಿಂಹ.

|| ೫೧ || ಒಂದು ಜಾತಿಗೆ ಅಂದರೆ ಚೇಳಿಗೆ ವಿಷವು ಬಾಲದಲ್ಲಿಯೂ, ಹಾವಿಗೆ ಹಲ್ಲಿನಲ್ಲಿಯೂ, ವಿಷದಲ್ಲಿ ಹುಟ್ಟಿದ ಹುಳಕ್ಕೆ ಮೈಯೆಲ್ಲಾ ವಿಷವು. ಆದರೆ ಈ ಯೆಲ್ಲಕ್ಕೂ ಹೆಚ್ಚಾದ ವಿಷವು ದುರ್ಜನನಾದ ಚಾಡಿಗಾರನಲ್ಲಿರುವದೆಂಬುವರು. ಇದಕ್ಕೆ ದೃಷ್ಟಾಂತ ವೃಶ್ಚಿಕಸ್ಯ ವಿಷಂ ಪುಚ್ಛಂ ಮಕ್ಷಿಕಸ್ಯ ವಿಷಂ ಶಿರಃ। ತಕ್ಷಕಸ್ಯ ವಿಷಂ ದಂತಂ ಸರ್ವಾಂಗಂ ದುರ್ಜನಸ್ಯತು ಯೆಂಬದರ ಭಾಷಾಂತರವೇ ಈ ಪದವಾಗಿದೆ.

|| ೫೨ || ಬಂಡಿಯನ್ನು ನೋಡಿ ೫ ಬಾರು ದೂರವೂ ಹಾರುವಗೆ ಅಂದರೆ ಕುದುರೆಗೆ ೧೦ಬಾರೂ ಆನೆಗೆ ೧೦೦ಬಾರು ದೂರವೂ ಬಿಡಬೇಕೆಂತಲೂ ದುರ್ಜನನು ಯಿರುವ ವೂರನ್ನೇ ಬಿಡಬೇಕೆಂತಲೂ ಅರ್ಥವು.

|| ೫೪ || ಕೆಟ್ಟ ನರಜನ್ಮದಲ್ಲಿ ತಿರಿಗಿ ಹುಟ್ಟದ ಹಾಗೆ ಮೋಕ್ಷಸಾಧನ ಮಾಡಬೇಕೆಂಬದು.

|| ಪಲ್ಲ || ತಾನು ಯೆಷ್ಟು ಕಷ್ಟಪಟ್ಟು ಸಂಪಾದಿಸಿದಾಗ್ಯೂ ತನಗೆ ಹಾಗಮಾತ್ರ ವುಪಯೋಗವಾಗುವದು.

|| ೫೬ || ಹದಿನಾರನೆ ವಿಧಿಯು ಸದನದೊಳು. ಅಂದರೆ ಸತ್ತ ೧೧ ಮತ್ತು ೧೨ನೇ ದಿನಗಳ ಷೋಡಶ ಶ್ರಾದ್ಧಕ್ಕೆ ಕೂತು ಕೊಂಡು ತಿಂದಾಗ್ಯೂ.

ಪದ್ಯ ಸಂಖ್ಯೆ.

॥ ೫೯ ॥ ಪರಮಪದ, ಮೋಕ್ಷಸಾಂಮ್ರಾಜ್ಯ. ಮುಖ್ಯವಾಗಿ ಹರಿಕಟಾಕ್ಷವಿಲ್ಲದೆ ಭಾಗ್ಯವಿಲ್ಲೆಂಬುವದು.

॥ ೬೦ ॥ ಕುಲವನಿತೆ, ಹೆಂಡತಿ. ಹೊಲಬುದಪ್ಪಿ, ಸ್ಥಳತಪ್ಪಿಹೋಗಿ ಇಲ್ಲಿ ಮನೆ ಅಂದರೆ ಶರೀರ.

॥ ೬೧ ॥ ಹುಲಿ ಯೆಂಬದು ಕ್ರೋಧ. ಕರಡಿ ಯೆಂದರೆ ಮಾತ್ಸರ್ಯ. ಯಿಂಥಾ ಮನೆ ಯೆಂಬ ಶರೀರವನ್ನು ಬಿಟ್ಟು ಶಾಶ್ವತವಾದ ಪರಲೋಕ ಶೇರೆಂದರ್ಥವು.

॥ ೬೨ ॥ ಗಡಿಗೆಯ ಪೊಳಗೆ, ಹೊಟ್ಟೆಯೊಳಗೆ. ಕ್ರಿಮಿಗಳು, ಹುಳಗಳು ಮತ್ತು ಹೊಟ್ಟೆಯೆಂದಿಗೂ ಯೆಷ್ಟು ತಿಂದರೂ ತುಂಬುವದಿಲ್ಲ ವೆಂದಭಿಪ್ರಾಯವು.

॥ ೬೩ ॥ ಈ ಹಾಳು ಮನೆಯನ್ನು ಯಾರು ತೋರಿಸಿದರು. ಹದಿನಾರು ಭಿತ್ತಿಗಳು ಅಂದರೆ ವಾಕ್ಪಾಣಿ ಪಾದಪಾಯೂಪಸ್ಥ ಚಕ್ಷು ಶ್ರೋತ್ರ ಜಿಹ್ವಾ ಘ್ರಾಣ ಶಬ್ದ ಸ್ಪರ್ಶ ರೂಪ ರಸ ಗಂಧ. ರೇತೋ ಬುದ್ಧಿಗಳೆಂಬ ಗೋಡೆಗಳು ಬೀಳುವವಂದರೆ ಶಿಥಿಲವಾಗುವವು. ಕಾಳಸರ್ಪನು, ಮೃತ್ಯುವು.

॥ ೬೪ ॥ ಮೂರು ಮಾತನು, ಧರ್ಮ ಅರ್ಥ ಕಾಮಗಳೆಂಬ ಮಾತುಗಳನ್ನು. ಆರಪಥದಲಿ, ಯಾವ ಮಾರ್ಗದಲ್ಲಿ ತಪ್ಪಿನಡದೆ ಅದರಿಂದ ನೀನು ಯಾವ ಸ್ಥಿತಿಯನ್ನು ಕೇಳಿದೆ.

॥ ೬೫ ॥ ಹತ್ತು ಗಂಟಿಗೆ ತಿಂಡಿ ಇಲ್ಲದೆ ಯೇಳುಮಂದಿ ಅಂದರೆ ಕಾಮ ಕ್ರೋಧಾದಿಗಳು ಮನ ಸಹಿತವಾಗಿ ಯೇಳು.

॥ ೬೬ ॥ ೮ ಮಂದಿ, ವಿದ್ಯಾಮದ. ಅರ್ಥಮದ. ಮುಂತಾದ ಅಷ್ಟಮದಗಳೆಂದರ್ಥವು.

॥ ೬೮ ॥ ಏವಂಚ ದೈವಭಕ್ತನಾಗಿ ದೇಹಾದಿಗಳು ಅನಿತ್ಯವೆಂದರಿದು ಯಿರಬೇಕೆಂಬುವದು.

॥ ಪಲ್ಲ ॥ ಜಾತಿಯಿಂದ ಹೊಲೆಯನು ಹೊರಗೆ ಯಿದ್ದಾಗ್ಯೂ ನೀತಿ ಯಿಲ್ಲದವರೆಲ್ಲರೂ ಹೊಲೆಯನ ಸಮಾನರೆಂದರ್ಥ ॥

॥ ೬೯ ॥ ಶೀಲವನುಕೈಕೊಂಡು, ನೀತಿಯನ್ನು ತಿಳಿದು. ಯೆರಡು ಬಗೆಯುವದು ೫ನೇ ಪದ್ಯದಲ್ಲಿ ಹೇಳಿದೆ.

॥ ೭೩ ॥ ಪರಸತಿಗೆ ಅಳುಕುವದು ೧೩ನೇ ಪದ್ಯದಲ್ಲಿ ವಿವರಿಸಿಯಿದೆ.

॥ ೭೪ ॥ ಜ್ಞಾನ ಪುಂಜವು, ಆತ್ಮಜ್ಞಾನದ ಸಮಷ್ಟಿಯು. ಮಹಾಸುಜ್ಞಾನ ಸಾಗರ ಶಾಂತಿ ರಸದ ಉದ್ಯಾನವನವು, ಶ್ರೇಷ್ಠವಾದ ಜ್ಞಾನ

ಪದ್ಯ ಸಂಖ್ಯೆ.

ವೆಂಬ ಕಡಲಿನಲ್ಲಿನ ತಾಳ್ಮೆ ಯೆಂಬ ನೀರಿನಿಂದ ಬೆಳೆದ ಉಪವನವು. ಇದುವೆ, ಈ ಸಾಧುಲಕ್ಷಣವೇ. ಕೇಳೆಂದ, ಈಶ್ವರನು ತನ್ನ ಪುತ್ರನಾದ ಕುಮಾರಸ್ವಾಮಿಗೆ ಹೇಳಿದ. ಇದರ ಪದ್ಯಗಳೆಲ್ಲಾ ಭಾಮಿನೀ ಷಟ್ಪದಿಯಾಗಿದೆ. ಇದರ ಲಕ್ಷಣಕ್ಕಾಗಿ. ವಾಗ್ವೀ ೧೯೧ನೇ ಪ್ರ. ೫ನೇ ಸೂ. ನೋಡಿ ಪ್ರಸ್ತರಿಸಬಹುದು.

|| ೭೬ || ದುಖಿಗೆರವ, ದುಖಪುಳ್ಳವರ. ಇರವ, ಸ್ಥಿತಿಯನ್ನು. ಉರುಹು, ಗಲಿಬಿಲಿ.

|| ೭೭ || ಒಬ್ಬರನ್ನು ನಿಷ್ಟುರಿಸದೇ ಲೋಕವನ್ನು ನೆಚ್ಚದೆ ಶಾಂತವಾಗಿ ಸುಟ್ಟ ಬಟ್ಟೆಯಂತೆ ಯಿರುವರು.

|| ೭೯ || ಕುಂದು, ಆಪತ್ತು, ವ್ಯಸನ. ಕುಸಿಯು, ದುಖಪಡು.

|| ೮೦ || ಪೋಷಣವ, ಸುಖೋಪಚಾರಂಗಣಳನ್ನು. ಇಹ, ಈ ಲೋಕ. ಪರ, ಸ್ವರ್ಗಲೋಕ. ವಾಸನಿಲ್ಲದೆ, ಈ ಯೆರಡು ಲೋಕಗಳಭೋಗಾಪೇಕ್ಷೆಯಿಲ್ಲದೆ. ಅಂದರೆ ವಿರಕ್ತರಾಗಿರುವರು. ಘಾಸಿಯಾಗರು. ಪ್ರಾರಬುಧಕೆ, ಪ್ರಾಪ್ತವಾದ ಪ್ರಾರಬ್ಧ ಫಲಕ್ಕೆ ವ್ಯಥೆ ಪಡರು. ಶೋಕದ ರಾಶಿಯನು, ಮೋಹವನ್ನು. ದುಖ ಪರಂಪರೆ, ಭ್ರಾಂತಿಗಳನ್ನು.

|| ೮೧ || ಹಿಂದಣದ ಸುದ್ದಿಯನು, ನಡೆದು ಹೋದ ಸಂಗತಿಯನ್ನೂ. ಮುಂದಣದ, ಮುಂದೆ ಆಗತಕ್ಕ ಸಂಗತಿಯನ್ನೂ ಕುರಿತು, ಯೋಚಿಸರು. ಆಕ್ಷಣ, ತತ್ಕಾಲದಲ್ಲಿ ಬಂದದ್ದನ್ನು ಅನುಭವಿಸುತ್ತಾ ಆನಂದವಾಗಿರುವರು.

|| ೮೨ || ಯೇನನ್ನು ಅಪೇಕ್ಷಿಸಿದರೂ ಕೊಡುತ್ತಾ ಆಶಾ ಪಾಶಗಳಿಲ್ಲದೆ ಹರ್ಷದ ಕಡಲೊಳು, ಸಂತೋಷವೆಂಬ ಸಮುದ್ರದಲ್ಲಿ ಮುಳುಗುತ್ತೇಳುತ್ತಾ ನಿರಂತರವೂ ಹೀಗೆಯೇ ಇರುವರು. ಹರ್ಷದ ಕಡಲು, ಯೆಂಬದು ಸಾಧ್ಯ ವಸಾಯಲಕ್ಷಣೆ. ವಾಗ್ವಿ. ೧೬೯ ಸೂ. ನೋಡು.

|| ೮೩ || ಶಿಶುವಿನಂತೆ, ಕೂಸಿನಂತೆ. ಅಶನ ಯುಕ್ತಾಹಾರ, ಮಿತಾಹಾರ ಮಾಡುವರು.

|| ೮೪ || ಉಚ್ಚ ನೀಚಗಳಿಲ್ಲದೇ ಚರಾಚರಾತ್ಮಕನು ವೊಬ್ಬನೇ ಲೋಕವೆಲ್ಲಾ ತುಂಬಿ ಯಿದ್ಧಾನೆಂದು ಭಾವಿಸುತ್ತಾ ಶತೃವನ್ನು ಮಿತ್ರ

ಪದ್ಯ ಸಂಖ್ಯೆ.

ನಂತೆ ಯೆಣಿಸಿ ಸಂಸಾರವನ್ನು ಹೀನಗೊಳಿಸುತ್ತಾ ಯಿರುವ ರೆಂದು ತಾತ್ಪರ್ಯವು.

॥ ೭೫ ॥ ಮೇರೆ, ದಡವು. ಮೇರುಪರ್ವತವು ತಲೆ ಕೆಳಗಾದಾಗ್ಯೂ ಯೆಲ್ಲಾ ಪಟ್ಟಗಳೂ ನಡದು ಹಾರಿದಾಗ್ಯೂ ಸೂರ್ಯ ಚಂದ್ರ ನಕ್ಷತ್ರಗಳು ತಮ್ಮ ಮಾರ್ಗವನ್ನು ತಪ್ಪಿಹೋದಾಗ್ಯೂ ಸಾಧು ಜನರು ಸತ್ಯವನ್ನು ಮೀರಿ ನಡೆಯರು.

॥ ೭೬ ॥ ಕೇಳು ಮುಕಯೋಗೀಂದ್ರ, ವ್ಯಾಸನು ತನ್ನ ಮಗನಾದ ಶುಕನಿಗೆ ಉಪದೇಶ ಮಾಡುತ್ತಾನಾದ್ದರಿಂದ ಸಂಬೋಧನೆ. ವಾಗ್ವಿ. ೧೩೬ನೇ ಸೂ. ನೋಡು. ಸಂಸೃತಿ. ದಾರಾಪುತ್ರ ರೂಪವಾದ ಸಂಸಾರ. ನಿಷ್ಫಲಾರಂಭ, ವ್ಯರ್ಥ ಪ್ರಯತ್ನ. ಒಡ್ಡಿದ, ಯಮರಾಗಿ ಯಿಟ್ಟ. ಸೊಡರು, ದೀಪ. ಈ ವೃತ್ತವು ಭಾಮಿನೀಷಟ್ಪದಿ. ಲಕ್ಷಣ ಹೇಳಿಯಿದೆ.

॥ ೭೭ ॥ ಕಾರಾಗಾರದಂದದಿ, ಶೆರೆಮನೆಯಂಹಾಗೆ. ಘೋರಾಕಾರ, ಭಯಂಕರವಾದ. ಸುಕೃತ ದುಷ್ಕೃತ, ಪಾಪಪುಣ್ಯಗಳು. ದ್ವಂದ್ವಸಮಾಸ. ವಾಗ್ವಿ. ೧೦೪ನೇ ಸೂ. ನೋಡು.

॥ ೭೮ ॥ ಸಾವವರ, ಸಾಯುವವರ. ಘಳಿಸಲು, ಸಂಪಾದಿಸಲು. ಠಾವು, ಮನೆ.

॥ ೭೯ ॥ ತಾನು ಹುಟ್ಟುವಾಗ ಪೊಬ್ಬನು ಸಾಯುವಾಗ ಪೊಬ್ಬನು. ನಡುವೆ ಬಂಧು ಜಳಗಗಳೆಂಬ ತೊಡಕು ಅಂದರೆ ತೊಂದರೆ. ಇದೆಲ್ಲಾ ಅಶಾಶ್ವತವೆಂದು ತಿಳಿದು ವಿವೇಕದಿಂದ ಇದನ್ನು ಸುಟ್ಟ ಮಹಾತ್ಮನೇ ಯೋಗ್ಯನಾದ ಶಿಷ್ಯನು.

॥ ೮೦ ॥ ನೀರಜಸಿ, ದಾಪಪಟ್ಟು. ಖುಣಾಸುಮಂಥವು, ನಿಯಮಿತಸಂಮಂಥ.

॥ ೮೧ ॥ ವಿದ್ಯವನ್ನು ಬಹಳ ಕಲಿತಾಗ್ಯೂ ಧನವನ್ನು ಸಂಪಾದಿಸಿದಾಗ್ಯೂ ಅಧಿಕಾರವನ್ನು ಹೊಂದಿದಾಗ್ಯೂ ಸುಂದರ ಸ್ತ್ರೀಯನ್ನು ವೈಶವನಾದಾಗ್ಯೂ, ಇವುಗಳೆಲ್ಲಾ ಅಶಾಶ್ವತವೆಂದು ತಾತ್ಪರ್ಯವು.

॥ ೮೨ ॥ ಬಾಲ್ಯ ಯೌವನ ವಾರ್ಧಕ್ಯಗಳೆಂಬ ಮನುಷ್ಯರ ಅವಸ್ಥೆಗಳಲ್ಲಿ ಕ್ರಮವಾಗಿ ತಾಯಿ ತಂದೆಗಳು ತಾವೇ ಸ್ವಕೀಯ್ಯವಾಗಿಯೂ ಮಕ್ಕಳು ಇವರುಗಳಿಂದ ಪೋಷಿಸಲ್ಪಟ್ಟು ಕಡೆಗೆ ಜಂ

ಪದ್ಯ ಸಂಖ್ಯೆ.

ಕಿಯಲ್ಲಿ ಸುಡಲ್ಪಡುವ ಈ ದೇಹವು ಅನಿತ್ಯವೆಂದು ತಾತ್ಪ ರ್ಯವು.

|| ೯೪ || ದೇವತಾ ಬಲಿಗಾಗಿ ತಂದ ಕುರಿಯು ತನ್ನ ಉತ್ತರ ಕ್ಷಣ ಮರಣವನ್ನರಿಯದೆ ಗುಣಿಯಲ್ಲಿ ತೋರಣಕ್ಕಾಗಿ ತಂದಿರುವ ತಳಿರು ಅಂದರೆ ಮಾವಿನ ಚಿಗುರನ್ನು ತಿನ್ನುವಂತೆ ನರರೆಂಬ ಕುರಿಗಳು ಸಂಸಾರ ಸುಖದಲ್ಲಿ ಮಗ್ನರಾಗಿ ಮೃತ್ಯು ವಶವಾ ಗುವರೆಂಬುವದು.

|| ೯೫ || ಮನುಷ್ಯರಿಗೆ ಸಂಭವಿಸುವ ಮೃತ್ಯುವಿನ ಕಾಲಪರಿಮಿತಿ ಸ್ಥಾನ ವಿಧಗಳನ್ನು ತಿಳಿಯುವದಿಲ್ಲ. ಜಾತಸ್ಯಮರಣಂ ಧ್ರು ವಂ ಯೆಂಬ ನ್ಯಾಯದಂತೆ ಯಾರಿಗೂ ಸಾವು ತಪ್ಪುವದಿಲ್ಲ. ಇದನ್ನು ತಿಳಿಯದೆ ಬಹು ಯತ್ನದಲ್ಲಿ ಫಲವೇನು.

|| ೯೬ || ಬ್ಯಾಸಿಗೆ ಘಾಳಿ ಮಳೆ ಸೋನೆ ಮಂಜು ಯೆಂಬ ಕಾಲಕೃತವಾ ದ ದುಃಖಗಳನ್ನು ಸಹಿಸಿಕೊಂಡು ಮನುಷ್ಯರು ಯಿರು ತ್ತಾರೆ. ಯೆಲ್ಲಾಕಾಲಾಧೀನವಾಗಿದೆ. ಯಿಂಥಾ ಲೋಕದಲ್ಲಿ ಸು ಖವೆಲ್ಲಿಯಿದೆ ಯೆಂದು ತಾತ್ಪರ್ಯವು.

|| ೯೭ || ಕುನ್ನಿಯವ್ವನವೆಂಬ ಸನ್ನಿವಿಕಾರವು ಪ್ರಾಪ್ತವಾದ ಕಾಲದಲ್ಲಿ ಮನುಷ್ಯನು ತನ್ನ ಭುಜಗಳನ್ನು ನೋಡಿಕೊಳ್ಳುತ್ತಾ ಯ ವ್ವನ ಸ್ತ್ರೀಯರನ್ನು ನೋಡುತ್ತಾ ಸನ್ನೆ ಮಾಡುತ್ತಾ ಮ ತ್ತೊಬ್ಬರ ಪೊಡವೆಯನ್ನು ಹಾಳು ಮಾಡಿ ಸಂತೋಷ ಪಡು ತ್ತಾ ಕೆಲವರನ್ನು ಹಾಸ್ಯಮಾಡುತ್ತಾ ತನ್ನ ಕಂದನವೆಂದು ಪಾಡುತ್ತಾ ಕನ್ನೆಯಲ್ಲಿ ಕುರುಬಿಸುವ ಅಂದರೆ ಕೋರೆಯಾಗಿ ಜುಟ್ಟು ಗಂಟುಹಾಕಿಕೊಳ್ಳುತ್ತಾ ಅಥವಾ ರುಮಾಲೆಯನ್ನು ಕೋರೆಯಾಗಿ ಸುತ್ತುತ್ತಾ ಹುಚ್ಚು ಹಿಡಿದವನಹಾಗೆ ತಿರು ಗುವನು.

|| ೯೮ || ಮಣಿಯನು, ತಗ್ಗುವದಿಲ್ಲ. ಅರಿಯರನು, ಮಾನ್ಯರನ್ನು, ದೊಡ್ಡವರನ್ನು. ತೃಣವಾಗಿ ಅಲಕ್ಷ್ಯಮಾಡುವನು. ಗುಣಸ್ಥ ರಲ್ಲಿ ಅವಗುಣವನ್ನು ಯೆಣಿಸುವನು. ಕುಹಕಿಗಳು, ಕುಚೋ ದ್ಯಗಾರರು. ಕೊಂಡಾಡೆ, ಸ್ತೋತ್ರಮಾಡಿದರೆ. ಕೊನರುವ ನು, ಉಬ್ಬುವನು. ಯಾರನ್ನಾದರೂ ನಗುವನು. ಯವ್ವನ ಗರ್ವದಲ್ಲಿ. ಅರಿಯರು = ಆರ್ಯರು = ದೊಡ್ಡವರು. ವಾಗ್ವಿ. ೧೧೬ನೇ ಪ್ರಶ್ನೆ ೫ನೇ ಸೂ. ನೋಡು.

ಪದ್ಯ ಸಂಖೆ.

॥ ಸೂಚನೆ ॥ ಧರಣಿಪತಿ, ಓ ಅರಸನೇ ಕೇಳೆಂಬುವದು. ದ್ರೌಪದಾದೇವಿಯ
ಸೌಂದರ್ಯಕ್ಕೆ ತಕ್ಕಂತೆ ಪಟ್ಟಣವನ್ನು ಸಹ ಸ್ವಯಂವರಮ
ಹೋತ್ಸವಕ್ಕೋಸ್ಕರ ಅಲಂಕರಿಸಿದರೆಂದು ತಾತ್ಪರ್ಯ॥ ಈ
ಭಾರತವು ಜನಮೇಜಯನಿಗೆ ಹೇಳಿದ್ದಾದ್ದರಿಂದ ಪಾಂಚಾಲ
ಪುರವರ್ಣನೆಯಲ್ಲಿ ಯೆಲ್ಲೆಲ್ಲಿ ಸಂಬೋಧನೆ ವಿಭಕ್ತಿಗಳು ಭೂ
ಮಿಪತಿ ಅರಸನೇ ಇತ್ಯಾದಿಗಳು ಬಂದಾಗ್ಯೂ ಕೇಳು ಕೇಳು
ಯೆಂಬದಾಗಿ ವಿಧ್ಯರ್ಥಕ ಬಂದಾಗ್ಯೂ ಜನಮೇಜಯರಾ
ಯನಿಗೆಂದು ತಿಳಿಯತಕ್ಕದ್ದು. ಇದೂ ಭಾಮಿನಿಷಟ್ಪದೀ ವೃ
ತ್ತವೇ ಆದ್ದರಿಂದ ಲಕ್ಷಣವು ಮುಂಚೆ ಹೇಳಿ ಸೂಚಿಸಿಯಿದೆ.

॥ ೯೯ ॥ ಪಿತನ ಪಿತಾಮಹರು, ತಂದೆಯ ತಾತಂದಿರು ಅಂದರೆ ಪಾಂಡವ
ರು. ಧೌಮ್ಯಋಷಿಯ ಆಶ್ರಮಕ್ಕೆ. ಖಚರವಚನ, ಚಿತ್ರರ
ಥನೆಂಬ ಗಂಧರ್ವನ ಮಾತು. ರಮಣೀಯ್ಯವಾದ ಶಕುನ
ಮನೋಜಯಗಳನ್ನು ನೋಡುತ್ತಾ. ಭೂಮಿಲಂಬದ, ಭೂ
ಮಿಯಲ್ಲಿ ವಿಸ್ತಾರವಾದ. ನೃಪರನೆರವಿಯ, ರಾಜಸಮೂಹ
ವುಳ್ಳ. ದೃಪದರಾಯರ ಪಟ್ಟಣವನ್ನು ಹೊಕ್ಕರು.

॥ ೧೦೦ ॥ ಭರದಿ, ಸಡಗರವಾಗಿ. ಐತಂದ, ಬಂದ. ಅಖಿಲ ಭೂಮೀಶ್ವರ
ರ, ಯೆಲ್ಲಾ ಅರಸರ. ಘನ ಚತುರಂಗ ಪದಹತಿ ಧರಣಿ ನಿರ್ಗ
ತ ರೇಣು ಪಟಲ ಪರಾಗ ಸಂಗದಲಿ, ಹಸ್ತ್ಯಶ್ವ ರಥ ಪದಾತಿ
ಗಳೆಂಬ ನೇಸೆಯ ಪಾದಘಾತದಿಂದ ನೆಲದ ದೆಸೆಯಿಂದೇಳುವ
ಕೆಂಧೂಳಿಯು ಯೆಲ್ಲೆಲ್ಲಿಯೂ ವ್ಯಾಪಿಸಿತಾದಕಾರಣ. ಅರು
ಣಮಯವಾಯ್ತು, ಕೆಂಪುಬಣ್ಣ ತುಂಬಿತು. ಸರಸಿಜಾಕ್ಷಿಯ,
ದ್ರೌಪದಿಯನ್ನು, ನೆನೆದು. ಪ್ರಪಂಚವೆಲ್ಲಾ ರಾಗರಸ ವುಬ್ಬಿ
ದಂದಲಿ ಅಂದರೆ ದ್ರೌಪದೀ ಸ್ವಯಂವರಕ್ಕೆ ಬಂದ ಅನೇಕ
ನೃಪರ ಸೇನೆಯ ಪಾದಘಾತದಿಂದೆದ್ದ ಕೆಂಧೂಳಿಯು ದಿಗಂತ
ಗಳನ್ನೆಲ್ಲಾ ಆವರಿಸಿದ್ದರಿಂದ ದ್ರೌಪದಿಯನ್ನು ಮನಸ್ಸಿನಲ್ಲಿ ನೆನ
ಸಿ ಚರಾಚರಾತ್ಮಕ ಪ್ರಪಂಚಕ್ಕೆಲ್ಲಾ ರಕ್ತಿವುಂಟಾಯಿತೋ ಯೆಂ
ಬುವಹಾಗೆ ಸಕಲ ದಿಕ್ಕುಗಳೂ ರಾಗಮಯವಾದವು. ಇಲ್ಲಿ ರಾ
ಗ ಅಂದರೆ ರಕ್ತಿಯೆಂಬ ಆಸಕ್ತಿಯೂ ಕೆಂಪುಯೆಂತಲೂ ಯೆ
ರಡರ್ಥಗಳು. ಸರಸಿಜಾಕ್ಷಿ = ಕಮಲದೋಪಾದಿಯಾದ ಕಣ್ಣು
ಗಳುಳ್ಳವಳೆಂದು ಶಬ್ದ ನಿಷ್ಪತ್ತಿಯು.

ಪದ್ಯ ಸಂಖೆ.

|| ೧೧೧ || ನೆರದ, ತುಂಬಿರುವ. ಪಲ್ಲವ, ಚಿಗುರು. ಸತ್ತಿಗೆ, ಛತ್ರ. ಸಿಂಧ, ಸೂರೇಪಾನ. ಸೀಗುರಿ, ಧ್ವಜ. ಸಬಳ, ಭಲ್ಯ. ವಿಡಾಯಿ, ಗುಂಪು. ತರಣಿ ಸೂರ್ಯ. ಅನಿಲ, ವಾಯುವು. ಗಗನೇಚರರು, ದೇವತೆಗಳು. ಖಗಕುಲ, ಪಕ್ಷಿಸಮೂಹ.||ತಾ|| ಸ್ವಯಂವರಕ್ಕೆ ಬಂದ ಅರಸರ ಸೈನ್ಯದ ಬಿರುದುಗಳ ಸಂದಣಿಯಲ್ಲಿ ಸೂರ್ಯನೇ ಮುಂತಾದ ದೇವತಾ ಪುರುಷರಿಗೆ ಸಹ ಸಂಚಾರಕ್ಕೆ ಅವಕಾಶ ವಿಲ್ಲವೆಂಬುದು.

|| ೧೧೨ || ಚತುರ, ನಾಲ್ಕು. ಉದಧೀವಲಯ, ಸಮುದ್ರಗಳಿಂದ ಸುತ್ತಿರುವ ಭೂಮಂಡಲದ. ಅವನೀಪತಿಗಳೇ, ಧೊರೆಗಳೇ. ಕೃತಕ ವಿಪ್ರೋತ್ತಮರು, ಬ್ರಾಹ್ಮಣ ವೇಷವನ್ನು ಹಾಕಿದ ಪಾಂಡವರು. ಭಿಕ್ಷಾವೃತ್ತಿಯಲ್ಲಿ, ಬಂದರು. ಅಂದರೆ ಪಾಂಡವರು ವೇಷದಿಂದ ದ್ರುಪದ ಪಟ್ಟಣಕ್ಕೆ ಬಂದರೆಂಬುವದು.

|| ೧೧೩ || ಪಾಂಚಾಲನಗರಿ, ದ್ರುಪದಪಟ್ಟಣ. (ಪುಂಸ್ತ್ರೀ) ಪುರೀ ನಗರ್ಯಾವಾಪಟ್ಟಣಂ ಪುಟ ಭೇದನವೆಂದಮರವು. ಜಲಧಿಮಧ್ಯದ ಕುರುಹು, ಸಮುದ್ರ ಮಧ್ಯದ ಚಿಹ್ನವು. ಅಂದರೆ ಇದು ಸಮುದ್ರವೋ ಅಥವಾ ಪಟ್ಟಣವೋಯೆಂಬ ಭ್ರಾಂತಿಮದಲಂಕಾರ.

|| ೧೧೪ || ಪಟ್ಟಣದಲ್ಲಿ ಸಂಮರ್ದವಾದ್ದರಿಂದ ಅಲ್ಲಿ ಭಿಕ್ಷಾವೃತ್ತಿಯುಳ್ಳ ನಮಗೆ ಬಿಡಾರ ಅಂದರೆ ಸ್ಥಳ ಶಿಕ್ಕುವದೇ? ಇಲ್ಲ. ಗುಡಿಗುಡಾರಗಳಲ್ಲಿರಲಿಕ್ಕೆ ನಾವರಸರಲ್ಲ. ಆದ್ದರಿಂದ ನಮಗೆ ಘಟಬಂಧುರದಶಾಲೆ, ಕುಂಬಾರರ ಮನೆಯೊಳಗಿನಕೊಠಡಿಯೇ ಸಾಕೆಂದು ಪ್ರವೇಶಿಸಿದರು. ಭವನ = ಮನೆ. ಭವನಾಗಾರಮಂದಿರವೆಂದಮರ.

|| ೧೧೫ || ಭಾಂಡ, ಹರವಿ. ಕರುವಾಡ, ಉಪ್ಪರಿಗೆ. ಪರುಠವಿಸಿದನು, ಸಿದ್ಧ ಮಾಡಿದನು.

|| ೧೧೬ || ಸೊಸಕ, ಹುವ್ವಿನ ಶೃಂಗಾರ. ಆಗಾರಪಂಕ್ತಿ, ಮನೆಗಳಸಾಲು. ರಚಿಸು, ಅಲಂಕರಿಸು.

|| ೧೧೭ || ಚಿನ್ನದ ಕೆಲಸದ ಚಿತ್ರಗಳು, ಗೋಡೆಗಳು, ಭಿತ್ತಿಗಳು, ಪ್ರಾಣಸಹಿತವಾಗಿವೆಯೋ ಯನ್ನುವ ಹಾಗೆ ನಾನಾವಿಧಗಳಾದ ಬೊಂಬೆಗಳಿಂದ ಪ್ರಕಾಶಿಸಿದವು.

|| ೧೧೮ || ಮನೆಗಳು ಕುಂಕುಮ ಕೇಸರದಿಂದ ಮಾಡಿದ ಕಾರಣಿಕಸ್ತೂರಿಯಿಂದ ಸಾರುಸುವಿಕೆ. ಪಚ್ಚೆಕರ್ಪೂರದಿಂದ ಮಾಡಿದ

ಪದ್ಯ ಸಂಖೆ.

ರಂಗೋಲಿ, ಈ ಮುಂತಾದ ಸುವಾಸನಾ ವಸ್ತುಗಳಿಂದ ಘಮ ಘಮಿಸುತ್ತವೆ. ಹೇಳಲೇನು?

|| ೯೯ || ಮೇಲುಕಟ್ಟುಗಳಿಂದಲೂ ಚಿತ್ರವಾದ ಪಟ್ಟೆಗಳಿಂದಲೂ ಪಚ್ಚ ಕರ್ಪೂರಗಳಿಂದಲೂ ಎರಡು ಯೋಜನ ವಿಸ್ತಾರವಾದ ಸ್ವಯಂವರ ಮಂಟಪವು ಪ್ರಕಾಶಿಸುತ್ತಿದೆ.

|| ೧೦೦ || ಬಿಂಗಾರಿಗಳು, ಸೈನಿಕರು. ಮುಕುರಘಂಟೆಗಳು, ಕನ್ನಡಿ ಘಂಟೆಗಳು. ಭದ್ರಮಂಟಪವು, ಸ್ವಯಂವರ ಮಂಟಪವು. ಪ್ರಕಾಶಿಸಿತು.

|| ೧೦೧ || ವೈವಾಹ ಮಂಟಪವು, ವಿವಾಹ ಮಂಟಪವು. ಸಮತಳಿಸು, ಪ್ರಕಾಶಿಸು.

|| ೧೦೨ || ಪ್ರಕಾಶಿಸುತ್ತಿರುವ ಗೋಡೆಗಳಿಂದಲೂ ಚಿತ್ರಪ್ರತಿಮೆಗಳಲ್ಲಿನ ಮುತ್ತು ರತ್ನ ಮಣಿಗಳ ಕಾಂತಿಯಿಂದಲೂ ಒಪ್ಪಿರುವ ಸ್ವಯಂವರ ಮಂಟಪವು. ಭೂಮಿಗೆ ಇಳಿದು ಬಂದ ಕುಬೇರನ ಪುಷ್ಪಕವೋ ಸೂರ್ಯನ ಹೊಸರಥವೋ ಯೇನೋ ಎಂದಿಗೂ ನೋಡಿದ್ದಿಲ್ಲವೆಂದು ಆಶ್ಚರ್ಯಕರವಾಗಿತ್ತು.

|| ೧೦೩ || ತಂಬೆಲರು, ತಂಗಾಳಿ. ಮಕರಂದ, ಪುಷ್ಪಧೂಳಿ. ತುಷಾರ, ಬಿಂದು. ತುಹಿನ, ಮಂಜು. ಸಾಲಭಂಜಿಕೆ, ಪ್ರತಿಮೆ. ಮಂಗಳ ರಿಂಗಣ, ಮಂಗಳವಾದ್ಯ.

|| ೧೦೪ || ತವಲಾಯಿ, ಪಾತ್ರೆ. ಮೃಗನಾಭಿ, ಕಸ್ತೂರಿ. ಅಡಕು, ತುಂಬು.

|| ೧೦೫ || ಸೊವೆ, ಅಮೃತ. ಭಾವಿ. ಅಂದರೆ ಜೇನು ತುಂಬಿದ ಗಾರೆ ಭಾವಿ. ಕೈರಾಟಣದ, ಯುದ್ಧಕ್ಷೇತ್ರಕ್ಕ. ಪುಥ್ಥಳಿ, ಬೊಂಬೆ. ಈವುವು, ಕೊಡುವವು.

|| ೧೦೬ || ಸಮಾಯಿ, ಮೇಣ. ಸಾಕಾರವಾದುದು, ಸಹಾಯವಾಯಿತು. ವಿಶ್ವಕರ್ಮನೆಂಬ ದೇವತಾಚಿತ್ರಗಾರನ ತಂತ್ರಕ್ಕೆ ಸೇರಿದ ಸಭಾ ನಿರ್ಮಾಣ ಚಾತುರ್ಯಗಳೆಲ್ಲಾ ಈ ಮಂಟಪದಲ್ಲಿಯೇ ಯಿತ್ತೆಂಬುವದು.

|| ೧೦೭ || ವೀಣಾವಾದ್ಯ ಮೃದಂಗಘಾತ, ನಟ್ಟುವರ ಗಾಯವಣಿ ವೈಣಿಕ ರಸವದ್ದು ಯುವತಿಯರ ಭೂಷಣದ ಶಿಂಜಿತಧ್ವನಿ ಮುಂತಾದದ್ದು ಚಪ್ಪರವು ತುಂಬಿಯಿತ್ತು.

|| ೧೦೮ || ಇದು ಗೀತವೋ ಮಳೆಗಾಲವೋ ನವರಸಪ್ರವಾಹವೋ ನೂತ

ಪದ್ಯ ಸಂಖ್ಯೆ.

ನ ಕಾವ್ಯಸ್ಯೋರಸ್ಯಾಪ್ತೇಃ ಆಲಿಗಳಿಗೆ ಅಂದರೆ ಕಣ್ಣುಗಳಿಗೆ ಆಯುವೃದ್ಧಿಕರ ವಸ್ತು. ವಿಶೇಷವೋ ನಾಟ್ಯವೋ ಯೆಂಬಂತೆ ಜನರಿಗೆ ಆನಂದಕರವಾಗಿಯಿತ್ತು.

॥ ೧೧೯ ॥ ಹೊರವಳಯದಲ್ಲಿ ನಾನಾ ದಿಕ್ಕುಗಳಿಂದ ಬಂದಂಥ ನಾಟ್ಯ ಅಭಿನಯ ವೇಷ ಗಾಯನ ಝಟ್ಟಿಕಾಳಗ ಚಿತ್ರಕರ್ಮಗಳಲ್ಲಿ ಕೋವಿದರಾದ ವಿದ್ವಾಂಸರಾದವರು, ನೈತರು. ವರ್ತಕರು ಕುಳ್ಳರು ಮೂಗರು ಕಿವುಡರು ಕುರುಡರು ಮುಂತಾದವರ ಸಮೂಹಗಳು ಕೀವಿದರು, ಬಂದರು.

॥ ೧೨೦ ॥ ವಿವಾಹಕ್ಕೆ ಲೆಕ್ಕವಿಲ್ಲದೆ ಜನರು ಬಂದರು. ಅವರು ಯಾರಂದರೆ ಕವಿ, ಶಾಸ್ತ್ರಸಿದ್ಧಾಂತಿಗಳು. ವಕ್ತೃತ್ವವುಳ್ಳವರು. ಸೋಮಯಾಜಿಗಳು ವೈಷ್ಣವ ಶೈವ ಜೈನ ಕಾಪಾಲಿಕ ಬೌದ್ಧ ಪಾಷಂಡಾದಿ ಮತಸ್ಥರು. ಬ್ರಾಹ್ಮಣಾದಿ ವರ್ಣಾಶ್ರಮಧರ್ಮನಿಷ್ಠರು. ಶಿವಸಂಬಂಧಶೈವ, ವಿಷ್ಣುಸಂಬಂಧ ವೈಷ್ಣವ. ಈ ರೂಪಕ್ಕೆ ವಾಗ್ವಿ. ೧೧೪ನೇ ಪ್ರಶ್ನೆ, ೫ನೇ ವಿಧಿಯನ್ನು ನೋಡು.

॥ ೧೨೧ ॥ ಧಾರುಣಿಯ ದೇವವ್ರಾತ, ಬ್ರಾಹ್ಮಣರು. ನೆರದುದು, ತುಂಬಿತು.

॥ ೧೨೨ ॥ ವಿದ್ಯಾಧರಾದಿ ರುದ್ರಪವದ ಪರಿವಿಗೂ ದೇವಯೋನಿ ವಿಶೇಷಗಳು. ಭಾಸ್ಕರ, ಸೂರ್ಯ. ಭಾಸ್ಕರೋ ಹಸ್ಕರ ಪ್ರಧ್ನಪ್ರಭಾಕರ ವಿಭಾಕರಃ ಯೆಂದಮರವು. ಸುಧಾಕರ, ಚಂದ್ರ. ತಾರಕಾ, ನಕ್ಷತ್ರ. ನಕ್ಷತ್ರಮೃಕ್ಷಂಭಂ ತಾರಾತಾರಕಾ ಪ್ಯುಡುವಾಸ್ತ್ರಿಯಾಂ ಯೆಂದಮರವು. ಸುರ, ದೇವತೆಗಳು, ಅಮರಾ ನಿರ್ಜರಾದೇವಾ ಸ್ತ್ರಿದಶಾ ವಿಬುಧಾಸ್ಸುರಾಃ ಯೆಂದಮರವು. ದಿಕ್ಪಾಲ, ದಿಕ್ಪಾಲಕರ. ತತಿ, ಸಮೂಹವು. ನೆರದುದು.

॥ ೧೨೩ ॥ ರಂಭೆಯ ನರ್ತನ, ನಾಟ್ಯ. ತಾಂಡವಂ ನಟನಂ ನಾಟ್ಯಂ ಲಾಸ್ಯಂ ನೃತ್ಯಂಚ ನರ್ತನಂ ಯೆಂದಮರವು. ಜಂಭಾರಿ, ಇಂದ್ರ. ಓಲಗ, ಸಭೆ. ಅದರಯ ಮಹಾ ರಭಸವು, ಅಲ್ಲಿನ ಸಂರಂಭವು. ಇತರೇತರ ಪ್ರತಿಬಿಂಬವಾಯಿತು ಅಂದರೆ ಒಂದಕ್ಕೊಂದು ಉಪಮಾನವಾಯಿತೆಂದಾಶಯವು.

॥ ೧೨೪ ॥ ಜಾತರೂಪ, ಚಿನ್ನ. ಮುಖ್ಯವಾಗಿ ಪದ್ಮರಾಗ ರತ್ನವೇ ದ್ರೌಪದಿಯು. ಇದು ಚಿನ್ನದಲ್ಲಿ ಪೊದಗಿದರೆ ಅಂದರೆ ಪ್ರೋಷಿತಿಯಲ್ಲಿ ಶೇರಿದರೆ ಸಂತೋಷವೆಂದು ದ್ರುಪದರಾಯನು ಆಲೋಚಿಸುತ್ತಿದ್ದನು.

ಪದ್ಯ ಸಂಖೆ.

|| ೧೦೫ || ಲಗ್ನಪತ್ರಿಕೆಗಳು ಬರದು ಸುಧಾಮನೆಂಬ ಮಂತ್ರಿಯನ್ನೂ ಶತಾನಂದ ಋಷಿಯನ್ನೂ ಅಯೋಧ್ಯೆಗೆ ಜನಕರಾಯನು ಕಳುಹಿಸಿದನು. ಅವರು ಪ್ರಯಾಣವಾದರು.

|| ೧೦೬ || ಮಣಿಕಾರರು, ದ್ವಾರಪಾಲಕರು. ಇವರ ಬರುವಿಕೆಯನ್ನು ದಶರಥರಾಯನಿಗೆ ತಿಳಿಸಿದರು. ಸುಧಾಮನು ರಾಜಸಭೆಗೆಬಂದು ನಮಿಸಿ ಪತ್ರಿಕೆ ಕೊಟ್ಟನು.

|| ೧೦೭ || ದಶರಥನು ಆತನನ್ನು ಸತ್ಕರಿಸಿ ಸಿಂಹಾಸನದಲ್ಲಿ ಕುಳ್ಳಿರಿಸಿ ಹೇಗೆಂದನು.

|| ೧೦೮ || ರಾಮನೂ ಕುಶನೆಂಬ ತಮ್ಮನೂ ರಾಜಬಂಧುಗಳೂ ಸಹ ಕ್ಷೇಮವೇ ಯೆಂದು ವಿಚಾರಿಸಿ ವಿವಾಹ ಪತ್ರಿಕೆಯನ್ನು ಹೇಗೆ ವೋದಿದರು.

|| ೧೦೯ || ಸಹಸ್ರಗಭಸ್ತಿವಂಶಲಲಾಮ, ಸೂರ್ಯ ವಂಶ ವಿರಾಜಿತನಾದ. ಗಭಸ್ತಿ = ಕಿರಣ, ಗಭಸ್ತಿ ಘೃಣಿ ಘೃಷ್ಟಯಃ ಯೆಂದಮರವು. ಸಾಕೇತಪುರ, ಅಯೋಧ್ಯೆ.

|| ೧೧೦ || ನೃಪರವಿಸಾಯಿ, ರಾಜಸಮೂಹ. ಚಂದ್ರಧರ ಚಾಪಾಯುಧವ, ಶೈವಶರಾಸನವೆಂಬ ಧನುಸ್ಸು. ಅವನಿಜೆ, ಸೀತೆ. ಐತಹುದು; ಬರತಕ್ಕದ್ದು. ವಾಚಿಸಿದುದು, ವೋದಿತು. ಆ ಲಿಖಿತ, ಪತ್ರಿಕೆ.

|| ೧೧೧ || ಇದು ಯೆಲ್ಲಿನಸಮಾಚಾರ. ಆ ಹುಡುಗರು ಯಜ್ಞಸಂರಕ್ಷಣೆಗೆ ಹೋದವರು. ಈಗ ಈ ವರ್ತಮಾನವು ಬೇರಗಲ್ಲವೇ ಯೆಂದು ದಶರಥನು ಕೇಳಲಾಗಿ ಆಮೇಲೆ ನಡೆದ ವೃತ್ತಾಂತವನ್ನು ಶತಾನಂದನು ಹೇಳಿದನು, ಈತನು ಗೌತಮ ಪುತ್ರನು.

|| ೧೧೨ || ಮಖ, ಯಜ್ಞ. ಗೌತಮನ ಮಾನಿನಿ, ಅಹಲ್ಯಾದೇವಿ. ಧರಾನಂದನೆ, ಸೀತೆ. ಪಾಣಿಗ್ರಹಣ, ಮದಿವೆ. ಉಜ್ಜುಗ, ಉದ್ಯೋಗ.

|| ೧೧೩ || ಹರುಷಲತೆ, ಸಂತೋಷನೆಂಬ ಬಳ್ಳಿ. ಯೆರಡನೇ ದಿನ ಹೊರಟರು.

|| ೧೧೪ || ರತ್ನದ ತೊಡವೆಗಳು. ವಸನ, ವಸ್ತ್ರಗಳು. ಕನ್ಯಾ ಭೂಷಣಗಳು.

|| ೧೧೫ || ಗುಡ, ಬೆಲ್ಲ. ತಂಡುಳ, ಅಕ್ಕಿ. ಅಂದಳ, ಪಲ್ಲಕ್ಕಿಗಳು. ಪುರಂಧ್ರೀ, ರಾಜಸ್ತ್ರೀ.

ಪದ್ಯ ಸಂಖ್ಯೆ.

|| ೧೩೬ || ಸುಹೃಜ್ಜನ, ಸ್ನೇಹಿತರು. ಪೌರಜನ, ಪುರಜನರು. ಹೊರವಂಟ, ಹೊರಟ. ಹೊರಡು, ಧಾತು, ವಿಕೃತ ಕ್ರಿಯಾಪದ.

|| ೧೩೭ || ಕಂಚುಕಿ ನಿಕರ, ಜನಾನರು. ಪಂಟಿದ, ಮದಿಸಿದ. ವಾರಣ, ಆನೆ. ವರೂಥ, ರಥ. ದಿಬ್ಬಣ, ಮದಿವೇ ಪ್ರಯಾಣ.

|| ೧೩೮ || ಝುಷಕೇತನು, ಮನ್ಮಥನು. ಚರಣೋದ್ಭೂತರಜ, ಭೂಪರಾಗವು. ಝುಷ, ಮೀನು.

|| ೧೩೯ || ೧೫ ದಿನಕ್ಕೆ ಇವರು ಸೇರಿದರು, ಜನಕನು ವಿಭವದೊಡನೆ ಯೆದಿರುಗೊಂಡನು.

|| ೧೪೦ || ಸಚಿವ, ಮಂತ್ರಿ. ಅಂಬುಧಿ, ಸಮುದ್ರ. ಸಹಭವ, ತಮ್ಮನು.

|| ೧೪೧ || ತವಕ, ಮೋಹ. ಪುರಾಕೃತ ಪುಣ್ಯ ಫಲ, ಪೂರ್ವಜನ್ಮ ಸುಕೃತ ವಿಶೇಷ. ಪುರಾ, ಹಿಂದಿನ ಜನ್ಮ · ಕೃತ, ಅಂದರೆ ಮಾಡಿದ.

|| ೧೪೨ || ತನುಪುಳಕ, ದೇಹದ ರೋಮೋದ್ಗಮ. ನಿಮಿಕುಲ ಜನಪ, ಜನಕರಾಯನು. ಜನಪ, ಜನರನ್ನು ಪಾಲಿಸುವ.

|| ೧೪೩ || ತಪೋಧನ, ತಪಸ್ವಿ. ಕುಲಪರಿಶ್ರುತದ, ವಂಶಾವಳಿ ವಿಷಯಕವಾದ. ತಪೋಧನ, ತಪಸ್ಸೇ ಧನವಾಗಿ ವುಳ್ಳವನು.

|| ೧೪೪ || ಆನನ, ಮುಖ. ಆನನಂ ಲಪನಂ ಮುಖಂ ಯೆಂದಮರವು· ಈಕ್ಷಿಸು, ನೋಡು. ಇದು ತತ್ಸಮ ಕ್ರಿಯಾಪದ.

|| ೧೪೫ || ಸ್ಫುರಿತ ಧಾರ್ಮಿಕ ತನವ, ಪ್ರಕಾಶವಾದ ಧರ್ಮಗುಣವ. ಒರೆದನು, ಹೇಳಿದನು.

|| ೧೪೬ || ೧೪೭ || ಈ ಯೆರಡು ಪದ್ಯಗಳಲ್ಲಿ ವಂಶ ಪರಂಪರೆಯ ಹೆಸರುಗಳು.

|| ೧೪೮ || ಅಜನು, ಅಜಮಹಾರಾಯನು. ಆತ್ಮಜ, ಮಗ. ದಶಸ್ಯಂದನ, ದಶರಥ. ಈತನಿಗೆ ರಾಮನು ಮುಂತಾದ ನಾಲ್ವರು ಮಕ್ಕಳು.

|| ೧೪೯ || ಕುಲದಲ್ಲಿ ಅತ್ಯುತ್ತಮರು, ಪಂಡಿತರು ಧರ್ಮಿಷ್ಠರು ಯೆಂದು ಉಭಯ ಕುಲಗಳನ್ನೂ ಕೊಂಡಾಡುತ್ತಿದ್ದನು ಮುನಿ ಶ್ರೇಷ್ಠನು.

|| ೧೫೦ || ವಿದೇಹನು, ಜನಕನು. ಹಲಬರು, ಅನೇಕರು, ನೆಲದಲ್ಲಿ ಹುಟ್ಟಿದ ಸೀತೆಯನ್ನು ಸಲಹಿದನು ಯೆಂದು ಜನಕನಿಗೆ ಹೇಳಿದರೆ ಮನಸ್ಸು ಅಳಕುವದು, ಜನನದನೆಲೆ, ಉತ್ಪತ್ತಿಯ ಕಾರಣವನ್ನು ಹೇಳಿದರೆ ಅಲಸಿಕೆ ಯೆಂದು ಮುನಿ ಹೇಳಿದನು.

ಪದ್ಯ ಸಂಖ್ಯೆ.

॥ ೧೫೦ ॥ ಪೂರ್ವದಲ್ಲಿ ರಾಜಸೂಯಯಾಗಕ್ಕೆ ಭೂಶೋಧನೆ ಮಾಡುವಾಗ ನೇಗಿಲದ ಕೊನೆಗೆ ಸಿಕ್ಕಿದ ವನರುಹಾಕರ ಅಂದರೆ ಕಮಲ. ಅದರ ಮಧ್ಯದ ಕರ್ಣಿಕೆಯಲ್ಲಿ ಸೀತೆಯನ್ನು ಕಂಡನು.

॥ ೧೫೧ ॥ ಆಗ ಭಯಪಟ್ಟು ಯೋಚಿಸುತ್ತಿರುವಾಗ್ಯೆ ನಾಕಮುನಿ, ನಾರದನು ಬಂದನು.

॥ ೧೫೨ ॥ ಆತನು ಭಯಪಡಬೇಡ ಈಕೆಯನ್ನು ಸಲಹು ಯೆಂದು ಹೇಳಿಸಿ ಸೀತೆಯೆಂದು ಹೆಸರಿಟ್ಟು ಅಭಿಗತ ಕಾರ್ಯ ಸೂಚನೆಯನ್ನು ಹೇಳಿದನು.

॥ ೧೫೩ ॥ ಮನುಜರೂಪ, ಮಾನುಷಾವತಾರ. ವಸುಮತಿಯ ಭಾರ, ಭೂಭಾರ. ಸರ್ವಂ ಸಹಾ ವಸುಮತೀ ಯೆಂಬಮರವು. ಪಿನಾಕಪಾಣಿಯ ಧನುಸ್ಸು, ಶಿವ ಶರಾಸನ. ಅಶಂಭಾಸನ, ಆ ಧನುಸ್ಸು.

॥ ೧೫೪ ॥ ತೆರನಿಸು, ಕಾರ್ತಿಯಾಯಿತು. ಮನಕುರಿಸದಬಿ, ಮನಸ್ಸಿಗೆ ನಂಬಿಕೆ ಸಾಲದಲ್ಲಿ. ನಾರದನು ಬಂದು ನಿಲ್ಲಲು ಉಭಯ ರಾಯರೂ ಪದಕ್ಕೆ ನಮಿಸಿದರು.

॥ ೧೫೫ ॥ ಜನಪರ, ಅರಸರ. ಹರಸಿ, ಆಶೀರ್ವದಿಸಿ. ಅವರ ಸತ್ಕಾರವಂ ಸ್ವೀಕರಿಸಿ. ಸೀತಾರಾಮರು ಲಕ್ಷ್ಮೀ ಮಹಾವಿಷ್ಣುಗಳ ಅವತಾರವೆಂದು ತಿಳಿಸಿದನು.

॥ ೧೫೬ ॥ ಅಮರ ಮುನೀಂದ್ರನು, ನಾರದನು. ಸೌನಜನ, ಬ್ರಹ್ಮನ. ತಳೆದನು, ಹೊರಟನು.

॥ ೧೫೭ ॥ ಲಗ್ನವ, ಮುಹೂರ್ತವನ್ನು. ಪರುವಶವಿಸಿದರು, ಗೊತ್ತು ಮಾಡಿದರು.

॥ ೧೫೮ ॥ ಪೂರ್ವವೇದಿ, ಪೂರ್ವಾಭಿ ಮುಖವಾದ ಮದಿವೆ ಜಗುಲಿ. ಶೈಲಜೆ, ಪಾರ್ವತಿ.

॥ ೧೬೦ ॥ ಅಂಕುರಾರ್ಪಣವೆಂಬ ವಿವಾಹಾರಂಭ ಕರ್ಮ.

॥ ೧೬೧ ॥ ಚಂದನ ಕುಸುಮ, ಅಕ್ಷತೆ ಗೋರೋಚನ. ಲಾಜಿ, ಅರಳು. ದಧಿ, ಮೊಸರು. ದೂರ್ವೆ. ಗರಿಕೇಹುಲ್ಲು. ಮುಂತಾದ ಸಾಮಗ್ರಿಗಳಿಂದ ಭವನ ಮನೆ ತುಂಬಿಯಿತ್ತು.

॥ ೧೬೨ ॥ ನಾನಾ ದರುಶನಾಚಾರಿಯರು. ಷಡ್ [illegible], ಮುಂತಾದವರು.

॥ ೧೬೩ ॥ ವಂದಿಗಳು, ಸ್ತುತಿ ಪಾಠಕರು. ರಂ[illegible], ಪ್ರ[illegible].

ಪದ್ಯ ಸಂಖೆ.

|| ೧೬೪ || ಉದ್ವಾಹಗೇಹ, ವಿವಾಹ ಮಂಟಪ. ಇಭ, ಆನೆ. ಕಂಧರ, ಶಿರಸ್ಸು.

|| ೧೬೫ || ಬಿಳುಗೊಡೆ, ಶ್ವೇತ ಛತ್ರ. ಬಲವಿನಲಿ, ಸಂತೋಷದಲ್ಲಿ.

|| ೧೬೬ || ಸಂದಣಿಸು, ಕೂಡು. ಕರಿ, ಆನೆ. ರಾಜ ಬೀದಿಯಲ್ಲಿ ವೃಷ್ಟವ ವಾಯಿತೆಂಬುವದು.

|| ೧೬೭ || ನಭದ, ಆಕಾಶದ. ತಾರಾಗಣ, ನಕ್ಷತ್ರಗಳಗುಂಪು. ವಿವಾಹಕ್ಕೆ ಬಂತೋ ಯೆಂಬಂತೆ ಪುರದಲ್ಲಿ ದೀಪಗಳು ನೆರದವು. ಸ್ತ್ರೀಯರು ಮದಿವೆಗೋಸ್ಕರ ಅರಮನೆಗೆ ಹೋದರು. ನಭೋಂತರಿಕ್ಷಂಗಗನ ವೆಂದವುರವು.

|| ೧೬೮ || ಅಬಲೆಯರು, ಸ್ತ್ರೀಯರು. ಸ್ತ್ರೀಯೋಷಿದ ಬಲಾಯೋಷಾ ನಾರೀ ಸೀಮಂತಿನೀವಧೂಃ ಯೆಂದವುರವು. ನಿರ್ಜರರು, ದೇವತೆಗಳು. ದೇವದುಂದುಭಿ ವಾದ್ಯವಾಗಲು.

|| ೧೬೯ || ನವೀನ, ಹೊಸದಾದ. ಯೇನು ಕೃತಾರ್ಥನೋ, ಯೆಷ್ಟು ಪುಣ್ಯಾತ್ಮನೋ.

|| ೧೭೦ || ಆ ಮೇಲೆ ಮಧುಪರ್ಕಪುಣ್ಯಾಹವೇ ಮುಂತಾದ ಶಾಸ್ತ್ರೀಯ ಪ್ರಕಾರ ಮದಿವೆಯಾಯಿತು.

|| ೧೭೧ || ರಾಮ ಲಕ್ಷ್ಮಣ ಭರತ ಶತೃಘ್ನರಿಗೆ ಕ್ರಮವಾಗಿ ಸೀತೆ ಊರ್ಮಿಳೆ ಮಾಂಡವೀಶೃತಕೀರ್ತಿಗಳನ್ನು ಧಾರೆಯರದರು. ಆ ದಂಪತಿಗಳು ಹೋಮಾನಲನ, ಹೋಮಾಗ್ನಿಯನ್ನು ಪ್ರದಕ್ಷಿಣಮಾಡಿದರು. ಕೃಶಾನುಃಪಾವಕೊನಲ ಯೆಂದವುರವು.

|| ೧೭೨ || ಯಾಚಕವೃಂದ, ಯಾಚಕರ ಗುಂಪು. ದಣಿದುದು, ತೃಪ್ತಿ ಪಟ್ಟಿತು.

|| ೧೭೩ || ಇಕ್ಕೆ, ನೆಲ, ಶರಧಿ, ಜನ್ಮ, ಸ್ಥಾನ ಯೆಂಬವು ಸಮಾನಪದಗಳು. ಕ್ರಮಾಲಂಕಾರವಾಗಿ ಹೀಗೆ ಪೊಂದೋದಕ್ಕೆ, ಸ್ಥಾನವಾಚಕ. ಅಂದರೆ ಪರಿಣಯಾಸ್ಥಾನ, ವಿವಾಹ ಮಂಟಪ, ಪ್ರಕಾಶಿಸಿತು.

|| ೧೭೪ || ವಾಸರ, ದಿನ. ಸಿಂಧುರ, ಆನೆ. ಇರುಳು, ರಾತ್ರಿ.

|| ೧೭೫ || ಅವಭೃಥ, ದೀಕ್ಷಾಂತಸ್ನಾನ. ಹೇಮ, ಚಿನ್ನ.

|| ೧೭೬ || ಸನೆ, ಮಗ್ಗ. ಹಿಣಿಲು, ಜೊಂಕು. ಕಂಚುಕ, ಕುಬುಸ. ಮುಂಮೊನೆ, ಕಲಾಪಸ್ತು. ಚೆಲ್ಲಣ, ಪ್ರಿಯ. ಮನಸಿಜನ, ಮನ್ಮಥನ. ಶಂಬರಾರಿರ್ಮನಸಿಜ ಯೆಂದವುರವು,

ಪದ್ಯ ಸಂಖೆ.

|| ೧೭೭ || ಕುಂಕುಮವಾರಿಗಳ, ಓಕುಳಿಯೆಂಬ ಕೆನ್ನೀರು. ಸುರರೆಳೆವೆಂಡಿರು, ಅಪ್ಸರಸ್ತ್ರೀಯರು.

|| ೧೭೮ || ಅಂಬರವಳಯ, ಆಕಾಶಮಂಡಲ. ಗಂಧವಾಹನ, ವಾಯು. ಅಬುಜಸಖ. ಸೂರ್ಯ. ತ|| ಭೂವ್ಯಾಕಾಶಾದಿ ಪ್ರಪಂಚವೆಲ್ಲಾ ಸುವಾಸನಾ ಮಯವಾಯಿತು.

|| ೧೭೯ || ದಿವಾಕರಕುಲ ಲಲಾಮನು, ರಾಮನು. ತಾ|| ಆಳಿಯಂದಿರಿಗೆ ಸಮಸ್ತ ಪಾರಿತೋಷಕವನ್ನು ಕೊಟ್ಟನು.

|| ೧೮೦ || ಮೊಲೆ, ಸರ. ಉಡು, ನಕ್ಷತ್ರ. ಪರಿಮಳದೆಲರು, ಸುವಾಸನೆಯ ಗಾಳಿ. ಇದರಲ್ಲಿ ವಾರ್ಧಿಕ ಷಟ್ಪದೀ ವೃತ್ತ. ವಾಗ್ವಿ. ೧೮೧ನೇ ಪ್ರಶ್ನೆ ನೋಡು.

|| ೧೮೧ || ಪಡೆ, ಸೈನ್ಯ. ಸಂಘರ್ಷಣ, ಒರೆಯುವದು. ಪದಘಾತಿಗೆ, ತುಳಿಯುವದರಿಂದ ದಶದಿಕ್ಕುಗಳಲ್ಲಿಯೂ ಭೂಪರಾಗವು ವ್ಯಾಪಿಸಿಕೊಂಡಿತು.

|| ೧೮೨ || ತೆತ್ತಿಡಿದ, ಪ್ರಕಾಶಹೊಂದಿದ. ಸತ್ತಿಗೆಯ, ಛತ್ರಿಯ. ಮೊಗದಕ್ಕೈಯಿಂ, ಸೊಂಡ್ಲದಿಂದ. ತಾ|| ಆನೆಗಳು ತಮ್ಮ ತಲೇಮೇಲೆ ಮುರಚಿಕೊಂಡದ್ದರಿಂದುಂಟಾದ ಸೀನ ಮಡವುಗಳಲ್ಲಿ ಅರಸರ ಆಭರಣಾದಿಗಳು ಛತ್ರ ಚಾಮರಾದಿಗಳ ಪಂಜ್ತಿಗಳು ಪ್ರಕಾಶಿಸಿದವು.

|| ೧೮೩ || ಜಡಿಪ್ರತ್ತಿರಲ್ಕೆ, ಝುಣಿಪಿಸಲು. ಎಲರಂ, ಗಾಳಿಯನ್ನು. ವಾಗ್ವಿ ೧೮೨ನೇ ಪ್ರ. ನೋಡು. ತಾ|| ಸೇನೆ ಬರುವಾಗ ಛತ್ರಿಗಳ ಗುಂಪಿನಿಂದ ಸೂರ್ಯಕಿರಣ ಪ್ರಚಾರ ತಡೆಯಾದ ಕಾರಣ ಕತ್ತಲೆ ವುಂಟಾಯಿತು. ಭಟರು ಸಾಣೆಹಿಡಿದ ಕತ್ತಿಗಳನ್ನು ಜಳಿಪಿಸಿದ್ದರಿಂದ ಕತ್ತಲೆಹೋಗಿ ಬೆಳಕಾಯಿತು. ಮತ್ತು ಮದ್ದಾನೆಗಳ ಸಮೂಹವು ಕಿಕ್ಕಿರಿಸಿಯಿದ್ದದ್ದರಿಂದ ವಾಯು ಸಂಚಾರವು ತಡೆಮಾಡಲ್ಪಟ್ಟು ಕಾವೆವುಂಟಾಯಿತು. ಆಗ ಚಾಮರಂಗಳನ್ನು ಬೀಸುವದರಿಂದ ಕಾವೆ ನಿವಾರಿಸಲ್ಪಟ್ಟು ಉತ್ತಮ ಹಿಮೋತ್ತರಂ, ತಂಗಾಳಿ ವುಂಟಾಯಿತು. ತತಿ, ಸಮೂಹ.

|| ೧೮೪ || ಸೈನ್ಯಕ್ಕೆ ಭೂಮಂಡಲವೂ ವಾದ್ಯಧ್ವನಿಗೆ ದಿಕ್ ಮಂಡಲವೂ ಧ್ವಜ ಸೋಪಾನ ಮಂಟಪಗಳಿಗೆ ಸಂಖ್ಯೆಯೂ ಶೌರ್ಯಕ್ಕೆ ರಣಭೂಮಿಯೂ ಸಾಲದು ಯೆಂಬುವ ಹಾಗೆ ಆ ಸೇನೆ ಬಂ

ಪದ್ಯ ಸಂಖೆ

ದು ಪದ್ಮವ್ಯೂಹವಾಗಿ ನಿಂದು ಅರ್ಜುನನ ಕುದುರೆಯನ್ನು ಕಟ್ಟಿ ಆರ್ಭಟಿಸಿದುದು.

॥ ೧೮೫ ॥ ನರ, ಅರ್ಜುನ. ಕಾಳಗ, ಯುದ್ಧ. ಅರಿವೀರರು, ಶತ್ರು ವೀರರು. ವಿಘ್ನ, ವಿಘಾತ.

॥ ೧೮೬ ॥ ಹಯ, ಕುದುರೆ. ಪನ್ನಗಾರಿಧ್ವಜ, ಕೃಷ್ಣ. ಪನ್ನಗ, ಹಾವು. ಇದಕ್ಕೆ ಅರಿ, ಶತ್ರು. ಅಂದರೆ ಗರುಡನು. ಏವಂಚ, ಗರುಡಧ್ವಜನೆಂಬುವದು. ನಾಗಾಂತಕೋ ವಿಷ್ಣುರಥ ಯೆಂದಮರವು.

॥ ೧೮೭ ॥ ಸರ್ಬ =ಸರ್ವ. ವಾಗ್ವಿ. ೧೧೬ನೇ ಪ್ರ. ೪ನೇ ಸೂ. ನೋಡು. ದಿಟ, ನಿಜ. ಮುರಜ, ಮದ್ದಳೆ.

॥ ೧೮೮ ॥ ಬಿಳೆಯುಗಿದ ಫಣಿಕುಲ, ಹೊರೆಬಿಟ್ಟ ಸರ್ಪ ಸಮೂಹದಹಾಗೆ. ಅಂಬುಧಿ ತೆರೆ, ಸಮುದ್ರದ ಅಲೆ. ಯುಗದಂತ್ಯದಭ್ರ, ಪ್ರಳಯಕಾಲ ಮೇಘ. ಕಿರೀಟಿಗೆ, ಅರ್ಜುನಗೆ. ಸೂನು, ಮಗ. ಸಂಯುಗ, ಯುದ್ಧ. ಕರಯುಗಳಂ, ಯೆರಡು ಕೈಗಳು. ಆತ್ಮಜಸ್ತನಯ ಸ್ಸೂನುಃ। ಯುಗ್ಮಂತು ಯುಗಳಂ ಯುಗಂ। ಯೆಂದೆರಡಕ್ಕೂ ಅಮರವು.

॥ ೧೮೯ ॥ ಹೊಳಹು, ಕಾಂತಿ. ಕಣೆಗಳಂ. ಬಾಣಗಳನ್ನು. ಧುರ, ಯುದ್ಧ. ಮುಳಿದು, ಕೋಪಗೊಂಡು.

॥ ೧೯೦ ॥ ಕ್ಷೋಣಿ, ಭೂಮಿ. ಕ್ಷೋಣೀಜ್ಯಾ ಕಾಶ್ಯಪೀಕ್ಷಿತಿಃ ಯೆಂದಮರವು. ಸುಧನ್ವ, ಅವನ ಹೆಸರು. ಸುಧನ್ವ ಅಂದರೆ ಒಳ್ಳೇಧನುಸ್ಸುಳ್ಳವನು ನಾನಿರಲಾಗಿ ನಿನಗೆ ಹೆಸರು ಯಾಕೆ ಯೆಂದರ್ಥವು. ಮೇದಿನಿ, ಭೂಮಿ. ರಿಪು ಪಂಚಬಾಣ ವೃಷಕೇತು, ಶತ್ರುಜನರೆಂಬ ಮನ್ಮಥ ದಾಹಿಯಾದ ವೃಷಕೇತು ಅಂದರೆ ಶಿವನು. ಮತ್ತೊಂದರ್ಥದಲ್ಲಿ ಅವನ ಹೆಸರು. ತನುವ, ಶರೀರವನ್ನು.

॥ ೧೯೧ ॥ ಮೂಡಿಗೆ, ತೂಣೀರ. ಬಾಣಚೀಲ. ಬೊಬ್ಬಿರಿದನು, ಆರ್ಭಟಿಸಿದನು.

॥ ೧೯೨ ॥ ಹೀಗಿರಲಾಗಿ ಸುಧನ್ವನ ಸಾರಥಿ ಮತ್ತೊಂದು ರಥವನ್ನು ತರಲು ಅದನ್ನು. ಅಡರ್ದು, ಏರಿ. ಯುದ್ಧ ಮಾಡಿದನು ಇತ್ಯಾದಿ.

ಪದ್ಯ ಸಂಖ್ಯೆ.

|| ೧೯೩ || ಆಂ. ನಾನು, ನಿನ್ನನ್ನು ಬಿಟ್ಟರೆ ಬಿಲ್ಲಾಳೇ, ಶೂರನೇ. ಧರ್ಮರಾಜನವರಂ ಕಾಣ್ಬನಲ್ಲ. ಅಂದರೆ ಲಕ್ಷ್ಯಮಾಡುವವನಲ್ಲ. ಧರ್ಮರಾಜನಪರಂ. ಯುಧಿಷ್ಠಿರ ಧರ್ಮರಾಯನ ದೂತರನ್ನು ಕಾಣಿಸುವೆನು. ಹಂಸಧ್ವಜನ ಸುತನು. ಕೋಲ್ಗಳಂ, ಬಾಣಗಳನ್ನು ಹಾಸಿದನು.

|| ೧೯೪ || ಫಡಫಡ, ಎಲ ಎಲಾ. ಕೆಲಕ್ಕೊಲಗು, ಹೋಗು ಹೋಗು ಯೆಂದು ಧಿಕ್ಕರಿಸುತ್ತಾ ಬಾಣ ಪ್ರಯೋಗ ಮಾಡಲು ಸುಧನ್ವನು ಅವನ್ನೆಲ್ಲಾ ಕತ್ತರಿಸಿ ೨೦ ಬಾಣಗಳಿಂದ ಹೊಡದನು.

|| ೧೯೫ || ಹಾಣಿ, ಜಗಳ. ಬಾಣಗಳು ಅತಿ ಭಟರನ್ನು ಮುರಿದು ರಕ್ತವು ಆಕಾಶಕ್ಕೆ ಯಗರುತ್ತಿರಲು ಜನರ ದೃಷ್ಟಿಗಳಿಗೆ ಕೋಣಾಭ್ರದಂತೆ, ರಕ್ತ ಮೇಘದ ಹಾಗೆ ಕಾಣಿಸಿದುದು.

|| ೧೯೬ || ದಂತಿಗಳ ಗುಂಪನ್ನು ಸಂಹರಿಸಿದನು. ಮುನಿದು, ಕೋಪಗೊಂಡು. ಕಾಲಾಳ್ಗಳನ್ನು ಕೊಂದನು.

|| ೧೯೭ || ತಲೆ, ಕಾಲು, ಸೊಂಡ್ಲ ಮುಂತಾದವು ಛೇದಿಸಲ್ಪಟ್ಟ ಅವಯವ ಛಿದ್ರಗಳಿಂದ ರಣಾಗ್ರವು ತುಂಬಿತ್ತು.

|| ೧೯೮ || ಕಾಕ, ಬಕಪಕ್ಷಿ, ಹದ್ದು. ಗೋಮಾಯು, ನರಿ. ಸಂತತಿ, ಸಮೂಹ, ಇವುಗಳಿಂದಲೂ ಡಾಕಿನಿ ಪಿಶಾಚ ಬೇತಾಳಾದಿ ಭೂತಗಣದಿಂದಲೂ ಆಕ್ರಮಿಸಲ್ಪಟ್ಟಿರುವ ಸೈನಿಕರ ಕಪಾಲಂಗಳು ಅಂದರೆ ತಲೆ ಬುರುಡೆಗಳು ಬಿದ್ದಿರಲು ಯಮನು ಅಖಿಲ ಪ್ರಾಣಿಗಳನ್ನೂ ಉಂಡು ಅಜೀರ್ಣವಾಗಿ ವಾಂತಿ ಮಾಡಿದನೋ ಯೆಂಬಂತೆ ಇತ್ತು.

|| ೧೯೯ || ಬಿಂಪ್ಮು, ಪ್ರೊಂದುಸಾರಿ. ನಿಂದು ಯುದ್ಧ ಮಾಡಿದರು ಇತ್ಯಾದಿ. ಪಡಿಬಲ, ಶತ್ರುಬಲ.

|| ೨೦೦ || ಬವರ, ಯುದ್ಧ. ಈರ್ವರ್ಗೆ, ಯಿಬ್ಬರಿಗೆ. ಸುಧನ್ವನು ಬಹಳ ಕೋಪದಿಂದ ಸಾತ್ಯಕಿಯು ಕವಚ ಶಿರಸ್ತ್ರಾಣಾದಿಗಳಂ ಕತ್ತರಿಸಿದನು, ಸಾರಥಿ ರಥಗಳನ್ನೆಲ್ಲಾ ಹೊಡೆದು ಯುದ್ಧಕ್ಕೆ ನಿಂತನು.

|| ಸೂಚನೆ || ಸೌಮಿತ್ರಿ, ಲಕ್ಷ್ಮಣನಿಂದ. ಉರೆ ಭಂಗಪಟ್ಟ, ಅವಮಾನಪಟ್ಟ. ರಜನಿ ಚರಾಂಗನೆಯು, ಶೂರ್ಪನಖಿಯು. ಸೂರಿನಿಂದ. ಖರನು ಐತಂದನು, ಬಂದನು. ಆಹವಕ್ಕೆ, ಯುದ್ಧಕ್ಕೆ. ರಜನಿ, ರಾತ್ರಿ.

ಪದ್ಯ ಸಂಖೆ.

|| ೨೦೧ || ಕಮಲಾಯತಾಂಬಕನನುಜನ, ಲಕ್ಷ್ಮಣನ. ಅಬಲೆ, ಶೂರ್ಪ ನಖಿ. ಅಶ್ರುಜಲ, ಕಣ್ಣೀರು. ಹಾಯಿದಳು, ಹೊರಟಳು. ಅಭಿ ಮಾನಚ್ಯುತಿ, ಮಾನಭಂಗ, ರೋದನನಿನಾದ, ಅಳುವಿಕೆ.

|| ೨೦೨ || ದಂಡಕಮಂಡಲ, ಯತಿಗಳು ಧರಿಸುವ ಕಟ್ಟಿಗೆ ಪಾತ್ರೆಗಳು. ಸಾರಿದಳು, ಹೊಂದಿದಳು.

|| ೨೦೩ || ನಾಸಿಕ, ಮೂಗು. ಜಗದಸುವಿನಳುವಿನ, ಪ್ರಳಯಕಾಲದ, ಖ ತಿಗೊಂಡ, ಕೋಪಗೊಂಡ.

|| ೨೦೪ || ಈ ನಾಸಿಕಚ್ಯುತಿ ಯಾರಿಂದಾಯ್ತು ಹೇಳೆಂದು ಖರಾಸುರನು ಕೇಳಿದನು.

|| ೨೦೫ || ಕಾಲನು, ಯಮನು. ಕಾಲೋದಂಡಧರಶ್ಶ್ರಾದ್ಧ ದೇವೋವೈವ ಸ್ವತೋಂತಕ ಯೆಂದಮರವು. ಶೂಲಿ, ಶಿವನು. ಶಂಭುರೀಶಃ ಪಶುಪತಿಶ್ಶಿವಶ್ಶೂಲೀ ಮಹೇಶ್ವರಃ ಯೆಂದಮರವು. ಈ ಮುಂ ತಾದ ಯಾರೇ ಆಗಲಿ ಬಂದಾಗ್ಯೂ, ಯುದ್ಧದಲ್ಲಿ ನನ್ನ ಶೌ ರ್ಯವನ್ನು ತೋರಿಸುವೆನು..

|| ೨೦೬ || ಕೋಪಾನಲನ ದಳ್ಳುರಿಗೆ, ಕೋಪವೆಂಬ ಬೆಂಕಿಯ ಉರಿಗೆ. ಅಸುರ, ರಾಕ್ಷಸ.

|| ೨೦೭ || ವರವರೂಥ, ಶ್ರೇಷ್ಠವಾದ ರಥ. ದೂಷಣ, ರಾಕ್ಷಸನು. ದುರುಳ, ದುರ್ಮದ, ದುಷ್ಟ, ರಣದುರ್ಧರ ಯೆಂಬ ಪದಗ ಳೆಲ್ಲಾ ಖರತ್ರಿಶಿರಾದಿ ರಕ್ಕಸರೆಂಬದಕ್ಕೆ ವಿಶೇಷಣಗಳು.

|| ೨೦೮ || ಧೂಳಿ ಕೇರಿದ ಸುಗ್ಗಿಘಾಳಿ ಬಂತು. ಕುಂಡಾಲ ಕುಲ ಕಂಬನಿ, ಆನೆಗಳ ಕಣ್ಣೀರು ಸೂಸಿದವು, ಸೋರಿದವು. ತೇಜಿಗಳು, ಕು ದುರೆಗಳು. ಧೂಮಕೇತು, ನಕ್ಷತ್ರ ವಿಶೇಷ. ರಥಕೇತು ದಂ ಡದ ಮೇಲೆ, ರಥಧ್ವಜಗಳ ದಂಡದ ಮೇಲೆ, ಹದ್ದು ಬಂದ ವು. ಇವೆಲ್ಲಾ ಅಪಜಯ ಸೂಚಕಗಳು.

|| ೨೦೯ || ಇಳೆ ಅದರಿತು. ರುಧಿರಾಂಬುಧಾರೆ, ರಕ್ತಧಾರೆ, ರಕ್ತವರ್ಷ. ಇ ನಮಂಡಲ, ಸೂರ್ಯ ಮಂಡಲ. ಈ ಮಹೋತ್ಪಾತವನ್ನು ಬ ಗೆಯದೆ ಯುದ್ಧಕ್ಕೆ ಸಿದ್ಧವಾದರು.

|| ೨೧೦ || ಅಭ್ರವನು, ಆಕಾಶವನ್ನು. ಸೇನಾವಿಸರ ಪದಹತಧೂಳಿ ಧೂಳಿ ಪ್ರಸರವು, ಸೇನೆಯ ಪಾದಘಾತದಿಂದೆದ್ದ ಧೂಳಿಯ ಪ್ರಚಾರ ವು. ಬಿಸಜಗರ್ಭಾಂಡವನು, ಬ್ರಹ್ಮಾಂಡವನ್ನು. ಬಿಸಜ, ಕ ಮಲ. ಅಂಡ, ಮೊಟ್ಟೆ. ಅಂದರೆ ಬ್ರಹ್ಮಾಂಡ.

ಪದ್ಯ ಸ ಖ್ಯೆ.

|| ೭೧೧ || ಭರತಾವರಜ. ಲಕ್ಷ್ಮಣ. ಸೌಮಿತ್ರಿ, ಲಕ್ಷ್ಮಣ, ಸಕಲ ಗುಣಾಗಮಜ್ಞನ, ಸಕಲ ಶಾಸ್ತ್ರಗಳ ಸಾರವನ್ನು ತಿಳಿದವನ. ಗಿರಿ ತುದಿಗಾಗಿ, ಪರ್ವತದ ತುದಿಗೆ.

|| ೭೧೨ || ಇರಿದ, ಕೊಯಿದ. ತೆತ್ತಿಗರು, ಸ್ವಂತಜನರು. ಸಂಗರ, ಯುದ್ಧ. ಸರಳ ಸೂತ್ರದಲಿ, ಬಾಣಗಳ ಧಾರದಲ್ಲಿ. ಅಹಿತ ವೀರರ ಶಿರವ, ಶತ್ರುಭಟರ ತಲೆಗಳನ್ನು. ಪೋಣಿಸಿ, ಕಾಲಕಂಠನ. ಶಿವನ ಕೊರಳಿಗೆ ಕಟ್ಟುತ್ತೇನೆಂದು ಧನುಷ್ಟಂಕಾರ ಮಾಡಿದನು.

|| ೭೧೩ || ಶಿಖರಿ, ಪರ್ವತಾಗ್ರ. ಭಂಜಿಪ, ಸಂಹರಿಸುವ. ಕಾರ್ಮುಕವು, ಧನುಸ್ಸು. ಸರಾಗದಲಿ, ಸಾನುರಾಗದಲ್ಲಿ. ಸಮರಕ್ಕೆ, ಯುದ್ಧಕ್ಕೆ. ಅನುವಾದ, ಸಿದ್ಧವಾದ. ಅಸ್ತ್ರಿಯಾಂ ಸಮರಾನೀಕ ರಣಾಃ ಕಲಹವಿಗ್ರಹೌ ಯೆಂದಮರವು.

|| ಸೂಚನೆ || ಸಂಗ್ರಾಮದಲಿ, ಯುದ್ಧದಲ್ಲಿ. ಖರಾದಿರಾಕ್ಷಸರನ್ನು ಕೀನಾಶ ಅಂದರೆ ಯಮನಗರಕ್ಕೆ.

|| ೭೧೪ || ಕ್ರವ್ಯಾದ, ರಾಕ್ಷಸ. ರಾಕ್ಷಸಃ ಕೌಣಪಃ ಕ್ರವ್ಯಾತ್ಕ್ರವ್ಯಾದೋಸ್ರಪ ಆಶರಃ ಯೆಂದಮರವು. ಪಡ್ಡೈಸಿಕೊಂಡಿತು, ಮುತ್ತಿಗೆಹಾಕಿತು. ಖಳ, ನೀಚ.

|| ೭೧೫ || ರಣವೆಂಬ ಸಿರಿಗೆ ವಿಟನ. ಅಭ್ಯುದಯಶಾಲಿ. ನಿಶಾಚರಸ್ತ್ರೀಯ ನಾಸಿಕಾ ಛೇದದನಿಲಯು, ನಿಶಾಚರಮೇಘ ವೆಂಬಮಾರುತಕ್ಕೆ ಮನೆ. ಇಂಥ ರಾಮನನ್ನು ತೋರಿಸಿದಳೆಂಬುವದು.

|| ೭೧೬ || ರಿಪುಸೇನೆ, ಶತೃ ಸೇನೆ. ಸೂರ್ಯಕುಲೋತ್ತಮನ, ರಾಮನ. ಪಳನಿಳಯವನು, ಪರ್ಣಶಾಲೆಯನ್ನು. ಮುತ್ತಿಕೊಂಡಿತು. ಘೋರಘೋಷ, ಭಯಂಕರಶಬ್ದ.

|| ೭೧೭ || ಸರೋಜಾನನೆ, ಸೀತೆ. ಕಳಂಬಕ, ಬಾಣ. ನಿಶಾಚರಪಡೆ, ರಾಕ್ಷಸ ಸೈನ್ಯ. ಭಾಳಲಿಪಿ, ಹಣೆಬರ. ಅಂದರೆ ಅದೃಷ್ಟ. ನೈಶಾಟ, ರಾಕ್ಷಸ,

|| ೭೧೮ || ಪಳುವಟ್ಟ, ಬಿಳಿನಡಿಕಟ್ಟು. ಹೊನ್ನಾಯುಗದ, ಚಿನ್ನದ ಪಿಡಿಯುಳ್ಳ. ಚಾಪ, ಧನುಸ್ಸು.

|| ೭೧೯ || ಹಿರಣ್ಯಕ, ಹಿರಣ್ಯಕಶಿಪುಯೆಂಬ ರಾಕ್ಷಸ. ನರಕೇಸರಿ, ನೃಸಿಂಹಸ್ವಾಮಿಯಂದದಲಿ. ಮಸಗಿ, ಕೋಪಿಷ್ಠನಾಗಿ.

ಪದ್ಯ. ಸಂಖ್ಯೆ.

|| ೨೨೦ || ಸಿಂಜಿನಿಯು, ಹೆದೆಯನ್ನು. ವನಧಿ, ಸಮುದ್ರ. ಸುರಾಚಲ, ಮೇರುಪರ್ವತ. ಬೊಬ್ಬಿರಿದನು.

|| ೨೨೧ || ಕುರುಹ, ಗುರ್ತು. ಅಮರಗಿರಿ, ಮೇರುಪರ್ವತ.

|| ೨೨೨ || ರಾಮನೆಂಬ ಉದ್ದಾಮ ಪರ್ವತ ಶಿಖರದಲ್ಲಿ ರಾಕ್ಷಸರೆಂಬ ಮೇಘಗಳ ಗುಂಪಿನಿಂದ ಬಾಣಗಳೆಂಬ ವೃಷ್ಟಿಬಿತ್ತು. ಅಂದರೆ ಯುದ್ಧಕ್ಕೆ ಬಾಣ ಪ್ರಯೋಗ ಮಾಡಿದರೆಂಬುವದು.

|| ೨೨೩ || ರಾಮಶರಾಸನ, ಧನುಸ್ಸು. ಅರುಣಾಂಬು, ರಕ್ತ. ದಾಸೊಳಪುಷ್ಪ. ಧಾತು, ಬಣ್ಣ.

|| ೨೨೪ || ಶರ್ಬುರ, ರಾಕ್ಷಸ. ಶೋಣಿತಾಂಬುಧಿ, ರಕ್ತಸಮುದ್ರ. ಕುಂಭಿನಿ, ಭೂಮಿ.

|| ೨೨೬ || ಘೋಟಕ, ಕುದುರೆ. ನಭ, ಅಂತರಿಕ್ಷ. ನಭೋಂತರಿಕ್ಷಂ ಗಗನ ವೆಂದಮರವು.

|| ೨೨೭ || ಎಲೆ ಭಟರುಗಳಿರಾ. ಕವಿರಿ ತಿವಿಯಿರಿ ಕೊಲ್ಲಿರಿಯೆಂದು ಕೂಗುತ್ತಾ ಹರಿದಶ್ವಕುಲ ಸರಸಿರುಹ ಬಾಂಧವನ, ರಾಮನನ್ನು. ದೂಷಣಾಸುರನು. ಹಳಚಿದನು, ಹೊಡೆದನು. ಹರಿದಶ್ವಕುಲ, ಸೂರ್ಯಕುಲ. ಹರಿದಶ್ವಸ್ಸಹಸ್ರಾರ್ಚಿಯೆಂದು ಅಮರವು. ಅಂದರೆ ಸೂರ್ಯಕುಲವೆಂಬ ಸರಸಿರುಹಕ್ಕೆ, ಕಮಲಕ್ಕೆ ಬಾಂಧವನು, ಪ್ರಿಯನು ಸೂರ್ಯನು. ಸಾರಸಂ ಸರಸೀರುಹಂ. ಯೆಂದಮರವು. ಸೂರ್ಯಕುಲವೆಂಬ ಕಮಲಕ್ಕೆ ಸೂರ್ಯನು.

|| ೨೨೮ || ಖಡುಗ, ಕತ್ತಿ. ಖಡ್ಗ, ಕತ್ತಿ. ಖಲಕುಲ ಕಾಲಭೈರವನು, ರಾಮನು.

|| ೨೨೯ || ರುಂಡ, ತಲೆಬುರುಡೆ. ಮುಂಡ, ತಲೆಯಿಲ್ಲದ ದೇಹ. ಇಭ, ಆನೆ. ಜನ, ಯಮನು. ವಾಗ್ವಿ. ೧೧೬ನೇ ಪ್ರ. ೨ನೇ. ಸೂ. ನೋ.

|| ೨೩೦ || ಮನುಷ್ಯನಾದ ರಾಮನೇ ಕೇಳು ನಾನು ಕಲಿದೂಷಣನಲ್ಲವೇ? ನೀನು ವ್ಯರ್ಥವಾಗಿ ರಾಕ್ಷಸರನ್ನು ಕೆಣಕಿ ಕೆಟ್ಟುಹೋದೆಯೆಂದು ಕಕುಸ್ಥಜನ, ರಾಮನಿಗೆ ಬಾಣ ಹಾಕಿದನು.

|| ೨೩೧ || ಮಾರ್ಗಣಗಣವ, ಬಾಣ ಸಮೂಹವನ್ನು. ಕೊಚ್ಚಿದನು, ಕತ್ತರಿಸಿದನು. ದೋರ್ಬಲತಟಾಕ, ಭುಜ ಬಲವೆಂಬ ಕೆರೆಯನ್ನು. ಮಸ್ತಕ, ಶಿರಸ್ಸು. ದೂಟಿಸು, ಯೆಗಿರಿಸು.

|| ೨೩೨ || ಮಲ್ಲ, ಸಮರ್ಥ. ನರಲೋಕನಾಥ, ಅರಸ. ಶರಜಾಲ, ಬಾಣ ಸಮೂಹ.

ಪದ್ಯ ಸಂಖೆ.

॥ ೨೩೪ ॥ ಅಸುರಹರ, ರಾಮನು. ಅಸಮ ನಯನ, ಶಿವನು. ವಿಶಿಖ, ಬಾಣ.

॥ ೨೩೫ ॥ ಹರ, ಶಿವನು. ಪರಸ್ಮರ ಹರೋಭರ್ಗ ಸ್ತ್ರ್ಯಂಬಕ ಸ್ತ್ರಿಪುರಾಂತಕಃ ಯೆಂದಮರವು. ಚತುರಾನನ, ಬ್ರಹ್ಮ. ಸ್ವಯಂಭೂಶ್ಚತುರಾನನಃ ಯೆಂದಮರವು. ಆಖಂಡಲ, ಇಂದ್ರನು. ಆಖಂಡಲಸ್ಸಹಸ್ರಾಕ್ಷಃ ಯೆಂದಮರವು. ಅಜ, ಬ್ರಹ್ಮನು. ತ್ರ್ಯಂಬಕ, ಶಿವನು. ತ್ರ್ಯಂಬಕ ಸ್ತ್ರಿಪುರಾಂತಕಃ ಯೆಂದಮರವು. ॥ತಾ॥ ಈ ತ್ರಿಶಿರಾಸುರನ ತಲೆಗಳು ಆಕಾಶಕ್ಕೆ ನೆಗದು ಇಂದ್ರಾದಿ ದೇವತೆಗಳ ಮೇಲೆ ಬೀಳುವದಕ್ಕೆ ಹೋಗಲು ಆ ದೇವತೆಗಳು ಆಕಾಶವಂ ಬಿಟ್ಟು ತಮ್ಮ ಲೋಕಗಳಿಗೆ ವೋಡಿ ಹೋದರೆಂಬುವದು.

॥ ೨೩೬ ॥ ತನುಜ, ಮಗನೇ. ಸ್ಯಂದನ, ರಥ. ನಿನದ, ಶಬ್ದ. ಕನಲಿ, ಸಿಟ್ಟುಗೊಂಡು.

॥ ೨೪೧ ॥ ಹಯ, ಕುದುರೆ. ಕರಿ, ಆನೆ. ಕ್ರಮವಾಗಿ ಇವುಗಳ ಧ್ವನಿ. ರಾಮಸುವಾಸಿನಿ, ಸೀತೆ. ರಘುಜನನುಜ, ಲಕ್ಷ್ಮಣ.

॥ ೨೪೩ ॥ ಪೂರ್ಣೇಂದುಮುಖಿ, ಸೀತೆ. ಪೂರ್ಣ ಇಂದು ಮುಖಿ. ಇಂದುಃ ಕುಮುದಬಾಂಧವಃ ಯೆಂದಮರ. ಮಾಗಧೀ ಸೂನು, ಲಕ್ಷ್ಮಣ. ಷ, ತತ್ಪುರುಷ ಸಮಾಸ.

॥ ೨೪೪ ॥ ರವಿ, ಸೂರ್ಯ. ಮಾರುತರು, ವಾಯು ದೇವತೆಗಳು. ಸಲಿಲ, ನೀರು. ಉರ್ವಾನಲ, ಬಡಬಾಗ್ನಿ.

॥ ೨೪೫ ॥ ಕುಧರ, ಪರ್ವತ. ಕುಜ, ಮರ. ಕೋಟಿ ವೃಷಭಧ್ವಜನ ಪರಾಕ್ರಮ, ಕೋಟಿ ರುದ್ರರ ಸಾಮರ್ಥ್ಯ ವುಳ್ಳ ರಾಮನು. ಭೂಮಿಜೆ, ಸೀತೆ. ರಣ, ಯುದ್ಧ.

॥ ೨೪೭ ॥ ಲೋಚನವ, ನೇತ್ರಗಳನ್ನು. ಹರಿಯಬಿಡಿ, ಬಿಟ್ಟು ನೋಡಿ. ರಾಮಬಾಣ. . . . ವೀಧಿಯಲಿ, ರಾಮನ ಬಾಣಗಳ ಪ್ರಕಾಶಮಾನವಾದ ಪರಾಕ್ರಮವೆಂಬ ಅಗ್ನಿಯು. ಶತ್ರುಗಳೆಂಬ ವಿಪಿನ, ಅರಣ್ಯದ ವೀಧಿಯಲ್ಲಿ, ಮಾರ್ಗದಲ್ಲಿ. ಅಟವ್ಯರಣ್ಯಂ ವಿಪಿನ ವೆಂದಮರವು. ತಾರಾಪ್ವ, ಆಕಾಶ.

॥ ೨೪೯ ॥ ಆಪರಂತಪ, ಆ ಲಕ್ಷ್ಮಣನು. ಪುಲಸ್ತ್ಯನ್ವಯನು, ಖರನು. ಪತಂಗಾನ್ವಯ ಶಿರೋಮಣಿ, ರಾಮನು. ಪುಲಸ್ತ್ಯನ ಅನ್ವಯು

ಪದ್ಯ ಸಂಖೆ.

ಅಂದರೆ, ವಂಶ. ವಂಶೋನ್ವ ವಾಯಸ್ಸಂತಾನಃ ಯೆಂಬವು ರವು.

||೨೫೦|| ಬತ್ತಳಿಕೆ, ಬಾಣಗಳ ಬುಟ್ಟಿ. ಉಗಿದನು, ಈಚಿಗೆ ತೆಗದನು.

||೨೫೭|| ಅಸಿ, ಖಡ್ಗ. ರಾಮನಿಗೆ ಸುರ ಭುಜಂಗರೊಳಗೆ ಯಾರನ್ನು ಸರಿಹೇಳಲಿ. ರಣಾಗ್ರದಲ್ಲಿ ಮುಗಿಲುಗಂಡ ಮಯೂರನ ಪೋಲು, ಮೇಘವನ್ನು ಕಂಡ ನವಿಲುಹಾಗೆ ಉಬ್ಬಿಹೋದನು. ಮೇಘೋದಯವು ನವಿಲುಗಳಿಗೆ ಆನಂದಕರ ವೆಂಬುದು ಪ್ರಸಿದ್ಧವು. ರಣೋತ್ಸಾಹ ವುಳ್ಳವನಾಗಿದ್ದನೆಂದರ್ಥವು.

||೨೫೮|| ಉಬ್ಬಟೆಯು, ಗರ್ವವನ್ನು. ಅಳಿಯೇರಿ, ಶಿಟ್ಟುಹತ್ತಿ. ಉತ್ಕಟ, ಉಗ್ರಯು.

||೨೬೧|| ಚಿತ್ರಕಳಾಸ, ಆಶ್ಚರ್ಯವಾದ ಸಂಧಾನ. ವಜ್ರಾವರ್ತಕಾರ್ಮುಕವ, ವಜ್ರಾವರ್ತವೆಂಬ ಹೆಸರುಳ್ಳ ಧನುಸ್ಸನ್ನು. ಸಾಸಿಗರ ಬಲ್ಲಹನ ಬಳಿಗೆ, ರಾಮನ ಬಳಿಗೆ.

||೨೬೨|| ಹರಿ, ಇಂದ್ರನು. ವಿತ್ತಪ, ಕುಬೇರನು. ಶಿಖಿ, ಅಗ್ನಿ. ||ತಾ|| ಸಮುದ್ರ ಮಥನಕಾಲದಲ್ಲಿ ಮಂದರ ಪರ್ವತಕ್ಕೆ ಕೂರ್ಮಾವತಾರದಹಾಗೆಯೂ ಲಕ್ಷ್ಮಣನು ರಾಮನಿಗೆ ಸಹಾಯವಾಗಿದ್ದನೆಂಬುದು.

||೨೭೨|| ಅಂಭಃ, ನೀರಿನಲ್ಲಿರುವ. ಕುಂಭೀನ, ಆನೆ. ಕುಂಭೀನಸ, ಸರ್ಪಗಳು. ಮಕರ, ಮೊಸಳೆಗಳು. ಮಹಾಕೂರ್ಮ, ದೊಡ್ಡ ಆಮೆಗಳು, ಇವುಗಳಿಂದ. ಕೀರ್ಣ, ವ್ಯಾಪ್ತವಾದ, ಊರ್ಮಿಮಾಲಾ, ಅಲೆಗಳ ಸಮೂಹದಿಂದ. ಜೃಂಭತ್, ವಿಜೃಂಭಿಸುತ್ತಿರುವ. ದಂಭೋಳಿಹಸ್ತ, ಇಂದ್ರನ. ಆಹತ, ಪೆಟ್ಟಿನಿಂದ. ಚಕಿತ, ಭಯಪಟ್ಟು. ಗತ, ಹೋದಂಥ. ಕ್ಷ್ಮಾಭೃ, ಪರ್ವತಗಳ. ವಿಸ್ಫಾರ, ಧ್ವನಿಯುಳ್ಳ. ವಿದ್ಯುತ್, ಮಿಂಚುಗಳಿಂದ. ಸಂಭಿನ್ನ, ಕೂಡಿಕೊಂಡಿರುವ. ಅಂಭೋಭೃತ್, ಮೇಘಗಳಿಂದ. ಉದ್ಯತ್ಕಟ, ಯತ್ತರವಾದ ಗಟ್ಟುಗಳುಳ್ಳ. ಚಟುಳ, ಅಧಿಕವಾಗಿ. ಚಲತ್, ಚಲಿಸುತ್ತಿರುವ. ಮೀನ, ಮತ್ಸ್ಯಗಳ. ಫೇನ, ಬುರುಗಿನ. ಪ್ರತಾನಂ, ಸಮೂಹವುಳ್ಳ. ಶುಂಭದ್ಗಂಭೀರಮಂ, ಗಂಭೀರವಾಗಿ ಶಬ್ದ ಮಾಡುತ್ತಿರುವ. ದತ್ತೇಂದ್ರ ಭದ್ರಂ, ಇಂದ್ರಂಗೆ ಐರಾವತಾವನ್ನು ಕೊಟ್ಟಂಥ, ಸಮುದ್ರವ,

ರಂಜಿಸಿದುದು, ಪ್ರಕಾಶಿಸಿತು. ಈ ಪದ್ಯವೆಲ್ಲಾ ಸಂಸ್ಕೃತ ಸಮಾಸವೇ ಆಗಿದೆ. ಇದು ಸ್ರಗ್ಧರಾವೃತ್ತ. ಏಕವಿಂಶತಿ ಛಂದಸ್ಸಿನಲ್ಲಿ ಹುಟ್ಟಿದ್ದು.

॥ ೨೩೩ ॥ ಕಡಲಿದು, ಈ ಸಮುದ್ರವು. ಇಂದುವ, ಚಂದ್ರನನ್ನು. ಪಡೆದುದುಗಡ, ಪಡೆಯಿತುಅಲ್ಲವೇ. ಮತ್ತು ಇಂದು, ಈ ದಿನ. ಸಿಡಿದು, ಹಾರಿ. ಎಡೆವಿಡಿದು, ಗುಂಪಾಗಿ. ಇಡಿದ, ತುಂಬಿದ. ವಾರಿಕಣಗಣದಿಂದಂ. ವಾರಿ, ನೀರಿನ. ಕಣ, ಬಿಂದುಗಳ. ಗಣ, ಸಮೂಹದಿಂದ. ಉಡುವಿತತಿಯುನು, ನಕ್ಷತ್ರ ಸಮೂಹವನ್ನು ಸಹ ಪಡೆಯಿತು ಯೆಂಬವಮಾತಿಗೆ ಅವಕಾಶವಾಗಿದೆ. ಇದು ಕಂದಪದ್ಯ. ವಾಗ್ವಿ. ೧೮೧ಪ್ರಶ್ನೆ. ೧ನೇ ಸೂತ್ರ. ನೋಡು.

॥ ೨೩೪ ॥ ಈ ಪದ್ಯಕ್ಕೆ ಯೆರಡರ್ಥ. ಸಮುದ್ರ ಪ್ಪೊಂದು. ವರನು ವೊಂದು. ತೀರದ ನೀರದಂಗಳು, ದಡದಲ್ಲಿರುವ ಮೇಘಗಳು. ಸದ್ವಿದ್ರುಮಾಗ್ರಂಗಳುಂ, ಶ್ರೇಷ್ಠವಾದ ಹವಳ ಬಳ್ಳಿಗಳ ಕೊನೆಗಳು ಹ್ಯಾಗೆಪ್ರಕಾಸಿಸಿದವಂದರೆ. ನದಿನಾರಿಯುರುಂ, ನದಿಗಳೆಂಬ ಸ್ತ್ರೀಯರು. ಘನ ಲಾವಂಣ್ಯರಸಾನ್ವಿತಂಗೆ. ಘನ, ಅಧಿಕವಾದ ಲಾವಂಣ್ಯರಸಾನ್ವಿತಂಗೆ, ಸಾಂದರ್ಯ ರಸದಿಂದ ಕೂಡಿರುವವನಿಗೆ. ಮತ್ತು ಘನ, ಮೇಘಗಳ. ಲಾವಂಣ್ಯ, ಉಪ್ಪಾದ, ರಸ, ನೀರಿನಿಂದ. ಅನ್ವಿತಂಗೆ, ಕೂಡಿರುವವನಿಗೆ. ಹೀಗೆಯೇ ಯಲ್ಲಾ ಗುಣವಾಚಕಗಳಿಗೂ ಅರ್ಥಮಾಡತಕ್ಕದ್ದು. ನಾರಿಯರು ಮೆಚ್ಚಿ ಕೊಟ್ಟಂಥಾಮೇಘಗಳೆಂಬ ಕೂದಲುನ್ನು ವಿದ್ಯವು ಬಳ್ಳಿಗಳು, ಅಂಗುಳಿಯುಕಗಳಹಾಗೂ. ಪ್ರಕಾಸಿಸಿತು. ಇದು ಮತ್ತೇಭವಿಕ್ರೀಡಿತವೃತ್ತ. ವಾಗ್ವಿ. ೧೮೦ನೇ ಪ್ರ. ನೋಡು.

॥ ೨೩೫ ॥ ಜಲನಿಧಿ, ಓ ಸಮುದ್ರನೇ. ಜಂಭ ವೈರಿಗೆ, ಇಂದ್ರನಿಗೆ. ಅರಿಯುಂ, ಶತ್ರುವಾದ ಮೈನಾಕ ಪರ್ವತವನ್ನು. ಜಿಡೆಂದು ಹೇಳುತ್ತೊ ಯನ್ನುವಹಾಗೆ. ಸುಸ್ತನಿತಂ, ಮೇಘ ಗರ್ಜನೆ ವೊಪ್ಪುತ್ತಿರಲು. ಅಬ್ಧಿ, ಸಮುದ್ರವು. ಅದನ್ನು ಕೊಡುವದಿಲ್ಲವೆಂದು ಹೇಳಿ ಜೀವನಂ ಅಂದರೆ ಉದಕವನ್ನು ಮೇಘಗಳಿಗೆ ಕೊಟ್ಟಿತೆಂದಭಿಪ್ರಾಯುವು. ಅಂದರೆ ಶೂರನಾದವನು ತನ್ನ ಜೀವವನ್ನಾದರೂ ಕೊಟ್ಟು ಮರೆ ಹೊಕ್ಕವನನ್ನು ಕಾಪಾಡು

ಪದ್ಯ ಸಂಖೆ.

ವೆನೆಂಬ ಭಾವವು. ಇದು ಚಂಪಕಮಾಲಾ ವೃತ್ತ. ಪೂರ್ವ ೧೮೦ನೇ ಪ್ರ. ನೋಡು.

॥ ೨೩೬ ॥ ಎನ್ನೊಳ್ಪುಟ್ಟಿದ. ನನ್ನಲ್ಲಿ ಹುಟ್ಟಿದ, ಚಂದ್ರನಿಂದ, ಸಸ್ಯೌಘ, ಪೈರುಗಳ ಗುಂಪು. ಸಂಪತ್ತನ್ನು, ಪಡೆಗುಂ, ಹೊಂದುವದು. ಅಂತೆ, ಹೀಗೆಯೇ. ಧಾತ್ರಿ, ಭೂಮಿಯು ಲಕ್ಷ್ಮಿಯಿಂದ ಸೌಭಾಗ್ಯವಂ ಪಡೆಗುಂ. ಜಿಷ್ಣು, ಇಂದ್ರನು, ವಸ್ತುವಿಂದ ಸರ್ವಾರ್ಥಮುಂ ಪಡೆಗುಂ. ಜಿಷ್ಣುರ್ಲೇಖರ್ಷಭಶ್ಶಕ್ರಃ ಎಂದಮರವು. ನನ್ನಲ್ಲಿ ಹುಟ್ಟಿದ ಯೆಂಬುವದು ಮೂರು ವಸ್ತುವಿಗಳಿಗೂ ಬರುವದು. ಆದಕಾರಣ ನನ್ನಗೆ ಸಮಾನ ಯಾರೂ ಲೋಕದಲ್ಲಿ ಇಲ್ಲವೆಂದು ಹೇಳುತ್ತೋ ಯೆಂಬಂತೆ ಸಾಗರಂ, ಉದ್ಘೋಷಿಕುಂ, ಶಬ್ದ ಮಾಡುತ್ತದೆ. ಇದು ಶಾರ್ದೂಲವಿಕ್ರೀಡಿತ ವೃತ್ತ. ವಾಗ್ವಿಧಾ. ೧೮೦ನೇ ಪ್ರ. ನೋಡು.

॥ ೨೩೭ ॥ ಸಮುದ್ರವು. ಘುಳಿಘುಳಿಸುತ್ತೆ ಬರ್ಪ, ಶಬ್ದ ಮಾಡುತ್ತಾ ಬರುವ ತೆರೆಯಿಂ. ಹಲಿಗೆಳಿಂದಲೂ, ನೊರೆಗಳಿಂದಲೂ, ಪಾಸಿಬಳ್ಳಿಗಳಿಂದಲೂ. ಕರಂ, ಹೆಚ್ಚಾಗಿ. ತಮಾಲ ನೀಲವನದಿಂ, ಕಪ್ಪಾದ ಹೊಂಗೇ ಗಿಡಗಳಿಂದಲೂ. ಘನದಿಂ, ಮೇಘಗಳಿಂದಲೂ. ಶಬ್ದ ಮಾಡುತ್ತಾ ಸಂಚರಿಸುವ. ಪೀನ, ಬಲತ. ನಿರ್ಮಳತರ ಶುಕ್ತಿಯಿಂ, ಕಪ್ಪೇ ಚಿಪ್ಪೆಗಳಿಂದಲೂ. ಹರಿಯಿಂ, ಕಪಿಗಳಿಂದಲೂ. ಕರಿಯಿಂ, ನೀರಾನೆಗಳಿಂದಲೂ. ಗಿರಿಯಿಂದಲೂ, ಪ್ರೊಪ್ಪಿತ್ತು. ಇದು ಚಂಪಕಮಾಲಾ ವೃತ್ತ.

॥ ೨೩೮ ॥ ಸಾಗರಂ, ಈ ಸಮುದ್ರವು. ಯಮಿಯು ಹಾಗೆಯೂ, ಅಂಬರದಂತೆಯೂ ಹಂಸನಿಲಯಂ, ಅಂದರೆ ಯಮಿ ಯೆಂಬ ಸನ್ಯಾಸಿ ಹಂಸಾಶ್ರಮಕ್ಕೆ ಸ್ಥಾನವು. ಅಂಬರ, ಆಕಾಶವು. ಹಂಸ, ಸೂರ್ಯನಿಗೆ, ನಿಲಯಂ, ಸ್ಥಾನವು. ಈ ಸಮುದ್ರವು, ಹಂಸಪಕ್ಷಿಗಳಿಗೆ ನಿಲಯವು. ಮುಂದಿನ ಗುಣ ವಾಚಕಗಳಿಗೂ ಅರ್ಥ ಮಾಡಬೇಕು. ಪದ್ಮ, ಕಮಲ, ಲಕ್ಷ್ಮಿ. ಪುಷ್ಕರ, ನಿಧಿ. ಸೊಂಡ್ಲ, ಕಿರಣ. ಮಹಾ ಮಾರುತಿ, ಹನುಮಂತ. ಚೈತ್ರ ಕುಜ, ವಸಂತ ವೃಕ್ಷ. ಉದ್ಯತ್ಪ್ರವಾಳಾಶ್ರಯಂ, ಉದ್ಯತ್, ಎತ್ತಿದ. ಪ್ರ, ಉತ್ಕೃಷ್ಟವಾದ. ವಾಲಾಶ್ರಯಂ, ಬಾಲವುಳ್ಳವನು. ಹನುಮಂತನು. ಚಿಗುರುಳ್ಳದ್ದು ವಸಂತ ವೃಕ್ಷ. ಕುಸುಮ, ಪುಷ್ಪ.

ಪದ್ಯ ಸಂಖೆ.

ಸಂಭೃತರಸ ಶ್ರೀ ಗಾಗರಂ, ತುಂಬಿದ ರಸವುಳ್ಳದ್ದು. ಪುಷ್ಪ ಗುಣ ವುಳ್ಳವನು, ಉತ್ತಮನು. ಶ್ರೀಗೆ, ಲಕ್ಷ್ಮಿಗೆ. ಆಗರಂ, ಹುಟ್ಟಿದ ಮನೆ ಸಮುದ್ರವು. ಇದು ಮತ್ತೇ ಭವಿಕ್ರೀಡಿತ ವೃತ್ತವು.

॥ ೨೭೯ ॥ ಭೃಂಗರಿ, ತುಂಬಿ. ಮದನ, ಮನ್ಮಥ. ಮದನೋ ಮನ್ಮಥೋ ಮಾರಃ ಯೆಂದಮರವು. ಭೂವಳಯಕ್ಕೆ, ಭೂಮಂಡಲಕ್ಕೆ, ವಸಂತಾಗಮಂ, ವಸಂತಋತುವು ಬಂತು. ಇದರಲ್ಲಿ ವಸಂತನು ಛಳಿಯೊಡ್ಡು ಜಾರಲು ತಂಗಾಳಿ ತಲೆ ತೋರಲು ಇತ್ಯಾದಿ.

॥ ೨೮೦ ॥ ಮಾನವ್ರತಾ ಚಾರವುಳ್ಳ ಕೋಗಿಲೆ ಮಾನವಂ ಬಿಟ್ಟು ಕೂಗಿತು. ಮಲ್ಲಿಗೆ ಯೆಂಬ ಮಾನಿನಿಗೆ, ಸ್ತ್ರೀಗೆ. ಪ್ರಮದಾ ಮಾನಿನೀ ಕಾಂತಾ ಲಲನಾ ಜನಿತಂಬಿನೀ ಯೆಂದಮರವು. ಚಂಡಾಳಿಗಳ ಸಂಗ ಮಾಡುದು, ಅಂದರೆ ಚಂಡಾಲರ ಸಹ ವಾಸವೆಂತಲೂ ಶ್ಲೇಷೆಯಾಗಿ ಚಂಡ, ಕ್ರೂರವಾದ. ಅಳಿಗಳ, ಭ್ರಮರಗಳ ಸಂಗವೆಂತಲೂ ವ್ರಾಹಿಸುವದು. ಮಧು ಸಂಗದಿಂದ ಯೇನೇನಾಗದು, ನೀಚ ಸಹವಾಸದಿಂದ ಯೇನೇನಾಗಲಾರದು. ಮಧು, ಅಂದರೆ ವಸಂತ ಪುರುಷನು. ಹೀಗೆ ವಸಂತ ಋತು ಹುಟ್ಟಿತೆಂಬುವದು. ಮಧುಪದಕ್ಕೆ ಯೆರಡರ್ಥ.

॥ ೨೮೧ ॥ ಎಕ್ಕೀಚಿಗಿರಿನ ಕೆಂಪು ಬಣ್ಣವು, ಪೂಗಳ ಕೆಂಪು, ಪುಷ್ಪ ವಾಸನೆಯು, ಹೀಗೆಯೇ ವ್ರಾಹಿಸುವದು. ವಿರಹಿಗಳು, ಕಾಮುಕರು. ಚೈತ್ರಾಗಮಂ, ವಸಂತಾಗಮವು.

॥ ೨೮೨ ॥ ಇದರಲ್ಲಿ ವಸಂತಋತು ಲಕ್ಷಣವನ್ನೇ ವರ್ಷಋತುವಾಗಿ ಉತ್ಪ್ರೇಕ್ಷಿಸುತ್ತಾನೆ. ಗುಂಪಾಗಿ ಬರುವ ತುಂಬಿಗಳ ಕಪ್ಪು ಬಣ್ಣವೇ ಮುಂಗಾರ ಮುಗಿಲು, ಮುಂಗಾರೆ ಮೇಘಗಳು. ಅವುಗಳ ಝೇಂಕಾರ ಶಬ್ದವೇ ಮೊಳಗು, ಮೇಘಗರ್ಜನೇ. ಚರನಾರಿಯರ ಥಳಪಗಣ್ಮಿಂಚು, ಸಂಚರಿಸುವ ಸ್ತ್ರೀಯರ ಥಳಥಳಿಸುವ ಕಣ್ಣುಗಳೇ ಮಿಂಚು. ಮಾರುತ ಹತಿಯೊಳು, ಘಾಳಿಯಾ ಪೆಟ್ಟಿಯಿಂದ. ಬಗೆದ, ಉದರುವ. ಮಲ್ಲಿಗೆ ಯುರಳ್ಗಳೇ, ಮಲ್ಲಿಗೇ ಹುವುಗಳೇ. ತೋರ ಮಳೆ ವನಿಗಳು, ದೊಡ್ಡ ಮಳೆ ಹನಿಗಳು. ಇಂದ್ರ ಗೋಪಂಗಳು, ಮಿಂಚುಂಗಿ ಹುಳಗಳಾಗಲು. ಶೃಂಗಾರವಾಯಿತು, ಇದು ವರ್ಷಋತುವೋ ವಸಂತಋತುವೊ ಯೆಂದು ಸಂಶಯವಾಗಿ ಯಿತ್ತು ಯೆಂದು ತ್ಪ್ರೇಕ್ಷೆ.

॥ ೨೮೩ ॥ ಅರಸಂಚೆಯಿಂ, ರಾಜ ಹಂಸಗಳಿಂದಲೂ. ಕೊಂಚೆ, ಕ್ರೌಂಚ

ಪದ್ಯ ಸಂಖ್ಯೆ

ಪಗಕ್ಷಿಳು. ಮದಾಳಿ, ತುಂಬಿ. ಪೊಕ್ಕುಳಿ, ಕೋಗಿಲೆ. ವಿಟಾಳಿ. ಜಾರರು. ಇವುಗಳಿಂದ ವನ ವನಗಳೂ ಮೆರದವು.

॥ ೨೮೭ ॥ ತೊಳಪ, ಪ್ರಕಾಶಿಸುವ. ಕಂಗೊಳಿಸುವ, ಪ್ರಕಾಶಿಸುವ. ಬನ, ವನ.

॥ ೨೮೮ ॥ ಬಕುಳ, ವಕುಳ. ಕುರವಕ, ಗೋರಂಟೆ. ಚಂಪಕ, ಸಂಪಂಗಿ. ಬಂಧೂಕ, ದಾಸಾಣ. ಚೂತ, ಮಾವಿನಿ. ಕರವೀರ, ಗನ್ನೇರಿ, ಕೇತಕಿ, ಗೇದಿಗೆ. ಈ ಹುವುಗಳನ್ನೆಲ್ಲಾ ಕಾಣಿಕೆಯಾಗಿ ಕೊಟ್ಟರು.

॥ ೨೮೯ ॥ ಆ ಕಾಸಾರಂ, ಆ ಸರೋವರ. ಕಾಸಾರಸ್ಸರಸೀಸರಃ ಯೆಂದಮರವು. ರಂನ, ರತ್ನ. ಪ್ರಸೂನ, ಪುಷ್ಪ. ಪುಳಿನ, ಮರಳುದಿಬ್ಬ. ನಳಿನ, ಕಮಲ. ನಕ್ರ, ಮೊಸಳೆ. ವಿಹಗ, ಪಕ್ಷಿ. ಇವುಗಳೊಡಗೂಡಿ ಪ್ರಕಾಶಿಸಿತು. ಖಗೇ ವಿಹಂಗ ವಿಹಗ ವಿಹಂಗಮ ವಿಹಾಯಸಾಃ ಯೆಂದಮರವು.

॥ ೨೯೦ ॥ ಸರಸಿ, ಸರಸ್ಸು. ಅರಸಿನಂದದೊಳು, ಅರಸಿನ ಹಾಗೆ ಪ್ರಕಾಶಿಸಿತು. ಪದಗಳೆಲ್ಲಾ ಯೆರಡರ್ಥ ವುಳ್ಳವು, ಆದ್ದರಿಂದ ವೊಂದು ಸರಸ್ಸಿಗೂ ಮತ್ತೊಂದರ್ಥವು ಅರಸನಿಗೂ ಅನ್ವಯಿಸತಕ್ಕದ್ದು. ಹ್ಯಾಗಂದರೆ, ಪುಂಡರೀಕ, ಬಿಳೀಕಮಲಗಳು, ಶ್ವೇತಛತ್ರ. ವಾಜಿಗಳಿಂ, ಭ್ರಮರ, ಕುದುರೆ, ವಾರಣ, ಗಟ್ಟುಆನೆ. ರಾಜಹಂಸಾಳಿ, ಹಂಸಪಕ್ಷಿಸಮೂಹ, ರಾಜಶ್ರೇಷ್ಠರು. ಕೋಶಂಗಳು, ಮೊಗ್ಗುಗಳು, ಖಜಾನೆಗಳು. ಕುವಲಯ, ಕನ್ನೈದಿಲೆ, ಭೂಮಂಡಲ. ಮುಕುಳಿತೋತ್ಕರಸರೋಜ, ಮುಕುಳಿಸಿ ಅರಳುವ ಕಮಲ. ಜೋಡಿಸಿದ ಹಸ್ತಕಮಲಗಳುಳ್ಳ, ಭುವನ ಶೋಭೆ, ನೀರಿನಕಾಂತಿ, ಭೂಭಾರಪ್ರಕಾಶ. ಇದರಲ್ಲಿ ಮೊದಲನೆಅರ್ಥ ಸರಸ್ಸಿಗೂ ಯರಡನೇದು ಅರಸನಿಗೂ ಹಾಡತಕ್ಕದ್ದು.

॥ ೨೯೧ ॥ ಪದ್ಮಾಕರಂ, ಸರೋವರವು. ಉಡುಗಣ, ನಕ್ಷತ್ರ ಸಮೂಹ. ಹರಿಯಂತೆ, ವಿಷ್ಣುವಿನಂತೆಯೂ ಇದೆ. ಪರಮಾಬ್ಜರಮ್ಯಂ, ಉತ್ಕೃಷ್ಟಚಂದ್ರನಿಂದ ವೊಪ್ಪಿದ್ದು ನಕ್ಷತ್ರ ಸಮೂಹ. ಶಂಖದಿಂದ ಪ್ರಕಾಶವಾದವನು ವಿಷ್ಣುವು, ಕಮಲಗಳಿಂದ ವೊಪ್ಪಿದ್ದು ಸರಸ್ಸು. ಹೀಗೆಯೇ ಮುಂದೆಯೂ ಅನ್ವಯಿಸತಕ್ಕದ್ದು. ದ್ವಿ

ಪದ್ಯ ಸಂಖ್ಯೆ.

ಜಾಲಂಕೃತಂ, ಚಂದ್ರನಿಂದ ಅಲಂಕರಿಸಲ್ಪಟ್ಟವನು ಹರನು. ದ್ವಿಜ, ಬ್ರಾಹ್ಮಣರಿಂದ ಅಲಂಕೃತವಾದದ್ದು ಯಜ್ಞ. ದ್ವಿಜ, ಪಕ್ಷಿಗಳಿಂದ ಕೂಡಿದ್ದು ಸರೋವರ. ಮಂಡಲಾಕಾರವಾಗಿ ಪ್ರಕಾಶಿಸುವನು ರವಿ. ಉರುಚಕ್ರಶೋಭಿ, ದೊಡ್ಡ ಚಕ್ರವಾಕಪಕ್ಷಿಗಳಿಂ ಪ್ರಕಾಶಿಸುವದು ಸರಸ್ಸು. ದೊಡ್ಡ ಚಕ್ರಗಳಿಂದ ರಥ. ಕುವಲಯ, ಭೂಮಂಡಲ. ಕನ್ನೈದಿಲೆ, ಶಿವ, ಶಿವನು, ನರಿಗಳು.

॥ ೯೩ ॥ ಹಾರಿದ್ರ, ಅರಿಸಿನ ಬಣ್ಣ ನೀರುಳ್ಳೊಂದೆಡೆ. ಸೀತೋದಕಂ, ಬಿಸಿನೀರು. ಕಾಸಾರವಧು, ಸ್ತ್ರೀ.

॥ ೯೪ ॥ ನಾದವಿದ್ಯಾಪಂಡಿತಂ, ಸಂಗೀತ ವಿದ್ಯೆ ಕಲ್ತವನು. ಭರತ ಶಾಸ್ತ್ರ ನಾಟ್ಯಶಾಸ್ತ್ರ. ವೇದವೇದಾಂತಾದಿ ವಿದ್ಯೆಗಳಲ್ಲಿನ ಕಥೆಗಳನ್ನು ಕೇಳಿದ್ದರಿಂದುಂಟಾದ ತತ್ವಜ್ಞಾನವುಳ್ಳವನು. ಮಾದರಸನು.

॥ ೯೫ ॥ ಯಮನಿಯಮಗಳೆಂಬ ವ್ರತಗಳು, ಶಮದಮಾದಿಗಳೆಂಬ ಅಭ್ಯಾಸಗಳೂ ವುಳ್ಳವನು.

॥ ೯೬ ॥ ಆ ಮಹಾತ್ಮನು ಬಹು ಮಹಿಮೆಯುಳ್ಳವನಾಗಿ ಉದ್ದಾಮ, ಅಧಿಕವಾದ ವಿಕ್ರಮವೂ ವಿತರಣ ಅಂದರೆ ಔದಾರ್ಯವೂ ವುಂಟಾಗಿ ರಾಜ್ಯವನ್ನಾಳುತ್ತಿದ್ದನು.

॥ ೯೭ ॥ ಲಿಂಗ್ಯ, ಲಿಂಗ ಸಂಬಂಧವಾದ. ಸೂರಿ ಲೋಕಂ, ವಿದ್ವಾಂಸರಿಗೆ, ನಿವಾಸ, ಮನೆ. ಅನಾರತಂ, ಯಾವಾಗಲೂ.

॥ ೯೮ ॥ ಬತ್ತೀಸು, ಮುವ್ವತ್ತೆರಡು ರಾಗಗಳು. ರಚಿಸಿ, ಮಾಡಿ. ಪ್ರಸ್ತುತವನರಿದು, ಸಮಯವನ್ನರಿತು.

॥ ೯೯ ॥ ಇವರಲ್ಲಿಯೂ ಮುಂದಿನ ಎರಡು ಪದ್ಯಗಳಲ್ಲಿಯೂ ಇರುವ ಹೆಸರುಗಳೆಲ್ಲಾ ರಾಗಗಳು. ಸಂಗೀತರತ್ನಾಕರದಲ್ಲಿ ನೋಡತಕ್ಕದ್ದು.

॥ ೧೦೩ ॥ ಶ್ರೀ ಪರ್ವತ, ಶ್ರೀಶೈಲ. ಸಮಾಧಿ, ಬಾಹ್ಯಸ್ಮರಣೆಯಿಲ್ಲದೆ ದೇವ ಧ್ಯಾನವನ್ನು ಮಾಡುವದು. ಗಿರೀಂದ್ರ, ಪರ್ವತಶ್ರೇಷ್ಠ ವಿಪಿನ, ಕಾಡು.

॥ ೧೦೪ ॥ ಇದರಲ್ಲೆಲ್ಲಾ ಸಮಾಸಪದಗಳು. ಮುಖ್ಯವಾಗಿ ಅವನ ಮಹಿಮೆಯೆಂಬುವ ಅರ್ಥ.

॥ ೧೦೭ ॥ ನಗೇಂದ್ರ, ಪರ್ವತ. ಮಾನವಂಗೆ, ಮನುಷ್ಯಾಮಾನುಷಾಮ

ಪದ್ಯ ಸಂಖೆ

ತ್ಯಗ್ ಮನುಜಾವಮಾನವಾನರಾಃ ಯೆಂದಮರವು. ಅಪವರ್ಗ, ಮೋಕ್ಷ. ಅವಸಾನ, ಅಂತ್ಯ.

॥ ೩೧೦ ॥ ಪವಿಧರನ, ಇಂದ್ರನ. ಕುಲಿಶಂಭಿದುರಂಪವಿಃ ಯೆಂದಮರವು. ಸರಿದರ್ಣವ, ಸಮುದ್ರ. ಹಿಮವನ್ನಗೇಂದ್ರ, ಹಿಮವತ್ಪರ್ವತ. ಯೆಲ್ಲಾಪರ್ವತಗಳನ್ನೂ ನಿಂದಿಸುತ್ತಾನೆ.

॥ ೩೧೩ ॥ ಭೂತಳಪೃಷ್ಠನ್ನ ಪುರವರಜಾತದೊಳು, ಭೂಮಿಯು ಕೆಳಗಿರುವ ಪಟ್ಟಗಳಲ್ಲಿಯೂ. ಅಶಿತಾಭ್ರಂಕಷ ಶಿಲೆಗಳೊಳು, ಉನ್ನತವಾದ ಶಿಲೆಗಳಲ್ಲಿಯೂ. ಸ್ಫೀತವಿಲಸತ್ಸ್ಫರ್ಶವೇದಿಗಳೊಳು, ಅತ್ಯುನ್ನತವಾಗಿ ವಿಸ್ತಾರವಾದ ಜಗುಲಿಗಳಲ್ಲಿಯೂ.

॥ ೩೧೮ ॥ ತರು, ವೃಕ್ಷ. ಭಸಿತ, ಭಸ್ಮ. ಈ ಪ್ರಕರಣದಲ್ಲಿ ಅನೇಕ ಪದ್ಯಗಳು ಶಬ್ದಾಲಂಕಾರ ಪುಕ್ತವುಗಳಾದ್ದರಿಂದ ಅರ್ಥದ ತೊಂದರೆ ಯಿರುವದಿಲ್ಲ. ಈ ಪದ್ಯ ಮೊದಲು ೩೪೨ನೇ ಪದ್ಯದ ವರಿಗೆ ಇರುವ ಪದಗಳಿಗೆಮಾತ್ರ ಈ ಕೆಳಗೆ ಅರ್ಥ ಬರದಿದೆ. ಅವುಗಳನ್ನು ಸಂದರ್ಭಾನುಸಾರ ಅನ್ವಯಿಸಿಕೊಳ್ಳುವದು. ಖಗ, ಪಕ್ಷಿ. ಶೈಲ, ಪರ್ವತ. ಆಪಗೆ, ನದಿ. ಗುಲ್ಮ, ಪೊದೆ. ವಲ್ಲರಿ, ಬಳ್ಳಿ. ಗಾಯಕ, ಹಾಡುವ. ಮಧುಪ, ತುಂಬಿ. ಫಣಿ, ಹಾವು. ವಾನರ, ಕೋತಿ. ಮರ್ಕಟೋ ವಾನರಃಕೀಶಃ ಯೆಂದಮರವು. ಪ್ರತತಿ, ತತಿ, ಆವಳಿ, ನಿಕರ. ಯೂಥ, ಇವುಗಳೆಲ್ಲಾ ಸಮೂಹಾರ್ಥಕಗಳು. ಜ್ಯೋತಿ, ಬೆಳಕು. ಹರ್ಮ್ಯ, ಮಹಡಿ. ಮಹೀರುಹ, ವೃಕ್ಷ. ಕನಕ, ಚಿನ್ನ. ವಟ, ಆಲದ ಮರ. ಬದರೀ ಫಲ, ಯಳಚೀಹಣ್ಣು. ಕಪಿಥ್ಥ, ಬ್ಯಾಲ. ನಾರಂಗ, ಕಿಚ್ಚಲೀ ಹಣ್ಣು. ಸೂಕರ, ಹಂದಿ.

॥ ೩೪೩ ॥ ದಶೇರಂ, ರಾವಣನು. ಸಸಿನದಿಂ, ಸೊಗಸಿನಿಂದ. ರಾವಣನು ನಮಿಸಲು ೨೦ ನೇತ್ರಗಳು ಈಶ್ವರನ ಪಾದದ ೧೦ ಉಗುರುಗಳಲ್ಲಿ ೨೦೦ಆಗಿ ಕಾಣಿಸಿದವು. ವಿಷ್ಣು ನೇತ್ರವು ವೊಂದು ಅಂತು ಕಂಡದ್ದು ೨೦೧ ನೇತ್ರಗಳೆಂಬ ನುಡಿಗೆ ಗುರಿಯಾದ ಶಿವನೇ ನಮ್ಮನ್ನು ರಕ್ಷಿಸು.

॥ ೩೪೪ ॥ ತರಣಿ ಮಂಡಲವನ್ನು, ಸೂರ್ಯನನ್ನು. ಅಭ್ರಂ, ಮೇಘವು. ಅಭ್ರಂಮೇಘೋ ವಾರಿವಾಹಃ ಯೆಂದಮರವು. ಸುದರ್ಶಣವನ್ನು, ಕನ್ನಡಿಯನ್ನು. ಕಾಳಿಕೆ, ಕಪ್ಪು. ಆಪಾಂಸೆ, ಧೂಳಿ. ಪರಮಾ

ಪದ್ಯ ಸಂಖೆ

ತ್ಮನನ್ನು ಜೀವತ್ವವು ಮುಸುಕಿಕೊಂಡಿರುವಂತೆ ಅರಸರನ್ನು ಕ್ಷಾತ್ರತಾಮುಸವೆಂಬ ರಾಜ್ಯ ಗರ್ವವು ವೇಷ್ಟಿಸಿರುವದು. ಅದಕ್ಕೆ ರಾಜ ನೀತಿಯುಂಟು.

॥ ೩೪೫ ॥ ವಕ್ರಾಚರಿತವೂ ಯೆರಡು ನಾಲಿಗೆಯೂ ಲೋಭತ್ವವೂ ಧನವನ್ನೇ ಕಾದುಕೊಂಡಿರುವದು ಈ ಮುಂತಾದ ವಿಶೇಷಣಗಳಿಂದ ಸರ್ಪವೂ ಅರಸನೂ ಪೊಂದೆನ್ನುತ್ತಾನೆ.

॥ ೩೪೬ ॥ ಕೊಂಡೆಯರು, ಸುಳ್ಳುಗಾರರು. ಎದೆದಾವರೆ, ಹೃದಯ ಕಮಲ. ನಭೋ . . . ಮ, ಆಕಾಶದ ಹೂವು.

॥ ೩೪೭ ॥ ಕುಸಿರೊ ಮಂಜಿನಪನಿಗಳಿಂ, ತಣ್ಣಾದ ಮಂಜಿನ ಹನಿಗಳಿಂದ ಕಮಲ ಸಂಕುಲವೂ ಜಲ ಬಿಂದುಗಳಿಂದ ಮಧುವೂ ಲೋಭದಿಂದ ಗುಣ ಸಮೂಹವೂ ಇತ್ಯಾದಿ ಪೊಂದೊಂದರಿಂದ ಮತ್ತೊಂದು ನಾಶವಾಗುವಂತೆ ರಾಜ್ಯ ಭಾರವು ಪಿಸುನ ಅಂದರೆ ದುಷ್ಟರಿಂದ ಕೆಡುವದೆಂಬುವದು.

॥ ೩೪೮ ॥ ಕುಮಂತ್ರಾನ್ವಿತರ, ದುರಾಲೋಚನೆ ಪರರ. ಸುತಿಪಥ, ಶೃತಿಮಾರ್ಗ. ನಿರಾಕರಿಸು, ತಿರಸ್ಕರಿಸು.

॥ ೩೫೦ ॥ ದುರ್ಜನರ ಚಾಡಿಮಾತುಗಳಿಂದ ದೇಶದಲ್ಲಿ ಸಜ್ಜನರಿಗೆ ತೊಂದರೆ ಕೊಟ್ಟು ಆಶೆಯಿಂದ ಸಂಪಾದಿಸಿದ ಧನವು ಹೆಚ್ಚಿದ ಇಂಧನವು ಅಂದರೆ ಸೌದೆ ಅಗ್ನಿಯಿಂದ ಸುಟ್ಟು ಹೋಗುವ ಹಾಗೆ ಶತೃ ರಾಜರಿಂದ ಕಡೆಗೆ ಬಯಲಾಗಿ ಹೋಗುವದು, ನಾಶವಾಗುವದು.

॥ ೩೫೩ ॥ ಪ್ರಭುತ್ವವು ಚನ್ನಾಗಿದೆ ಯೆಂಬ ಮಾತು ಸತ್ತಹಾಗೆ ಇದ್ದರೆ ಆ ಅರಸನು ಬದುಕಿಯೂ ವ್ಯರ್ಥವಾಗಿ ಹೆಂಗಸರ ಅಪಹಾಸ್ಯಕ್ಕೆ ಗುರಿಯಾಗುವನು.

॥ ೩೫೬ ॥ ವೇದಗಳಲ್ಲಿ ಸಾಮವೇದವು ಅಧಿಕವಾದ ಹಾಗೆ ಸಾಮ ದಾನ ಭೇದ ದಂಡ ವೆಂಬ ಚತುರುಪಾಯಂಗಳಲ್ಲಿ ಸಾಮ ವೆಂಬುಪಾಯವೇ ಶ್ರೇಷ್ಠವು. ದಂಡವು ಸಾಮಾನ್ಯದೊಳಗೆ ಸಾಮಾನ್ಯವು. ಇದು ತಿಳಿಯುವ ಅರಸನು ಸಾಮ್ರಾಜ್ಯ ನೆನಿಸುವನು.

॥ ೩೫೭ ॥ ಅರಿನೃಪರು ಸಂಧಾನ ಮಾಡುತ್ತಿರುವಲ್ಲಿಯೂ ಕರಿ ತುರಗಗಳ ಹತ್ತುವದರಲ್ಲಿಯೂ ಸ್ತ್ರೀಸಂಗದಲ್ಲಿ ಮಜ್ಜನ ಅಂದರೆ ಸ್ನಾನ

ಪದ್ಯ ಸಂಖ್ಯೆ.

ದಲ್ಲಿ ವಿವಾಹಾದಿಗಳಲ್ಲಿ ಇತ್ಯಾದಿಗಳಲ್ಲಿ ಹಿರಿದಾಗಿ ಯೆಚ್ಚರ ವಿರಬೇಕು.

॥ ೨೫೮ ॥ ಜೂಜಾಡುವದು, ಕದಿಯುವದು, ದೂಷಿಸುವದು, ಮದ್ಯಪಾನ, ಕೆಟ್ಟ ಮಾತುಗಳು, ಬೇಟೆ ಯೆಂಬ ವ್ಯಸನ ಸಪ್ತಕವನ್ನು ಬಿಡದು. ಪ್ರಸಿ, ಸುಖ್ಯು. ಇಲ್ಲದೇ ಮಾಡಿ ರಾಜ್ಯ ಭಾರ ಮಾಡಬೇಕು.

॥ ೨೬೦ ॥ ಮಾನ್ಯರಂ, ಪೂಜ್ಯರನ್ನು ಧಿಕ್ಕರಿಸಿ. ಪರಿವಾರ ಜನಕ್ಕೆ ಸಂಬಳಗಳ ಕೊಡದೆ, ಸಪ್ತಾಂಗದಲ್ಲಿ ಯೆಚ್ಚರಿಕೆ ಇಲ್ಲದೆ ಕೈಹಿಡಿದವಳನ್ನು ಆರವರಿಸಿ ಅಲಕ್ಷ್ಯ ಮಾಡಿ ಸೂಳೆ ಹೋಗುವ ದುಷ್ಟ ಗುಣಗಳುಳ್ಳ ಅರಸನನ್ನು ಜಯಲಕ್ಷ್ಮಿ ಬಿಟ್ಟು ಹೋಗುವಳೆಂದು ತಾತ್ಪರ್ಯವು.

॥ ೨೬೧ ॥ ಮಳೆಯಿಂದ ಸಸ್ಯಗಳೂ ಕುಸುಮ ಗಂಧದಿಂದ ತುಂಬಿಗಳೂ ಇತ್ಯಾದಿಗಳು ಅಭಿವೃದ್ಧಿ ಹೊಂದಿದ ಹಾಗೆ ಮಂತ್ರಿ ತಿಲಕನಿಂದ ಅರಸನಿಗೆ ಐಶ್ವರ್ಯವು ಹೆಚ್ಚಬೇಕು.

॥ ೨೬೨ ॥ ಆದ್ದರಿಂದ ಉತ್ತಮ ಸಚಿವನು ಅಂದರೆ ಪ್ರೌಢ ಮಂತ್ರಿಯುಳ್ಳ ಭೂಪಾಲಕನ ಪದವಿ ಶುಕ್ಲಪಕ್ಷದ ಚಂದ್ರನ ಹಾಗೆ ದಿನ ದಿನವೂ ಪ್ರವರ್ಧಮಾನ ವಾಗುವದು.

॥ ೨೬೪ ॥ ಮನದ ಸಂದೇಹ ವೆಂಬ ತಿಮಿರ ಅಂದರೆ ಅಂಧಕಾರವು. ಪರೆದುದು, ಹರಿತು. ವಿವೇಕವೆನಿಸುವ ಬಿಸುಲು ಪ್ರಸರಿಸಿತು ಮುಖವೆಂಬ ಕಮಲವು ಅರಳಿತು. ತನ್ನ ಮನಸ್ಸೂ ಅವನ ಮನಸ್ಸೂ ಯೆಂಬ ಚಕೋರಗಳೆರಡೂ ಮೋದಾದವು. ಭೂವರನ ಸುಜ್ಞಾನವೆಂಬ ಸೂರ್ಯೋದಯ ವಾದ್ದರಿಂದ ಯಿದೆಲ್ಲಾ ಆಯಿತೆಂಬರ್ಥವು.

॥ ೨೬೫ ॥ ಓಷಧೀಶ್ವರಂ, ಚಂದ್ರನು. ಬೆಳ್ವಳಗಿನ ಬಾಳ್ವೆಯಂತಳ್ವದೆ, ಶುಭ್ರಕಾಂತಿಯು ವೃದ್ಧಿಯನ್ನು ಹೊಂದದೆ ಬಾಂಬೊಲದೊಳು, ಆಕಾಶದಲ್ಲಿ. ಅರುಣ. . . . ಶ್ವಿನಂ, ಯಜ್ಞೇಶ್ವರನ ಕಿರಣ ಶಿಖೆಗಳಿಂದ ಹುಟ್ಟಿ ಬರುತ್ತಿರುವ ಇನಂ, ಸೂರ್ಯನನ್ನು ನೋಡಿ ವ್ಯಸನದಿಂದಲೋ ಯೆನ್ನುವಹಾಗೆ ತೇಜೋಹೀನನಾದನು.

ಪದ್ಯ ಸಂಖೆ.

|| ೩೬೬ || ಅಪರಾಜಿತ ಕುಮುದಿನಿ, ಪ್ರಕಾಶಿಸುವ ಕನ್ನೈದಿಲೆ ಯೆಂಬ ಹೆಂಗಸು. ಎನಗೆ. ರಾಜ ಸಹಾಯವು, ಧೊರೆಯ ಸಹಾಯವು ಮತ್ತು ಚಂದ್ರ ಸಹಾಯವು ತಪ್ಪಿತು ಯೆಂದು ಕುರ್ಗಿಹೋದಳು.

|| ೩೬೭ || ಮೊದಲು ನನ್ನ ಸಿರಿಯನ್ನು ನೋಡಿ ಯಿದು ಕಣ್ಣುಮುಚ್ಚಿತಲ್ಲ. ಆದ್ದರಿಂದ ಈಗ ನಾನು ಕಣ್ಣುಮುಚ್ಚುತ್ತೇನೆಂದು ಕುಮುದಂ, ಕನ್ನೈದಿಲೆ ಕಣ್ಣುಮುಚ್ಚಿತು ಅಂದರೆ ಮುಕುಳೀ ಭಾವ ಹೊಂದಿತು.

|| ೩೬೮ || ವಿಧುವಿರಹಿಣಿ, ಚಂದ್ರನು ಯಿಲ್ಲದ್ದು. ಮತ್ತು ಪತಿ ವಿಯೋಗವಾದದ್ದು. ಅಸಿತಾಂಭೋಜಂ, ಕೆಪ್ಪುಕಮಲ.

|| ೩೬೯ || ನನಗೆ ಆಗದ ಕಮಲವನ್ನು ಮನೆ ಮಾಡಿಕೊಂಡು ಸಿರಿಯಿದ್ದಾಳಲ್ಲ ಯೆಂಬ ಕೋಪವು ಚಂದ್ರನಿಗೆ ವುಂಟೆಂದು ರಾತ್ರಿ ಮುಚ್ಚಿಕೊಂಡು ಅವನಿಲ್ಲದ ಕಾಲದಲ್ಲಿ ಅಂದರೆ ಹಗಲು ಕಣ್ಣು ಬಿಟ್ಟಿತೋ ಯಂಬಂತೆ ಕಮಲವು ವಿಕಸನೆ ಯಾಯಿತು.

|| ೩೭೦ || ರಾತ್ರಿ ಶತೃವಾದ ಇಂದೀವರ ಅಂದರೆ ನೈದಿಲೆಯಲ್ಲಿರುತ್ತಾ ಅದು ಕೋಪ ಮಾಡಿದ್ದರಿಂದ ತುಂಬಿಗಳು ನನ್ನ ಹತ್ತಿರ ಬೆಳಿಗ್ಯೆ ಬರಲು ಕಮಲಗಳು ಮುಂಚಿನಹಾಗೆಯೇ ವಿಶ್ವಾಸವಾಗಿ ಅಂಗೀಕರಿಸಿತಲ್ಲ ಇದು ಯುಕ್ತವೇಸರಿ ಗುಣಜ್ಞರು ತಮ್ಮ ಆಶ್ರಿತರಲ್ಲಿ ದೋಷಗಳಂ ಹುಡುಕುವದಿಲ್ಲ.

|| ೩೭೧ || ದಿನವೆಂಬ ಲಕ್ಷ್ಮಿಯು ಕನಕದಭರಣಿಯಿಂದ ಇಂದ್ರನೀಲಸರವನ್ನು ದಿನಪನಿಗೆ ಕೊಡಲು ತೆಗಿಯುತ್ತಾಳೊ ಯಂಬಂತೆ ಮಧುಕರಮಾಲೆ, ಭ್ರಮರಪಂಕ್ತಿಯು ನೆಗಿಯುವದು.

|| ೩೭೨ || ನೀರಿನ ಬಿಂದುಗಳಿಂದ ವ್ಯಾಪ್ತವಾದ ತಾವರೆ ಯೆಲೆಗಳ ಮೇಲೆ ನೀರು ಚಿಮಿಕಿಸಿದ ಹಾಗೆ ಯಿರಲು ಪುಷ್ಪಗಳು ಹ್ಯಾಗಿದ್ದವೆಂದರೆ ನೆನೆ ನಿ ಕೆಲವು ತಟ್ಟೆಗಳನ್ನು ಹಂಸಗಳ ಔತಣಕ್ಕೆ ಇಟ್ಟಳೆಂನ್ನುವಹಾಗೆ.

|| ೩೭೩ || ಅಲರ್ದಂಭೋಜಪೆ. ಪಾಡುವಸರವು, ಭ್ರಮರಗಳಿಂದಲೂ ಒಟ್ಟು ಕ್ರೀಡಿಸುವ ಮುದ್ದು ಹಂಸೆಗಳಿಂದಲೂ ಸೊಗಸಾದ ವಾಸ

ಪದ್ಯ ಸಂಖ್ಯೆ.

ನೆಯಿಂದಲೂ ಯೊಗಾಳಿಯಿಂದಲೂ ಲಕ್ಷ್ಮೀದೇವಿಯು ವಾ
ಯು ಹಾಗಿತ್ತು.

|| ೩೭೪ || ಇದರಲ್ಲಿ ಸರೋವರವು ಸಮುದ್ರದಹಾಗೆ ಯಿತ್ತೆಂದು ಯು
ಡರ್ಥವುಳ್ಳ ಗುಣವಾಚಕವನ್ನು ಪ್ರಯೋಗಿಸಿ ಯಿರುತ್ತಾ
ಮೊದಲನೇದು ಸಮುದ್ರಪರ. ಯೆರಡನೇದು ಸರಸ್ಸಿಗೆ. ಪ
ಮತತಿ, ಹವಳದಬಳ್ಳಿ, ವೃಕ್ಷಗಳ ಸಮೂಹ. ಪದ್ಮರಾಗ
ಪದ್ಮರಾಗ ರತ್ನಗಳು. ಕಮಲ ಕಾಂತಿ, ಸಿತಾಬ್ಜ, ಶುಭ್ರವಾ
ಶಂಖಗಳು, ಬಿಳೀಕಮಲಗಳು. ಮುಕ್ತಾ, ಮುತ್ತುಗಳು.
ಮರಗಳು.

|| ೩೭೫ || ಮೂಡಣಗಿರಿ, ಉದಯ ಪರ್ವತ. ಸಂಧ್ಯಾರಾಗ ಹ್ಯಾಗಿ
ದರೆ ಸುರ ವರಕರಿ, ಐರಾವತವು. ಮುರಿದು ಹಾಕಿದ ನಂದ
ನದ ರಸಾಲವೆಂದರೆ ಮಾವಿನ ಚಿಗುರಿನಹಾಗೆ ಯಿತ್ತು

|| ೩೭೬ || ಖಾಂಡವವನವನ್ನು ಅರ್ಜುನನು ದಹಿಸಿದ ಬಾಣಜ್ವಾಲೆ
ರೀತಿಯಾಗಿ ಪ್ರಕಾಶಿಸುತ್ತಿದೆ ಯೆಂಬುವಹಾಗೂ ಯಿತ್ತು.

|| ೩೭೭ || ಹರಿದಿಕ್ಪಣಪಥು, ಪೂರ್ವದಿಕ್ಕು ಯೆಂಬ ವೇಶ್ಯಾಸ್ತ್ರೀ
ಹಿಮಕರ ಖರಕರರು, ಚಂದ್ರ ಸೂರ್ಯರು. ಬರಲು, ನಿ
ಯಾಗಿ ಅನುರಕ್ತತೆಯನ್ನು ತೋರಿಸುತ್ತಾಳಲ್ಲ. ವೇ
ಯರು ದುಡ್ಡಿಗೆ ಆಶೆಪಟ್ಟು ಕಠಿನಗುಣ ಮೃದುಗುಣ ವು
ನ್ನು ಸಮಾನವಾಗಿ ನೋಡುತ್ತಾರಲ್ಲ ಯೆಂದು ಆಶ್ಚರ್ಯವು.

|| ೩೭೮ || ಉದಿತಖರ ಕರಕಿರಣ, ಸೂರ್ಯನ ಕಿರಣಗಳು. ವಿಷ್ಣು ವಿ
ಮಸ್ಕರಿಸಿದ ತ್ರಿಪುರಾಸುರರ ಕಿರೀಟಗಳೊಂದೊಂದು ಪೊ
ದ್ದ ಕನಕ ಪರಾಗದಂತೆ ಯಿತ್ತು..

|| ೩೭೯ || ಪರಿಕಲಿತಾ . . . ಬಂ, ಸೂರ್ಯಮಂಡಲವು. ಐಂದ್ರೀವಧು
ಕೊರಳಲ್ಲಿ ಕಟ್ಟಿದ ಮಾಂಗಲ್ಯದಲ್ಲಿನ ರತ್ನ ಪದಕದಹಾಗೆ
ತ್ತು.

|| ೩೮೦ || ಪರಿರಕ . . . ಬಂ, ಸೂರ್ಯಬಿಂಬವು. ಸುಧಾಕರನು
ಟ್ಟಿದ ಸಮುದ್ರ ಪಾನಮಾಡಿದ ಬಡಬಾಗ್ನಿಯ ಪಿಂಡದ
ಯಿಂಪಾಗಿ ಯಿತ್ತು.

|| ೩೮೧ || ಕೆಂಪೆಳಗು. ಕೌಸುಂಭವಸ್ತ್ರದಹಾಗೆಯಿತ್ತು. ಸೂರ್ಯಬಿಂ

ಪದ್ಯ ಸಂಖೆ.

ಪೂರ್ವದಿಕ್ಕೆಂಬ ಸ್ತ್ರೀಯುವಸ್ತ್ರದ ಜರ್ತಾರಿ ಯೆನ್ನುವಹಾಗೆ ಯಿತ್ತು.

॥ ೩೮೨ ॥ ಅಂಬರರಮೆ, ಅಂತರಿಕ್ಷವೆಂಬ ಸ್ತ್ರೀ. ನೋಡುವದಕ್ಕಾಗಿ ಕೊಬಟ್ಟಿಯು ಗೌಸಣಿಗೆಯನ್ನು ತೆಗದ ರತ್ನಕನ್ನಡಿಯೋ ಯೆಂಬಂತೆ ಸೂರ್ಯಬಿಂಬವು ಪ್ರಕಾಶಿಸಿತು. ಅಂಬರಮಣಿಬಿಂಬಂ, ಸೂರ್ಯಬಿಂಬವು.

॥ ೩೮೪ ॥ ಪುಲ್ಲೆ, ಹುಲ್ಲೆ. ಸೈರಿಭ, ಕಾಡೆಮ್ಮೆ. ಕೇಸರಿ, ಸಿಂಹ. ತರಕ್ಷು, ಹುಲಿ. ತರಕ್ಷುಸ್ತು ಮೃಗಾದನಃ ಯೆಂದಮರವು. ಆ ವನಾಂತದಲ್ಲಿ ಇದ್ದವೆಂದು ಶೇಷವು.

॥ ೩೮೫ ॥ ಹಸ್ತಿ, ಆನೆ. ತನ್ನ ಮರಿ ಪಸಿದು ಬರೆ ತಾನು ಮೊಲೆ ಕೊಡಸಿದ್ಧವಾಗಿದ್ದಾಗ ಅಂಗ ಸಂಗಮಕ್ಕೆ, ಸಂಭೋಗಕ್ಕೆ ಗಂಡಾನೆ ಸಿದ್ಧವಾಗಲು. ಜವದಿಂ, ವೇಗದಿಂದ. ಮುಂದಕ್ಕೆ ಹೋಗಿ ಸಮೀಪದಲ್ಲಿನ ಚಿಗುರನ್ನು ಬಾಯಿಯಲ್ಲಿ ತೆಗದು ಪ್ರೀತಿ ಹೆಚ್ಚಿತು ಆದ್ದರಿಂದ, ಗಂಡನಿಗಿಂತಲೂ ಸುತನ ಮೇಲೆ ಪ್ರೀತಿ ಹೆಚ್ಚಲ್ಲವೇ ಯೆಂಬುವದು.

॥ ೩೮೬ ॥ ಕೊಳದಲ್ಲಿ ಮಿಂದು ಸಂಕ ಜರಜಂಗಳನ್ನಂಗದಲ್ಲಿ ಪೊಟ್ಟಿಕೊಂಡು ಯಿರುವ ಹಸ್ತಿಯ ಎಡೆಗೆ ಮುಂಕಳಿಸಿ ಗುಂಪಾಗಿ ಮದೋದಕಕ್ಕೆ ಬರುವ ಮರಿದುಂಬಿಗಳುಳ್ಳ ಆನೆಯು ಮುತ್ತಿನ ಮಾಲೆಯನ್ನು ಹೊಸುತ್ತದೋ ಯೆನ್ನುವಹಾಗೆ ವಾಷ್ಪಣಾಘವು, ನೀರಿನ ಬಿಂದುಗಳು ಪ್ರಕಾಶಿಸಿದವು

॥ ೩೮೭ ॥ ರುಂದ್ರಪುಷ್ಕರಂ, ಸುಂದರವಾದ ಸೊಂಡ್ಲದ ಕೊನೆಯು. ಪುಷ್ಕರ, ಬಿಕೀ ಇಮಲಪೋಪಾದಿಯಲ್ಲಿರಲು ಭ್ರಮರಗಳು. ಭ್ರಾಂತಿಯಿಂದ ಹೊಗಲು ಅದು ಘೀತ್ಕರಿಸಲು ಸಂಣ ಬಿಂದುಗಳು ಪ್ರೊಪ್ಪಿರಲು ಮನ್ಮಥನ ತುಪಾಕಿಯಿಂದೇಳ್ವ ಧೂಮದಹಾಗೆಯೂ ಗುಂಡಿನಹಾಗೆಯೂ ವಿರಾಜಿಸಿತು, ಪ್ರಕಾಶಿಸಿತು.

॥ ೩೮೮ ॥ ಆನೆಯು ಪ್ರೀದು ಮರಗೊಂಬನ್ನು ಮುರಿಯುವ ಕಾಲದಲ್ಲಿ ಆ ವೇಗದಿಂದ ಮತ್ತೊಂದು ಕೊಂಬು ಬೀಳಲು ಆನೆಯು ಘೀತ್ಕರಿಸಿ ಭಯಪಟ್ಟು ಶೋಕ ರಸವನ್ನು ತಾಳ್ದುದು. ವೃಥಾ

ಪದ್ಯ ಸಂಖೆ

ಅನ್ಯರಿಗೆ ಶ್ರಮೆಯನ್ನು ಕೊಟ್ಟರೆ ತನಿಗೆ ಅಪಮಾನ
ವದಿಲ್ಲವೇ?

॥ ೩೪೯ ॥ ಕಾನನಂ, ಅರಣ್ಯವು. ಅಟವ್ಯರಣ್ಯಂ ವಿಪಿನಂ ಗಹನಂ
ನನಂ ವನಂ ಯೆಂದಮರವು. ಸರಿಯಿಂ, ದರಿಯಿಂ, ಗುಹೆ
ದಲೂ. ಜರಿಯಿಂ, ಝುರತೆಗಳಿಂದಲೂ. ಲುಬ್ಧಕ ಪ್ರಕರ
ಬೇಟೆಗಾರರ ಸಮೂಹದಿಂದ. ಕರಂ, ಚೆನ್ನಾಗಿ, ಎಸದು

॥ ೩೫೦ ॥ ಅರಣ್ಯವು ಛಂದಶ್ಶಾಸ್ತ್ರದಂತೆ ಯಿತ್ತು. ಹ್ಯಾಗಂದರೆ ಹರಿ
ಜಿಂಕೆ, ಈವೃತ್ತ. ಮತ್ತೇಭ ವಿಕ್ರೀಡಿತ, ಮದ್ದಾನೆಗಳ
ಈವೃತ್ತ. ಲಲಿತ, ಸುಂದರವಾದ, ಈವೃತ್ತ. ಮಯೂರ
ವಿಲು, ಮಯೂರವೃತ್ತ. ಹೀಗೆ ಯಿತ್ತು. ಮತ್ತು ಸಮ
ದಹಾಗೆ ಯಿತ್ತು. ಪುಂಡರೀಕ, ಕಮಲ, ಹುಲಿ, ಹರಿ,
ನೆ, ಸಿಂಹ. ಮತ್ತು ಅಂತರಿಕ್ಷದಾಹಾಗೆ, ಇತ್ತು. ಭಾರದ
ಋಷಿ, ಪಕ್ಷಿ. ಶಾಂಡಿಲ್ಯ, ಶುಕ, ಅಗಸ್ತ್ಯ, ಪಕ್ಷಿ, ಋಷಿ
ವುಗಳನ್ನು ಸಂದರ್ಭಾನುಸಾರ ಅನ್ವಯಿಸಬೇಕು.

॥ ೩೫೧ ॥ ಹರಿಯಿಂ, ಸಿಂಹದಿಂದಲೂ ಕಾಡು ಹಂದಿಗಳಿಂಲೂ ಸರ್ಪ
ದಲೂ ಯೆಂದರ್ಥವು.

॥ ೩೫೨ ॥ ಚಂದ್ರಶಿಲಾಕಾಂತದಲ್ಲಿ ಮೃಗೇಂದ್ರನು ತನ್ನ ಪಡಿನೆ
ಅಂದರೆ ಪ್ರತಿಛಾಯೆಯನ್ನು ಕಂಡು ಕೋಪಿಸಿ ಘುರ್ಜಿ
ಮೇಘು ಗರ್ಜನೆ ಆಗಲು ಅದೂ ಘರ್ಜಿಸಿತೆಂದು ನೆನಸಿ
ದರೆಪಟ್ಟು ಸತ್ತು ಹೋಯಿತು. ಆದ್ದರಿಂದ ಶುದ್ಧರಲ್ಲಿ
ದೋಷವನ್ನು ಆರೋಪೀಸಿದರೆ ಮನುಷ್ಯರು ಕೆಟ್ಟು
ಗುವದಿಲ್ಲವೇ?

॥ ೩೫೩ ॥ ಅಭ್ರಕಾಯಂ, ಮೇಘವೋಪಾದಿಯಲ್ಲಿ ಶರೀರವುಳ್ಳಂಥಾ
ತ್ಸುಕಾಯಂ, ಅತ್ಯುತ್ಸಾಹದಿಂದ ಕೂಡಿದ. ಪೃಥುಮ
ಕಾಯಂ, ಅಧಿಕವಾದ ಕಾಡೆಮ್ಮೆಗಳ ಸಮೂಹವು. ವ
ಲ್ಲಂ, ಚಿಗುರಾದ ಹುಲ್ಲನ್ನು ತಿಂದು. ಮಧ್ಯಾನ್ಹದಲ್ಲಿ ಬಿಸ
ದ ಬೆನ್ನುಹತ್ತುತ್ತಿರಲು ಪಲ್ವಲಾಂಭಃಪ ವದಿ, ಸರೋ
ನೀರಿನಲ್ಲಿ ಮುಳಿಗಿ. ತತ್ಕರ್ದಮಂ, ಆ ಕೆಸರನ್ನು ಹತ್ತಿಸಿ
ಡು ಅವ್ವಳಿಸುತ್ತಾ ಯಿದ್ದವು.

ಪದ್ಯ ಸಂಖೆ.

॥ ೩೯೪ ॥ ಏಕ್ಕಲನು, ಹುಲಿಯು. ಪಜ್ಜೆ, ಹೆಜ್ಜೆ. ಫೇನಂ, ಬಾಯಿನಿಂದ ಸೋರುವ ಬುರುಗು, ಹಸ್ತಿಮಸ್ತಕಂ ಆನೆಯ ತಲೆಯುಲ್ಲಿನ ಮುತ್ತುಗಳು ತುಂಬಿಯಿಥೆ.

॥ ೩೯೫ ॥ ಸರ್ಪ, ಸಂಚರಿಸುವ. ಪೋಪುವ ಪೊಲಂ, ನೋಡುವ ಶಶಪ್ರ. ವೃಕಂ, ತೋಳಪ್ರ. ಪಾರ್ವ, ಹಾರ್ವ. ಬ್ಯೇಟೆಗಾರರ ವಾದ್ಯ ಧ್ವನಿಯು ಉಣ್ಕಿದು, ಉಂಟಾಗಿಯಿತ್ತು.

॥ ೩೯೬ ॥ ನಾಯಿಗಳನ್ನುಬಿಡು, ತೊಡುಸರಳ್ಗಳನು, ಬಾಣಗಳನ್ನು ತೊಡು ಇಂಥಾ ರವಂ, ಧ್ವನಿಯು. ಅರಣ್ಯದಲ್ಲಿ, ಪಿರಿದಾಯ್ತು ಹಿರಿದಾಯಿತು.

॥ ೩೯೭ ॥ ಇದರಲ್ಲಿ ಪ್ರತಿ ವೊಂದು ಮೃಗಕ್ಕೂ ವೊಂದು ಸಂಕೇತ ಮಾಡಿದರು. ಅದು ಹ್ಯಾಗೆಂದರೆ ಚಮರೀ ಮೃಗಕ್ಕೆ ನುಣುಪಾದ ಕೂದಲುನ್ನು ಆನೆಗೆ ನೀಟಾದ ಸೊಂಡ್ಲವನ್ನು, ಕೊಂಬಿನ ಮೃಗವ್ರಜಕ್ಕೆ ಬಿರ್ಪೆಲರಂ, ಬಿರಿಡು ಬೆರಳುನ್ನು, ಈ ಮುಂತಾದ ಸನ್ನೆಗಳನ್ನು ಬೇಟೆಗಾರರು ಮಾಡಿಕೊಂಡರು.

॥ ೩೯೮ ॥ ಕಿಡಿ ಹುಟ್ಟುತ್ತಿರಲು ದಾಡೆಯನ್ನು ಮಸೆದು ಇತ್ಯಾದಿ ಲಕ್ಷಣಗಳೊಡನೆ ವೊಂದೆಕ್ಕಲಂ ಬಂತು.

॥ ೩೯೯ ॥ ಕಿರಾತನು, ಬ್ಯಾಡನು. ಹೋಗದಿರೆಂದು ಗರ್ಜಿಸಿದಾಗ್ಯೂ ಕಾಲನ ಸೈರಿಭ, ಯಮನ ಮಹಿಷದಂತೆ ಬಂದ ವೊಂದು ಯಮ್ಮೆಯನ್ನು ವೊಬ್ಬನು ಕೊಂದನು.

॥ ೪೦೦ ॥ ಕಟ್ಟೆದಿರಲ್ಲಿ, ಯೆದುರಾಗಿ. ತರಕ್ಷು ಗರ್ಜಿಸಲು. ತರ್ಕ್ಷಾಯ ತಾಕ್ಷಿಯಾದ ಶಬರ ಸ್ತ್ರೀಯು ಕೆಂಗೆಟ್ಟು, ಭಯಪಟ್ಟು. ಅಪ್ಪಲು, ಅಪ್ಪಿಕೊಳ್ಳಲು. ಅಂಜದಿರೆನುತ್ತಾ ಅವಳಂ ಬಿಗಿದಪ್ಪಿ ಕೊಂಡಿರ್ದನಿಂ, ಸಮೀಪಕ್ಕೆ ಬರಲು ಅಲ್ಲಿಯೇ ನಿಂತುಕೊಂಡು ಖಡ್ಗದಿಂದ ನೆಲಕ್ಕೆ ಬೀಳುವಹಾಗೆ ಶಬರಾಧಿನಾಯಕನು ಅದನ್ನು ಕೆಡವಿದನು.

ತಾತ್ಪರ್ಯ ಸೂಚಕ ಟಿಪ್ಪಣೀ

ಸಮಾಪ್ತಾ.